"ಹೇಮಾವತಿ ಮತ್ತು ಹಂಸಗೀತೆ: ಒಂದು ತೌಲನಿಕ ಅಧ್ಯಯನ"

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ
ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಸಂಪ್ರಬಂಧ.

ಸಂಶೋಧಕರು
ಲೋಕೇಶ.ಬಿ.ಟಿ.

ಮಾರ್ಗದರ್ಶಕರು
ಡಾ.ಡಿ.ಜಿ.ರಮೇಶ್
ಮುಖ್ಯಸ್ಥರು, ಕನ್ನಡ ವಿಭಾಗ,
ಎ.ಟಿ.ಎನ್.ಸಿ. ಕಾಲೇಜು,
ಶಿವಮೊಗ್ಗ.

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ,
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
೨೦೦೯

"ಹೇಮಾವತಿ ಮತ್ತು ಹಂಸಗೀತೆ: ಒಂದು ತೌಲನಿಕ ಅಧ್ಯಯನ"

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ
ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಸಂಪ್ರಬಂಧ:

ಸಂಶೋಧಕರು
ಲೋಕೇಶ.ಬಿ.ಟಿ.

ಮಾರ್ಗದರ್ಶಕರು
ಡಾ.ಡಿ.ಜಿ.ರಮೇಶ್
ಮುಖ್ಯಸ್ಥರು, ಕನ್ನಡ ವಿಭಾಗ,
ಎ.ಟಿ.ಎನ್.ಸಿ. ಕಾಲೇಜು,
ಶಿವಮೊಗ್ಗ.

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ,
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
೨೦೦೯

ಪ್ರಮಾಣ ಪತ್ರ

"ಹೇಮಾವತಿ ಮತ್ತು ಹಂಸಗೀತೆ: ಒಂದು ತೌಲನಿಕ ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಸಲ್ಲಿಸಲು ಡಾ. ಡಿ.ಜಿ.ರಮೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಲಾಗಿದೆ.

ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇತರೆ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

(ಲೋಕೇಶ.ಬಿ.ಟಿ)
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ,
ಕನ್ನಡ ವಿಶ್ವ ವಿದ್ಯಾಲಯ, ಹಂಪಿ,
ತೀರ್ಥಹಳ್ಳಿ ತಾ॥, ಶಿವಮೊಗ್ಗ ಜಿಲ್ಲೆ.

ದಿನಾಂಕ: 28/08/08

ಸ್ಥಳ: ಕುಪ್ಪಳಿ.

ದೃಢೀಕರಣ ಪತ್ರ

ಶ್ರೀ ಲೋಕೇಶ.ಬಿ.ಟಿ. ಇವರು "ಹೇಮಾವತಿ ಮತ್ತು ಹಂಸಗೀತೆ: ಒಂದು ತೌಲನಿಕ ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿಯ ಕನ್ನಡ ವಿಶ್ವ ವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರವ ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

(ಡಾ.ಡಿ.ಜೆ.ರಮೇಶ್)
ಮುಖ್ಯಸ್ಥರು, ಕನ್ನಡ ವಿಭಾಗ,
ಎ.ಟಿ.ಎಸ್.ಸಿ. ಕಾಲೇಜು
ಶಿವಮೊಗ್ಗ.

ದಿನಾಂಕ: 29/09/2009

ಸ್ಥಳ: ಶಿವಮೊಗ್ಗ.

ಪರಿವಿಡಿ

ಅಧ್ಯಾಯ-೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ	೧-೬
ಅಧ್ಯಾಯ-೨ ಕಾದಂಬರಿ ಇತಿಹಾಸ, ಸ್ವರೂಪ ಮತ್ತು ತಾತ್ವಿಕ ನೆಲೆಗಳು	೭-೧೯
ಅಧ್ಯಾಯ-೩ ಗೊರೂರು ಮತ್ತು ತ.ರಾ.ಸು: ಬದುಕು-ಬರಹ	೨೦-೩೪
ಅಧ್ಯಾಯ-೪ ತೌಲನಿಕ ಪರಿಕಲ್ಪನೆಗಳು	೩೫-೪೬
ಅಧ್ಯಾಯ-೫ ಹೇಮಾವತಿ ಮತ್ತು ಹಂಸಗೀತೆ: ತೌಲನಿಕ ಸಮೀಕ್ಷೆ	೪೭-೮೦
೫.೧ ವಸ್ತು ನಿರ್ವಹಣೆ	
೫.೨ ಸನ್ನಿವೇಶ ನಿರ್ಮಾಣ	
೫.೩ ಭಾಷೆ ಮತ್ತು ತಂತ್ರ	
೫.೪ ಪಾತ್ರ ವಿಶ್ಲೇಷಣೆ	
ಅಧ್ಯಾಯ-೬ ಸಮಾರೋಪ	೮೧-೮೨
ಅಧ್ಯಾಯ-೭ ಅನುಬಂಧಗಳು	೮೩-೮೯
೧. ಆಕರಗ್ರಂಥಗಳು	
೨. ಪರಾಮರ್ಶನಗ್ರಂಥಗಳು	

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ವಸಾಹತುಶಾಹಿ ಅನುಭವದ ಹಿನ್ನೆಲೆಯಲ್ಲಿ ವಸಾಹತೋತ್ತರ ಭಾರತದ ಹಾಗೆಯೇ ಕರ್ನಾಟಕದ ಸಂದರ್ಭದ ಮಟ್ಟಿಗೆ ತಾತ್ವಿಕತೆ, ಚಿಂತನೆ, ಯೋಚನೆ, ಆಲೋಚನೆ, ಮೌಲ್ಯ, ನಂಬಿಕೆ ಸಿದ್ಧಾಂತಗಳು ಹೊಸ ಹೊಸ ರೂಪ ಪಡೆದದ್ದು ಸಹಜವಾದಷ್ಟೇ ಕುತೂಹಲಕಾರಿಯೂ ಆಗಿದೆ. ಅಂತೆಯೇ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಈ ಎಲ್ಲಾ ವಲಯಗಳಲ್ಲಿ ಉಂಟಾದ ಬದಲಾವಣೆಗಳು ನಮ್ಮೆದುರಿಗಿನ ಪ್ರಶ್ನೆಗಳನ್ನ ಮತ್ತು ಸವಾಲುಗಳನ್ನ ಅರಿತುಕೊಳ್ಳುವಲ್ಲಿ ನಂತರ ಅದನ್ನರಗಿಸಿಕೊಂಡು ಸ್ವೀಕರಿಸುವಲ್ಲಿ, ಸ್ವೀಕರಿಸಿ ಪ್ರತಿಕ್ರಿಯಿಸುವುದರಲ್ಲಿ ನಮಗೆ ಹೊಸ ಬಗೆಯ ಆಳವಾದ ಅನುಭವದ ದಾರಿತೋರಿದವು. ವಸಾಹತುಶಾಹಿ ಮುಷ್ಠಿಯಿಂದ ಬಿಡಿಸಿಕೊಂಡು ಬಂದ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಔದ್ಯೋಗಿಕ ಸ್ವಾತಂತ್ರವೆಂಬುದು ಒಟ್ಟಂದದಲ್ಲಿ ಸಾಮಾಜಿಕ ಬದಕನ್ನು ಹೊಸ ದಿಕ್ಕಿನಲ್ಲಿ ಆಲೋಚಿಸಿ ಆ ದಿಕ್ಕಿನಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿತು. ಎಂಬುದು ನಿರ್ವಿವಾದ ಸತ್ಯ ಸಂಗತಿ.

ಎಂದೂ, ಯಾವತ್ತೂ, ಯಾವುದೇ ಸಾಹಿತ್ಯದಲ್ಲಿ ಸಮಕಾಲೀನ ಸ್ಪಂದನದ ನಂಟಿನ ಛಾಯೆ ಸಹಜವಾಗಿಯೇ ಚಿತ್ರಿತವಾಗಿರುತ್ತದೆ. ಜಾಗತೀಕರಣ, ಔದ್ಯೋಗಿಕರಣ, ಕೈಗಾರಿಕೀಕರಣ, ಆಧುನಿಕತೆಯ ಪ್ರಕ್ರಿಯೆಗಳಿಗೆ ಭಾರತೀಯ ಹಲವು ಭಾಷಾ ಸಾಹಿತ್ಯಗಳಂತೆ ಕನ್ನಡ ಸಾಹಿತ್ಯ ಪ್ರಪಂಚವು ಸ್ವೀಕರಣ ಮತ್ತು ನಿರಾಕರಣದ ನೆಲೆಯಲ್ಲಿ ಆ ಎಲ್ಲಾ ಹೊಸ ಆಲೋಚನಾ ಪ್ರಕ್ರಿಯೆಗಳಿಗೆ ಪ್ರತಿಕ್ರಿಯಿಸಿದೆ. ಆಧುನಿಕ ಕನ್ನಡ ಸಾಹಿತ್ಯ ತನ್ನ ಮಡಿಲಲ್ಲಿ ಜಾಗತಿಕ ವಿದ್ಯಮಾನಗಳನ್ನು ಹಂತಹಂತವಾಗಿ ಕಾಲಕ್ಕೆ ಅನುಗುಣವಾಗಿ ಅರಗಿಸಿಕೊಂಡು ಅರ್ಥೈಸುವ ಕಾರ್ಯ ಮಾಡಿದೆ. ಈ ಆಧುನಿಕತೆಯೊಂದಿಗೆ ಹರಿದು ಬಂದ ಹೊಸ ಅನುಭವದ ತಿಳಿವುಗಳು ಹೊಸ ಪರಂಪರೆಯ ಕಟ್ಟುವಲ್ಲಿ ಪೂರಕವಾದವು. ಆ ಸಂದರ್ಭದಲ್ಲಿ ನಮ್ಮ ಎಲ್ಲಾ ಕನ್ನಡ ಸಾಹಿತ್ಯ ಲೇಖಕಕರು ತಮ್ಮ ತಮ್ಮ ಮನೋಧೋರಣೆಗೆ ತಕ್ಕಂತೆ ಈ ಎಲ್ಲಾ ವಿದ್ಯಾಮಾನಗಳ ಸಂಗತಿಗಳಿಗೆ ಸ್ಪಂದಿಸಿದ್ದಾರೆ. ತತ್ಕಾಲೀನ ಸಂದರ್ಭಕ್ಕೆ ಅನುಗುಣವಾದ,

ಅವಶ್ಯಕವಾದ, ಅರ್ಥಪೂರ್ಣ ಅಂಶಗಳನ್ನ ಸ್ವೀಕರಿಸಿ, ಅನವಶ್ಯಕವೆನಿಸಿದನ್ನು ನಿಷ್ಠೂರತೆಯಿಂದ ತಿರಸ್ಕರಿಸಿದ್ದಾರೆ. ಈ ಎಲ್ಲಾ ಅಂಶ ಮೌಲ್ಯಗಳ ಮೂಲಕ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ವಲಯಗಳಲ್ಲಾದ ಒಳಿತು ಕೆಡಕುಗಳನ್ನ, ಆತಂಕ ತಲ್ಲಣಗಳನ್ನ, ದ್ವಂದ್ವ ಸ್ಥಿತ್ಯಂತರಗಳನ್ನ ಸಾಹಿತ್ಯದ ಮೂಲಕ ಗುರುತಿಸಿ ವಿಶ್ಲೇಷಿಸುವ ಕಾರ್ಯ ಮಾಡುತ್ತಾರೆ. ಚಳುವಳಿ ಸಿದ್ಧಾಂತಗಳ ಮೂಲಕ ಪ್ರತಿಭಟನೆ, ಹೋರಾಟಗಳ ಮೂಲಕ ಚರಿತ್ರೆಯಲ್ಲಿ ದಾಖಲಿಸುವ ಪ್ರಯತ್ನ ಕಾರ್ಯ ಮಾಡಿದ್ದಾರೆ ಎಂಬುದು ಗಮನಾರ್ಹ.

ಈ ಎಲ್ಲಾ ಅಂಶಗಳನ್ನು ಗರ್ಭೀಕರಿಸಿಕೊಂಡ ಕನ್ನಡ ಸಾಹಿತ್ಯ ಹಲವು ಪ್ರಭೇಧಗಳನ್ನ ರೂಪಿಸಿಕೊಂಡು ಬೆಳೆದು ಬಂದಿದೆ. ಈ ತೆರೆನಾದ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಪ್ರಕಾರವು ಕೂಡ ಪಾಶ್ಚಿಮಾತ್ಯ ಶಿಕ್ಷಣ, ಸಂಸ್ಕೃತಿ, ಆಲೋಚನೆಗಳಿಂದ ರೂಪುಗೊಂಡು ಬೆಳೆದು ನಿಂತಿದೆ. ಕನ್ನಡ ಕಾದಂಬರಿ ಹಾಗೂ ಅದರ ಬೆಳವಣಿಗೆಯನ್ನು ಕುರಿತಂತೆ ಅನೇಕ ಅಧ್ಯಯನ ಮತ್ತು ಸಂಶೋಧನೆಗಳು ಸಾಕಷ್ಟು ಸಮೃದ್ಧವಾಗಿ ನಡೆದಿವೆ. ಈ ಅಧ್ಯಯನ ಮತ್ತು ಸಂಶೋಧನಾ ಕ್ಷೇತ್ರಕ್ಕೆ ನನ್ನ ಬರವಣಿಗೆ ಕಿಂಚಿತ್ತಾದರೂ, ಪ್ರಯೋಜನಕಾರಿಯಾಗಬಲ್ಲದೆಂದು ನಾನು ಭಾವಿಸುತ್ತೇನೆ. ಅಧ್ಯಯನಕ್ಕೆ ಅರ್ಹವೆಂದು ನಾನು ಭಾವಿಸಿರುವ ಗೊರೂರು ರಾಮಸ್ವಾಮಿ ಅಯ್ಯಂಗಾರ 'ಹೇಮಾವತಿ' ಮತ್ತು ತ.ರಾ.ಸು ರವರ 'ಹಂಸಗೀತೆ' ಕಾದಂಬರಿಗಳನ್ನ "ಹೇಮಾವತಿ ಮತ್ತು ಹಂಸಗೀತೆ:ಒಂದು ತೌಲನಿಕ ಅಧ್ಯಯನ" ಎಂಬ ಶೀರ್ಷಿಕೆಯಡಿಯಲ್ಲಿ ಆಯ್ಕೆ ಮಾಡಿಕೊಂಡಿದ್ದೇನೆ.

ಕಾದಂಬರಿ ದಿಗ್ಗಜರುಗಳಲ್ಲಿ ಗೊರೂರು ಎಂದೇ ಖ್ಯಾತನಾಮರಾದ ಗೊರೂರು ರಾಮಸ್ವಾಮಿ ಅಯ್ಯಂಗಾರರು ಹಾಗೆಯೇ ತ.ರಾಸು. ಎಂದು ಖ್ಯಾತರಾದ ತ.ರಾ.ಸುಬ್ಬರಾಯರು ಮುಖ್ಯರು. ಇವರಿಬ್ಬರು ಒಂದೇ ಕಾಲಘಟ್ಟದ ಕಾದಂಬರಿಕಾರರಲ್ಲ ಗೊರೂರು ನವೋದಯ ಕಾಲಘಟ್ಟದವರಾದರೆ, ತ.ರಾ.ಸು ನಂತರ ಬಂದ ಪ್ರಗತಿಶೀಲ ಕಾಲಘಟ್ಟದ ಕಾದಂಬರಿಕಾರರು. ಗೊರೂರರು ಹಳ್ಳಿಗಾಡಿನ ಜನಪದ ಹಾಗೂ ಸಾಮಾಜಿಕ ಕಥಾವಸ್ತುವಿನ ಮೂಲಕ ಅಭಿವ್ಯಕ್ತಿಸುವ ಕೆಲಸ ಮಾಡಿದರೆ, ತ.ರಾ.ಸು ಪುರಾಣ, ಇತಿಹಾಸ,

ಸಾಮಾಜಿಕ ವಸ್ತುವಿನ ಮೂಲಕ ಅಭಿವ್ಯಕ್ತಿಸುವ ಕೆಲಸ ಮಾಡುತ್ತಾರೆ. ಗೊರೂರು ಮತ್ತು ತ.ರಾ.ಸು ಇವರೀರ್ವರ ಹೇಮಾವತಿ ಮತ್ತು ಹಂಸಗೀತೆ ಕಾದಂಬರಿಗಳಲ್ಲಿ ಸಂಗೀತವನ್ನೇ ಪ್ರಧಾನವಾಗಿಸಿಕೊಂಡು ಆ ಹಿನ್ನೆಲೆಯಲ್ಲಿಯೇ ಅಧ್ಯಯನ ನಡೆಸುವ ಉದ್ದೇಶವನ್ನು ಹೊಂದಲಾಗಿದೆ. ಅದಕ್ಕೂ ಮುನ್ನ ಈ ಕಾದಂಬರಿಗಳ ಅಧ್ಯಯನಕ್ಕೆ ಕಾರಣ ಪ್ರೇರಣೆಗಳನ್ನು ಸ್ಪಷ್ಟಪಡಿಸ ಬಯಸುತ್ತೇನೆ. ಗೊರೂರು ಕನ್ನಡ ಸಾಹಿತ್ಯದ ಶ್ರೇಷ್ಠ ಬರಹಗಾರರೆಂದು ವರ್ಣಿಸಿದರು ಅವರ ಕಾದಂಬರಿಗಳ ಪೂರ್ಣ ಪ್ರಮಾಣದ ಸ್ಥೂಲ ಅಧ್ಯಯನ ಈ ವರಗೆ ಆಗದಿರುವುದು ದೊಡ್ಡ ಆಶ್ಚರ್ಯ, ಆತಂಕವೇ ಸರಿ ಎಂದೆನಿಸುತ್ತದೆ. ಅಲ್ಲೊಂದು ಇಲ್ಲೊಂದು ಎಂಬಂತೆ ನಮ್ಮ ವಿಮರ್ಶಾ ಜಗತ್ತು ಗೊರೂರರ ಕಾದಂಬರಿ ಹಾಗೂ ಇನ್ನುಳಿದ ಕೃತಿಗಳ ಕೆಲವು ಮುಖಗಳನ್ನೇಷ್ಟೇ ತಡಕಾಡಿ ತನಗೆ ದಕ್ಕಿದಷ್ಟನ್ನು ಮೆಚ್ಚಿಯೋ, ಗೊಣಗಿಯೋ ಮುಂದೆಸಾಗಿದೆ, ಒಂದು ಪೂರ್ಣದೃಷ್ಠಿ ಅಧ್ಯಯನ ಗೊರೂರು ಕಾದಂಬರಿಗಳ ಮೇಲೆ ನಡೆದಿಲ್ಲ. ಅಂತೆಯೇ ತ.ರಾ.ಸು ಕಾದಂಬರಿ ಪ್ರಪಂಚದಲ್ಲಿ ವಿಮರ್ಶಾ ಜಗತ್ತಿನ ಪ್ರಶಂಸೆಗೆ ಅಗ್ರಗಣ್ಯರಾದರೂ ಅವರ ಹಂಸಗೀತೆ ಕೃತಿಯ ಮೇಲೆಯೂ ಸಹ ಆ ಮಟ್ಟಿನ ಅಧ್ಯಯನ ನಡೆದಿಲ್ಲ ಎಂಬುದು ನನ್ನ ಭಾವನೆ. ಎಲ್ಲಕ್ಕಿಂತ ಮುಖ್ಯವಾಗಿ ಗೊರೂರು ಮತ್ತು ತ.ರಾ.ಸು ಭಿನ್ನ ತಲೆಮಾರಿನ, ಭಿನ್ನ ದೃಷ್ಟಿಕೋನಗಳ ಇವರಿಬ್ಬರೂ ತಮ್ಮ ಕೃತಿಗಳಲ್ಲಿ ಸಂಗೀತದ ಬಗೆಗೆ ತಳೆದ ನಿಲುವುಗಳನ್ನು ಆ ಬಗೆಗಿನ ವಸ್ತು ನಿರ್ವಹಣೆಯನ್ನು ತೌಲನಿಕವಾಗಿ ಅಧ್ಯಯನ ನಡೆಸುವ ಪ್ರಯತ್ನ ಮಾಡಲಾಗಿದೆ.

'ಹೇಮಾವತಿ', 'ಹಂಸಗೀತೆ' ಕೃತಿಗಳಲ್ಲಿ ಸಂಗೀತದ ಹೂರಣ ಹೊಂದಿಕೊಂಡು ನಿರೂಪಿತಗೊಂಡರೂ ಗೊರೂರು ಮತ್ತು ತ.ರಾ.ಸು ಇವರಿಬ್ಬರೂ ತಳೆದ ನಿಲುವುಗಳು ಭಿನ್ನವಾಗಿದೆ. ಇವೆರಡೂ ಕಾದಂಬರಿಗಳ ವಸ್ತು ಸಂಗೀತ ಪ್ರಧಾನವೇ ಆದರೂ ರೂಪುಗೊಂಡ ನೆಲೆ ಬೇರೆಯಾದುದು. ಗೊರೂರು ನವೋದಯ ಕಾಲಘಟ್ಟದವರಾದರು ಹೇಮಾವತಿಯಲ್ಲಿ ಒಂದು ದಲಿತ ಬದುಕು ಸಾಧನೆ ಹಾದಿಯೆಡೆಗೆ ಸಾಗುವ ಮತ್ತು ಎಲ್ಲಾ ಸಾಂಪ್ರದಾಯಿಕ ಮೌಲ್ಯಗಳನ್ನ ಬದಿಗೊತ್ತುವ ಕ್ರಿಯೆ ಹಾಗೂ ಪ್ರಗತಿಪರ ಧೋರಣೆ ನಿಲುಗಳನ್ನು ಹೊಳೆಯಿಸುವ ಕಾದಂಬರಿ. ಹಾಗೆಯೇ ತ.ರಾ.ಸು ಪ್ರಗತಿಶೀಲ ಕಾಲಘಟ್ಟದವರಾದರು ತೀರ

ಮೌಲ್ಯವೆನಿಸುವ ಒಬ್ಬ ಬ್ರಾಹ್ಮಣ ಸಾಧನೆ ಹಾದಿ ಹಿಡಿವ ಸಂಪ್ರದಾಯ ಬದ್ಧವಾಗಿ ಪ್ರಕಟಿಸುವ ನಿಲವುಗಳ ಮೇಲೆ ಸಮೀಕ್ಷೆ ನಡೆಸುವ ಹಾಗೂ ಇವುಗಳ ನಡುವಿನ ಭಿನ್ನತೆಗಳನ್ನು ಸಾದೃಶೀಕರಿಸಿ ಸಾಮ್ಯ ವೈಶಮ್ಯಗಳನ್ನು ಗುರುತಿಸುವ ಉದ್ದೇಶ ಹೊಂದಲಾಗಿದೆ.

ಗೊರೂರು ಮತ್ತು ತ.ರಾ.ಸು ರವರ ಈ ಕೃತಿಗಳು ಆಯಾ ಲೇಖಕರ ಪ್ರಾದೇಶಿಕತೆ, ಸಂಸ್ಕೃತಿ, ಪರಂಪರೆಯನ್ನು ಪರಿಚಯಸಿಕೊಡುತ್ತದೆ. ಈ ಕೃತಿಗಳ ರಚನೆಗೆ ಅವುಗಳ ಹಿಂದಿರುವ ಪ್ರೇರಣೆ-ಪ್ರಭಾವಗಳು ಅಲ್ಲಿಯ ಪರಿಸರವನ್ನೇ ಪ್ರತಿನಿದಿಸುತ್ತದೆ. ಈ ಹಿನ್ನೆಲ್ಲೆಯಲ್ಲಿ ಕೃತಿಗಳನ್ನು ವಿಶ್ಲೇಷಿಸಲು ಸಾಧ್ಯ. ಇವರಿಬ್ಬರ ಲೋಕದೃಷ್ಠಿ ಜೀವನದೃಷ್ಠಿ ಮೌಲ್ಯಗಳು ಬೇರೆ ಬೇರೆ ಇವೆರಡು ಕಾದಂಬರಿಗಳು ಹೇಗೆ ವಿಭಿನ್ನ ಸ್ವರೂಪ ಪಡೆದು ಚಲಿಸುತ್ತಾ ಹೋಗುತ್ತವೆ ಎಂಬುದನ್ನು ಪರಿಶೀಲಿಸುವುದು ನನ್ನ ಅಧ್ಯಯನದ ಉದ್ದೇಶವಾಗಿದೆ. ಹಾಗೆಯೇ ವಸ್ತುವಿನ ಆಯ್ಕೆಯಲ್ಲಿ ಕೆಲವು ಸಾಮ್ಯತೆ ತೋರಿದ ಕಾದಂಬರಿಕಾರರು ವಸ್ತು ನಿರ್ವಹಣೆ, ಸನ್ನಿವೇಶನಿರ್ಮಾಣ, ಭಾಷೆಮತ್ತುತಂತ್ರ, ಪಾತ್ರವಿಶ್ಲೇಷಣೆ ಮುಂತಾದ ಸೃಜನಶೀಲ ಪರಿಕರಗಳನ್ನು ತುಲನೆ ಮಾಡಿ ನೋಡುವ ಉದ್ದೇಶ ಹೊಂದಲಾಗಿದೆ.

ಹೇಮಾವತಿ ಮತ್ತು ಹಂಸಗೀತೆ ಕಾದಂಬರಿಗಳು ಸಂಗೀತ ಸಾಧನೆಯ ಹಂತದ ಹೋರಾಟ ಎರಡು ಊರಿನ ಸಾದೃಶೀಕರಣವಾಗಿದೆ. ಹೇಮಾವತಿ ತನ್ನೂರ ಪರಿಸರದೊಂದಿಗೆ ಗ್ರಾಮ ಜೀವನದೊಂದಿಗೆ ಅನುಸಂಧಾನ ನಡೆಸಿದರೆ ಹಂಸಗೀತೆ ಚಿತ್ರದರ್ಗುದ ಇತಿಹಾಸದೊಂದಿಗೆ ಅಲ್ಲಿಯ ಪರಿಸರದೊಂದಿಗೆ ಅನುಸಂಧಾನ ನಡೆಸುತ್ತದೆ. ಇವುಗಳ ಮೂಲಕ ಕೌಟುಂಬಿಕ ಆವರಣದೊಳಗೆ ನಡೆಯುವ ಜಂಜಾಟಗಳು ಸಂಗೀತ ಸಾಧನೆಯ ಹಾದಿಯಲ್ಲಿ ಒದಗುವ ಅನಾಹುತ, ದುರಂತಗಳ ಮೂಲಕ ಯಶಸ್ವಿನೆಡೆಗೆ ತಿರುವು ಪಡೆಯುತ್ತವೆ. ಎಂಬ ವಿಷಯಗಳ ಅಧ್ಯಯನ ಅವಶ್ಯಕವಾಗಿದೆ. ಹೇಮಾವತಿ ಜಾತಿ ವ್ಯವಸ್ಥೆಯ ಬಗೆಗೆ ಒಂದು ಸಂಪ್ರಾದಯ ಮನಸ್ಥಿತಿಗಳ ಸಮುದಾಯದ ವಿರುದ್ಧದ ನಡುವೆ ಹೊಸ ಹೊಳಹುಗಳನ್ನು ನೀಡುವ ಶ್ರೇಷ್ಟತೆ ಪಡೆದಿದೆ. ಹಂಸಗೀತೆ ವ್ಯಕ್ತಿಯ ಆಂತರ್ಯದ ತಾಕಲಾಟ, ಮನಸ್ಸುಗಳ ಜಿಜ್ಞಾಸೆ, ಬೌದ್ಧಿಕ ಚರ್ಚೆ, ವೆಂಕಟಸುಬ್ಬಯ್ಯನ ಸಾಧನೆ ನಿರಂತರವಾಗಿ ಕಾಡುವ ಸಮಸ್ಯೆಗಳನ್ನು ಗ್ರಹಿಸುವುದರಲ್ಲಿ ಚಲಿಸುತ್ತದೆ.

ಹೇಮಾವತಿ ಸಾಂಪ್ರದಾಯಿಕ ಮೌಲ್ಯಗಳ ವಿರೋಧಿಸುವ ಸಾಮಾಜಿಕ ಹಾಗೂ ಕೌಟುಂಬಿಕ ವ್ಯವಸ್ಥೆಯಲ್ಲಿ ಎದುರಾಗುವ ತೊಡಕುಗಳುನ್ನು ಮುಖಾಮುಖಿಯಾಗಿಸಿದರೆ, ಹಂಸಗೀತೆ ಬದುಕಿನ ಅರ್ಥಪೂರ್ಣ ಶೋಧ, ಸಂಗೀತಕ್ಕಿರುವ ಮೌಲ್ಯ, ಮಾನವೀಯ ಆದರ್ಶ ಗುಣಗಳ ಹೂರಣ ಹೊತ್ತ ಗಮನಾರ್ಹ ಕೃತಿಯಾಗಿದೆ. ಇಂತಹ ,ಮೌಲ್ಯಪೂರ್ಣ ಅಧ್ಯಯನ ತುಂಬಾ ಅನಿವಾರ್ಯವಾಗಿದೆ.

ಪ್ರಸ್ತುತ ಪ್ರಬಂಧವು ಏಳು ಮುಖ್ಯ ಅಧ್ಯಾಯಗಳಲ್ಲಿ ವಿಸ್ತೃತಗೊಂಡಿದೆ ಮೊದಲ ಅಧ್ಯಾಯ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಗೆ ಸಂಬಂಧಿಸಿದ್ದು ಇದು ವಿಷಯದ ಆಯ್ಕೆ ಹಾಗೂ ಅಧ್ಯಯನದ ವಿಧಾನಗಳ ಮೇಲೆ ಬೆಳಕು ಚೆಲ್ಲುತ್ತದೆ. ಎರಡನೇಯ ಅಧ್ಯಾಯ ಕಾದಂಬರಿ ಪ್ರಕಾರದ ಇತಿಹಾಸ ಮತ್ತು ತಾತ್ವಿಕ ನಿಲುವುಗಳ ಕುರಿತ ಸ್ಥೂಲ ಚಿತ್ರಣ ನೀಡಲಾಗಿದೆ. ಮೂರನೇ ಅಧ್ಯಾಯ ಗೊರೂರು ಮತ್ತು ತ.ರಾ.ಸು ಬದುಕು–ಬರಹ ಬಗೆಗೆ ಸಮೀಕ್ಷೆ ಮಾಡಲಾಗಿದೆ. ಇಬ್ಬರು ಲೇಖಕರ ಬದುಕು–ಬರಹ ವಿವಿಧ ಸ್ಥರಗಳ ಸಂಕ್ಷಿಪ್ತ ಮಾಹಿತಿ ಸಂಗ್ರಹಿಸಿ ದಾಖಲಿಸಲಾಗಿದೆ. ನಾಲ್ಕನೇಯ ಅಧ್ಯಾಯದಲ್ಲಿ ತೌಲನಿಕ ಪರಿಕಲ್ಪನೆಗಳು ಅದರ ಸಮಸ್ಯೆಗಳ ಕುರಿತ ಪರಿಚಯ ನೀಡಲಾಗಿದೆ. ವಸ್ತುನಿರ್ವಹಣೆ, ಸನ್ನಿವೇಶನಿರ್ಮಾಣ, ಭಾಷೆ ಮತ್ತು ತಂತ್ರ, ಪಾತ್ರವಿಶ್ಲೇಷಣೆ ಹೇಮಾವತಿ ಮತ್ತು ಹಂಸಗೀತೆಯಲ್ಲಿ ಹೇಗೆ ವ್ಯಕ್ತವಾಗಿದೆ ಎಂದು ಇವುಗಳ ಸಾರಗ್ರಹಿಸಿ ವಿವಿಧ ದೃಷ್ಟಿಕೋನಗಳಿಗೆ ಅವಕಾಶ ಕಲ್ಪಸಲಾಗಿದೆ. ಪ್ರಸ್ತುತ ಪ್ರಬಂಧದ ಐದನೇಯ ಅಧ್ಯಾಯವನ್ನು "ಹೇಮಾವತಿ ಮತ್ತು ಹಂಸಗೀತೆ: ತೌಲನಿಕ ಸಮೀಕ್ಷೆ" ಎಂಬ ಶೀರ್ಷಿಕೆಯಡಿಯಲ್ಲಿ ಈ ಎರಡು ಕೃತಿಗಳ ತುಲನೆಗಾಗಿ ಮೀಸಲಿಡಲಾಗಿದೆ.

ಆರನೇ ಅಧ್ಯಾಯ ಸಮಾರೋಪದಲ್ಲಿ ಮೊದಲ ಅಧ್ಯಾಯದಲ್ಲಿ ಸೂಚಿಸಿದ ಅಧ್ಯಯನ ಕ್ರಮಗಳ ಫಲಶೃತಿಗಳನ್ನು ಇದುವರೆಗಿನ ಅಧ್ಯಯನಕ್ಕೆ ದೊರೆತ. ಬಹುಮುಖ ಚಿಂತನಾಶೀಲ ಕ್ರಮಗಳನ್ನು ಗುರುತಿಸಲಾಗಿದೆ. ಏಳನೇ ಅಧ್ಯಾಯ ಅನುಬಂಧದಲ್ಲಿ ಆಧಾರಗ್ರಂಥಗಳು ಈ ಅಧ್ಯಯನಕ್ಕೆ ಆಕರವಾದ ಪ್ರಮುಖ ಗ್ರಂಥ ಮತ್ತು ಲೇಖನಗಳ ಪಟ್ಟಿಯನ್ನು ಕೊಡುವ ಮೂಲಕ ಗ್ರಂಥಋಣ ಸ್ಮರಿಸಲಾಗಿದೆ.

ಒಟ್ಟಾರೆಯಾಗಿ "ಹೇಮಾವತಿ ಮತ್ತು ಹಂಸಗೀತೆ:ಒಂದು ತೌಲನಿಕ ಅಧ್ಯಯನ" ಎಂಬ ಶೀರ್ಷಿಕೆಯ ಅಡಿಯಲ್ಲಿ ಮಂಡಿಸಲಾದ ಪ್ರಸ್ತುತ ಪ್ರಬಂಧ ಹೊಸಜ್ಞಾನ, ಮತ್ತು ಚಿಂತನಾ ಸಾಧ್ಯತೆಗಳಿಗೆ ಅನುವು ಮಾಡಿಕೊಟ್ಟಿದೆ ಎಂಬುದು ನನ್ನ ಭಾವನೆ. ಸ್ವಂತಿಕೆ ಹಾಗೂ ಎರವಲು ಜ್ಞಾನ ಶಿಸ್ತುಗಳನ್ನು ಬಳಸಿಕೊಂಡಿದ್ದೇನೆ ಯಾವುದೇ ಉತ್ತಮ ಕೃತಿ ಆಯಾ ಕಾಲ ಸಂದರ್ಭಕ್ಕೆ ಪ್ರತಿ ಓದಿಗೂ ಕೂಡ ಹೊಸ ಹೊಳಹು, ಹೊಸ ಚಿಂತನೆಗಳಿಗೆ ಅನುವು ಮಾಡಿಕೊಡುತ್ತವೆ ಎಂಬುದು ನನ್ನ ನಿಲುವು. ನಿರ್ದಿಷ್ಟ ಮಾನದಂಡ ಯಾವುದೇ ಸಾಹಿತ್ಯ ಕೃತಿಗಿಲ್ಲ ಎಂಬುದು ನನ್ನ ಅಭಿಪ್ರಾಯ.

ಅಧ್ಯಾಯ-೨

ಕಾದಂಬರಿ ಇತಿಹಾಸ, ಸ್ವರೂಪ ಮತ್ತು ತಾತ್ವಿಕನೆಲೆಗಳು

ಇಪ್ಪತ್ತನೆಯ ಶತಮಾನದ ಆರಂಭದ ಕಾಲವು ಕನ್ನಡ ಸಾಹಿತ್ಯಕ್ಕೆ ಒಳ್ಳೆಯ ಆರಂಭದ ಕಾಲವಾಗಿದೆ. ಏಕೆಂದರೆ ಹತ್ತನೆಯ ಶತಮಾನದಿಂದ ಹದಿನೆಂಟನೆಯ ಶತಮಾನದವರಗೆ ಅತ್ಯಂತ ಕ್ರಿಯಾಶೀಲವಾಗಿದ್ದ ಸಾಹಿತ್ಯವಾಹಿನಿ ಹತ್ತೊಂಬತ್ತನೆಯ ಶತಮಾನದಲ್ಲಿ ಷೀಣಗತಿಯಲ್ಲಿ ಚಲಿಸಲಾರಂಭಿಸಿತು. ಅಲ್ಲೋಬ್ಬರು ಇಲ್ಲೋಬ್ಬರು ಪ್ರತಿಭಾವಂತ ಕವಿಗಳು ಆ ಅವಧಿಯಲ್ಲಿ ಕಾಣಿಸಿಕೊಂಡಿದ್ದರೂ ಒಟ್ಟಾರೆ ಸಾಹಿತ್ಯದ ಚಿತ್ರ ತುಂಬಾ ಮಂಕಾಗಿತ್ತು. ಹತ್ತೋಂಬತ್ತನೇಯ ಶತಮಾನದ ಮಧ್ಯಭಾಗದ ಹೊತ್ತಿಗೆ ಕನ್ನಡಿಗರಿಗೆ ಇಂಗ್ಲೀಷ್ ಭಾಷೆ, ಸಾಹಿತ್ಯ ಮತ್ತು ವಿಚಾರಗಳ ಸಂಪರ್ಕವುಂಟಾಗಿ ಸಾಹಿತ್ಯ ರಚನೆಯ ದಿಕ್ಕು ಬದಲಾಗತೊಡಗಿತು. ಆದ್ದರಿಂದ ಕನ್ನಡದಲ್ಲಿ ಹೊಸಬಗೆಯ ಸಾಹಿತ್ಯ ಸೃಷ್ಟಿಗೆ ಮುಖ್ಯ ಪ್ರೇರಣೆ ಒದಗಿ ಬಂದಿತು. ಇಂಗ್ಲೀಷ್ ವಿದ್ಯಾಭ್ಯಾಸದಿಂದ ಸಾಹಿತ್ಯದ ಮಟ್ಟಿಗೆ ಮುಖ್ಯವಾಗಿ ಎರಡು ಪರಿಣಾಮಗಳುಂಟಾದವು ಮೊದಲನೆಯದು ಹೊಸದೊಂದು ಜೀವನ ಮನೋಧರ್ಮದ ದರ್ಶನವಾದದ್ದು ಎರಡನೇಯದು ಹೊಸದೊಂದು ಸಾಹಿತ್ಯ ಜಗತ್ತೇ ನಮಗೆ ಲಭ್ಯವಾದದ್ದು.

ಹೊಸಗನ್ನಡ ಸಾಹಿತ್ಯದ ಇತಿಹಾಸವನ್ನು ಗಮನಿಸದಾಗ ಬೇರೆ ಬೇರೆ ಮನೋಧೋರಣೆಗೆ ಅನುಗುಣವಾಗಿ ಬೇರೆ ಬೇರೆ ಕಾಲಘಟ್ಟದಲ್ಲಿ ಸಾಹಿತ್ಯ ತನ್ನ ರೂಪ ಸ್ವರೂಪ ಬದಲಾಯಿಸಿದ್ದು ಕಾಣುತ್ತದೆ. ಹೊಸಗನ್ನಡ ಸಾಹಿತ್ಯದ ಬೇರೆ ಬೇರೆ ರೂಪಗಳಲ್ಲಿ ಕಾದಂಬರಿ ಪ್ರಕಾರವೂ ಒಂದು ೧೮೭೫ ರಿಂದ ೧೯೩೦ರ ವರೆಗಿನ ಕಾಲವನ್ನು ಕನ್ನಡ ಕಾದಂಬರಿಯ ಉದಯಕಾಲವೆಂದು ಗುರುತಿಸಲಾಗಿದೆ.

ಕಾದಂಬರಿ ಎಂಬ ಪದವನ್ನು ನಾವು ಇಂಗ್ಲೀಷ್‌ನ Novel ಎಂಬ ಪದಕ್ಕೆ ಸಮನಾರ್ಥವಾಗಿ ಬಳಸುತ್ತಿದ್ದೇವೆ. ಮೊದಲು ನಮ್ಮಲಿ ಆ ಪದ ಬಳಕೆ ಬರತೊಡಗಿದ್ದು ವೆಂಕಟಚಾರ್ಯರವರ ಹಲವು ಬಂಗಾಳಿ ಕಥಾನಕಗಳು ಕನ್ನಡದಲ್ಲಿ ಪ್ರಚಾರಕ್ಕೆ ಬರತೊಡಗಿದಾಗ, ಕಾದಂಬರಿ ಬಹು ಜನಪ್ರಿಯವಾದ ಸಾಹಿತ್ಯ ಮಾಧ್ಯಮ. ಇಂದಿನ ವೈಜ್ಞಾನಿಕ ಯುಗದಲ್ಲಿ ತಾಂತ್ರಿಕ ಕ್ರಾಂತಿಯಿಂದ ಸಂಭವಿಸಿದ ಜೀವನದ ಬಹುಮುಖ

ಸೌಲಭ್ಯಗಳನ್ನು, ಸಮಸ್ಯೆಗಳನ್ನು, ಸಂಕೀರ್ಣತೆಗಳನ್ನು ಬಹುಶಃ ಇತರ ಎಲ್ಲಾ ಪ್ರಕಾರಗಳಿಗಿಂತ ಹೆಚ್ಚು ಶಕ್ತವಾಗಿ ಕಾದಂಬರಿ ಚಿತ್ರಿಸಬಲ್ಲದು. ನಮ್ಮ ಅನುಭವದ ಪರಧಿಯನ್ನು ಹಿಗ್ಗಲಿಸುವುದರ ಜೊತೆಗೆ ಅನುಭವದ ಆಳಕ್ಕೆ ಕೊಂಡೊಯ್ದು ಮಾನವ ಸ್ವಭಾವದ ಎಲ್ಲಾ ಮುಖಗಳನ್ನು ವಾಸ್ತವತೆಯ ಹಿನ್ನೆಲೆಯಲ್ಲಿ ಚಿತ್ರಿಸುತ್ತದೆ. ಈ ಕಾರಣಕ್ಕಾಗಿಯೆ ಕುವೆಂಪು ಕಾದಂಬರಿಯನ್ನು "ಕರತಲ ರಂಗ ಭೂಮಿ" ಎಂದು ಕರೆದಿರ ಬಹುದೆನಿಸುತ್ತದೆ. ಕಾದಂಬರಿಯು ಮೂರು ಸಂಗತಿಗಳ ಸಂಯೋಜನೆಯಾಗಿದೆ. ಕಲ್ಪನೆ (Fiction), ಕಥನ (Naration), ಭಾಷೆ (Language) ಕಾದಂಬರಿಯನ್ನು ಗಮನಿಸಿದಾಗ ಸಂಕ್ಷೇಪತೆ ಮತ್ತು ಸುಧೀರ್ಘತೆ ಪ್ರಧಾನವಾಗಿ ಗೋಚರಿಸುತ್ತದೆ.

ಕಾದಂಬರಿ ಗದ್ಯ ಸಾಹಿತ್ಯ ಪ್ರಕಾರಗಳಲ್ಲಿ ವಿಶಿಷ್ಟವಾದದ್ದು. ಪಾಶ್ಚಾತ್ಯ ಸಾಹಿತ್ಯ ಪ್ರಭಾವ ಮತ್ತು ಅನುವಾದಗಳ ಮೂಲಕ ಬಂದಿತೆಂಬುದಾದ ವಿದ್ವಾಂಸರ ಏಕಭಿಪ್ರಾಯವಿದ್ದರೂ "ಕನ್ನಡದಲ್ಲಿ ಕಾದಂಬರಿಗಳು ಇದ್ದಿರಬಹುದಾದ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ ದೇಶಿ ಹಿನ್ನೆಲೆಯಿಂದ ಗಮನಿಸುವುದಾದರೆ ಕೆಂಪು ನಾರಾಯಣನ 'ಮುದ್ರಾಮಂಜೂಷ' ಎಂಬುದು ಕಾದಂಬರಿ ರಚನೆಗೆ ಬೇಕಾದ ಭಾಷಿಕ ವಿನ್ಯಾಸಗಳನ್ನು ಗೋಚರಿಸುವ ಮೊದಲ ಗ್ರಂಥವೆಂದು ಹೇಳಬಹುದಾಗಿದೆ. ಹಾಗೆಯೇ ಸಂಸ್ಕೃತ ಮತ್ತು ಕನ್ನಡ ಮಹಾಕಾವ್ಯಗಳ ಕಥಾನಕ ರೂಪಕಗಳು ಬಳಕೆಗೆ ಬಂದಿದ್ದವು. ಬಿ.ವೆಂಕಟಚಾರ್ಯರು ಮತ್ತು ಗಳಗನಾಥರು ಬಂಗಾಲಿ ಹಾಗೂ ಮರಾಠಿ ಕಾದಂಬರಿಗಳನ್ನು ಕನ್ನಡಕ್ಕೆ ಸರಗವಾಗಿ ಅನುವಾದಿಸಿದರು"[೧] ಸಣ್ಣಕಥೆಯಂತೆ ಕನ್ನಡಕ್ಕೆ ಕಾದಂಬರಿ ಪಾಶ್ಚಾತ್ಯರಿಂದ ಆಮದಾಗಿ ಬಂದರು ಕನ್ನಡದ ಮೊದಲ ಕಾದಂಬರಿಕಾರರು ಒಂದೆಡೆ ಹೊಸದೊಂದು ಸಾಹಿತ್ಯ ಪ್ರಕಾರವೊಂದನ್ನು ಪರಿಚಯಿಸುವುದಾದರೆ ಅದರ ಜೊತೆಗೆ ಈ ಪ್ರಕಾರದ ಬಗೆಗೆ ಓದುಗರಲ್ಲಿ ಆಸಕ್ತಿ ಮೂಡಿಸುವುದಾಗಿತ್ತು, ಬರಹಗಾರರು ಕಡಿಮೆಯಿದ್ದು ಓದುಗರ ಹೆಚ್ಚು ಆಕರ್ಷಿಸಿದ ಪ್ರಕಾರ ಕಾದಂಬರಿ ಆದ್ದರಿಂದಲೇ ಇದು ಮಧ್ಯಮವರ್ಗದ ಮಹಾ ಕಾವ್ಯ ಎನಿಸಿಕೊಂಡಿದೆ.

ಕನ್ನಡ ಕಾದಂಬರಿಯ ಪ್ರಾರಂಭದ ದಿನಗಳ ಗಮನಿಸಿದರೆ ಐತಿಹಾಸಿಕ ಕಥಾನಕವನ್ನುಳ್ಳ ಕಾದಂಬರಿಗಲ್ಲೇ ಹೆಚ್ಚು ಕಂಡು ಬರುತ್ತವೆ. ಇಲ್ಲೆಲ್ಲಾ ಸರಳ ಕಥಾನಿರೂಪಣೆ

ಮುಖ್ಯ ಉದ್ದೇಶವಾಗಿತ್ತು. ೧೮೫೭ ರ ಸರಿಸುಮಾರಿನಲ್ಲಿ ಪ್ರಕಟಗೊಂಡ ಡೇನಿಯಲ್ ಡಿಪೋನ 'ರಾಬಿಸನ್ ಕ್ರೂಸೋ'(೧೮೫೭) ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನುವಾದಗೊಂಡ ಮೊಟ್ಟಮೊದಲ ಕಾದಂಬರಿ. ಅನಂತರ 'ನಿರ್ಭಾಗ್ಯಮುರಾದ' (ಎಜವರ್ಥ/ ಬಾಪುಸುಬ್ಬರಾಯ), 'ಕನ್ಯಾವಿತಂತು' (ಎಚ್.ಟೇಲರ್/ಶ್ರೀಕಂಠೇಗೌಡ) 'ಸುಮತಿಮದನ ಕುಮಾರ ಚರಿತ್ರೆ' (ಥಾಮಸ್‌ಡೇ/ಎಂ.ಎಸ್.ಪುಟ್ಟಣ್ಣ) ಮೊದಲಾದ ಕೃತಿಗಳು ಕನ್ನಡಕ್ಕೆ ಅನುವಾದಗಳ ಮೂಲಕ ಬಂದವು. ನಂತರದಲ್ಲಿ ಬಂಗಾಲಿ ಮತ್ತು ಮರಾಠಿ ಕಾದಂಬರಿಗಳು ಕನ್ನಡಕ್ಕೆ ಬಂದವು ಅದರಲ್ಲೂ ಪ್ರಮುಖವಾಗಿ ಬಂಕಿಮಚಂದ್ರರ ಕೃತಿಗಳನ್ನು ವೆಂಕಟಚಾರ್ಯರು, ಹರಿನಾರಯಣರಅಪ್ಪೇಯವರ ಕಾದಂಬರಿಗಳನ್ನು ಗಳಗನಾಥರು ಅನುವಾದಿಸಿದರು ಅದೇ ಸಂದರ್ಭದಲ್ಲಿ ತೆಲುಗಿನಿಂದ ವೀರೇಶಲಿಂಗಪಂತಲು ಅವರ ಕೃತಿಗಳು ಕನ್ನಡಕ್ಕೆ ಅನುವಾದಗೊಂಡವು.

೧೮೯೨ರ ಅವಧಿಯಲ್ಲಿ ಕನ್ನಡ ಸ್ವತಂತ್ರ ಕಾದಂಬರಿಗಳು ಬಂದವು. ಈ ತರಹದ ಬೆಳವಣಿಗೆಗೂ ಮೊದಲು 'ಕಾದಂಬರಿ' ಎನ್ನಬಹುದಾದ ಅಂದರೆ ಇಂಗ್ಲೀಷ್ ಛಾಯೆ ಪಡಿಮೂಡದ ಮೂರು ಕೃತಿಗಳು ಪ್ರಕಟವಾಗಿದ್ದವು 'ಕಲಾವತೀಪರಿಣಯ'(೧೮೧೫), ಮುಮ್ಮಡಿಕೃಷ್ಣರಾಜರ 'ಸೌಂಗಧಿಕಾ ಪರಿಣಯ'(೧೮೨೧), ಕೆಂಪುನಾರಾಯಣನ 'ಮುದ್ರಾಮಂಜೂಷ'(೧೮೨೩), ತದನಂತರದಲ್ಲಿ ಜಾನ್ ಬನ್‌ಯಾನ್‌ನ 'ದಿ ಫಿಲ್‌ಗ್ರಿಮ್ಸ್ ಪ್ರೋಗೆಸ್'(೧೮೪೨), ಡೇನಿಯಲ್ ಡಿಪೋನ 'ರಾಬಿನ್‌ಸನ್‌ಕ್ರೂಸೋ' ಪದಮಂಜಿಯವರ 'ಯಮುನಾ ಪರ್ಯಟನ'(೧೮೯೯), ಬಂಕಿಮಚಂದ್ರರ 'ದುರ್ಗೇಶನಂದಿನಿ'(೧೮೮೫), ವಿರೇಶಲಿಂಗಪಂತಲು ಅವರ 'ವಿವೇಕಚಂದ್ರಿಕೆ'(೧೮೯೫), ಮುಳಿಯಿಲ್‌ರವರ 'ಸುಕುಮಾರಿ' (೧೮೯೯) ಎಂಬ ಹಲವಾರು ಕೃತಿಗಳು ಕನ್ನಡಕ್ಕೆ ಅನುವಾದ ರೂಪದಲ್ಲಿ ಮೈತಳೆದವು.

"ಲಕ್ಷ್ಮಣರಾವ್ ಗದಗಕರ ಅವರ 'ಸೂರ್ಯಕಾಂತ'ವನ್ನು ಕನ್ನಡದ ಮೊದಲನೆಯ ಸ್ವತಂತ್ರ ಕಾದಂಬರಿಯೆಂದು ಗುರುತಿಸಿಕೊಳ್ಳಲಾಗಿದೆ. ಗುಬ್ಬಿಮುರಿಗಾರಾಧ್ಯರ 'ಶೃಂಗಾರ ಚಾತುರ್ಯೋಲ್ಲಾಸಿನಿ'(೧೮೯೬), ಎಂ.ವೆಂಕಟಕೃಷ್ಣನಯ್ಯನವರ 'ಚೋರಗ್ರಹಣತಂತ್ರ' (೧೮೯೭), ಗಳಗನಾಥರ 'ಪ್ರಬುದ್ಧ ಪದ್ಮನಯನಾ'(೧೮೯೮), ಗುಲ್ವಾಡಿ ವೆಂಕಟರಾಯರ

‘ಇಂದಿರಾಬಾಯಿ’(೧೮೯೯), ಬೋಳಾರಬಾಬುರಾಯರ ‘ವಾಗ್ದೇವಿ’(೧೯೦೫), ಅಣ್ಣಾಜಿರಾಯರ ‘ರೋಹಿಣಿ’(೧೯೦೬), ಕೆರೂರು ವಾಸುದೇವಾಚಾರ್ಯರ ‘ಇಂದಿರೆ’ (೧೯೦೮), ಮೊದಲಾದ ಕೃತಿಗಳು ಆರಂಭಿಕ ಕನ್ನಡ ಕಾದಂಬರಿಗಳಾಗಿವೆ. ೧೮೨೩ ರಲ್ಲಿ ಪ್ರಕಟಗೊಂಡ ‘ಮುದ್ರಾಮಂಜೂಷ’ ಪ್ರಥಮ ಐತಿಹಾಸಿಕ ಕಾದಂಬರಿ ಎಂದೂ, ೧೮೯೭ ರಲ್ಲಿ ಪ್ರಕಟವಾದ ಎಂ.ವೆಂಕಟಕರಷ್ಣಯ್ಯನವರ ‘ಚೋರಗ್ರಹಣ ತಂತ್ರ’ ಮೊಟ್ಟಮೊದಲ ಪತ್ತೇದಾರಿ ಕಾದಂಬರಿ. ೧೮೯೯ ರಲ್ಲಿ ಪ್ರಕಟಗೊಂಡ ‘ಇಂದಿರಾಬಾಯಿ’ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿಯೆಂದೂ, ಗಳಗನಾಥರ ‘ಕುಮುದಿನಿ’(೧೯೧೩) ಕರ್ನಾಟಕ ಇತಿಹಾಸ ಕುರಿತ ಮೊದಲ ಕಾದಂಬರಿಯೆಂದು ಗುರುತಿಸಿಲಾಗಿದೆ.”[೨] ಸ್ವರೂಪ ದೃಷ್ಠಿಯಿಂದ ಮುದ್ರಾಮಂಜೂಷ ಕಾದಂಬರಿ ಒಪ್ಪಲಾಗವುದಿಲ್ಲವಾದರೂ, ಅಲ್ಲಿನ ಕಥನ ಮಾದರಿ ಕಾದಂಬರಿ ಬರವಣಿಗೆಗೆ ಹತ್ತಿರವಾಗಿದೆ. “ಕದಾಂಬರಿಯನ್ನು ಬರೆಯದಿದ್ದರೂ, ಆದರ ಬರವಣಿಗೆಗೆ ಕನ್ನಡ ಗದ್ಯವನ್ನು ಹದಗೊಳಿಸಿದ ಶ್ರೇಯಸ್ಸು ಕೆಂಪು ನಾರಾಯಣನಿಗೆ ಸಲ್ಲುತ್ತದೆ”[೩] ಎಂದು ಕೀರ್ತಿನಾಥ ಕುರ್ತಕೋಟಿ ಅಭಿಪ್ರಾಯ ಪಡುತ್ತಾರೆ.

ಮೇಲಿನ ಎಲ್ಲಾ ಕಾದಂಬರಿಗಳು ಸ್ವಾತಂತ್ರಪೂರ್ವ ಕಾಲಘಟ್ಟದವು ಅವುಗಳ ರಚನೆಯ ಹಿಂದಿನ ಸೈದಾಂತಿಕ, ತಾತ್ವಿಕ ನೆಲೆಗಳು ಆ ಹೊತ್ತಿಗಿನ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳ ರೂಪಗಳು ಪಡಿಮೂಡಿವೆ, ೧೯ನೇ ಶತಮಾನದ ಕೊನೆಯಲ್ಲಿ, ೨೦ನೇಶತಮಾನದ ಮೊದಲ ದಶಕದಲ್ಲಿ ಐತಿಹಾಸಿಕ ಮತ್ತು ಸಾಮಾಜಿಕ ವಸ್ತು ಆಧಾರಿತ ಕಥಾನಕಗಳು ಬಂದರೂ, ಐತಿಹಾಸಿಕ ಕಾದಂಬರಿಗಳೇ ಹೆಚ್ಚು ಓದುಗರನ್ನ ಆಕರ್ಷಿಸಿದವು. ಪ್ರಾರಂಭದಲ್ಲಿ ಕನ್ನಡಕ್ಕೆ ವೆಂಕಟಾಚಾರ್ಯ, ಗಳಗನಾಥರಿಂದ ಅನುವಾದಗೊಂಡ ಸ್ವತಂತ್ರ ಕೃತಿಗಳಲ್ಲೂ ಬಂಗಾಳಿ-ಮರಾಠಿ ಕೃತಿಗಳ ಛಾಯೆ ಕಂಡು ಬರುತ್ತದೆ. ಇಂತಹ ಪ್ರಭಾವಗಳಿಂದ ಸಂಪೂರ್ಣ ಬಿಡಿಸಿ ಕೊಂಡಂತೆ ಕಾಣುವ ಸ್ವತಂತ್ರ ಕಾದಂಬರಿ ಮೊದಲಿಗೆ ಎಂ.ಎಸ್.ಪುಟ್ಟಣನವರ ೧೯೧೫ರಲ್ಲಿ ಪ್ರಕಗೊಂಡ ಮಾಡಿದುಣ್ಣೋಮಹಾರಾಯ ಕಾದಂಬರಿ. ಬಂಕಿಮಚಂದ್ರರ ಹಾಗೂ ಹರಿನಾರಾಯಣಆಪ್ಟೇ ಯವರ ಕೃತಿಗಳಲ್ಲಿ ಸ್ವದೇಶಿ ಅಭಿಮಾನ, ಸ್ವಧರ್ಮನಿಷ್ಠೆ, ಸ್ವಭಾಷಾಪ್ರೇಮ ಸತ್ವಗಳು ಕನ್ನಡ ಕಾದಂಬರಿಯೊಳಗೆ ಕಂಡುಬಂದವು. ಈ

ಕಾಲಮಾನದ ಆದಿಭಾಗದಲ್ಲಿ ಹೊರಬಂದ ಸ್ವತಂತ್ರ ಕಾದಂಬರಿಕಾರರಲ್ಲಿ ಗಳಗನಾಥರ ಹೊರತು ಪಡಿಸಿ ಉಳಿದವರೆಲ್ಲಾ ಇಂಗ್ಲೀಷ್ ವಿದ್ಯಾಭ್ಯಾಸ ಹಾಗೂ ಸಾಹಿತ್ಯದಿಂದ ಪ್ರಭಾವಿತರಾದವರು. ಸ್ವಾತಂತ್ರಪೂರ್ವ ಅಂದರೆ ನವೋದಯಪೂರ್ವದಲ್ಲಿ (೧೯೨೦ಕ್ಕೂ ಮೊದಲು) ರಚನೆಗೊಂಡ ಕಾದಂಬರಿಗಳಿಗೆ ಅಂದಿನ ಭಾರತೀಯ ಸಾಮಾಜಿಕ ಸ್ಥಿತ್ಯಂತರಗಳಿಂದ ಉಂಟಾದ ಸಂಗತಿಗಳು ಕಾರಣವಾದವು.

೧೯ನೇ ಶತಮಾನದಲ್ಲಿ ಭಾತರದ ಸಾಮಾಜಿಕ ಜೀವನದಲ್ಲಾದ ಬದಲಾವಣೆಗಳನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ, ಹೊಸ ಬಗೆಯ ಅಭಿವ್ಯಕ್ತಿಯ ಅನಿವಾರ್ಯತೆಯಿಂದ ಕಾದಂಬರಿ ಪ್ರಕಾರ ರೂಪುಗೊಂಡಿತು. ಈ ಶತಮಾನದ ಉತ್ತರಾರ್ಧದಲ್ಲಿ ಬಂದ ಕಾದಂಬರಿಗಳು ರಮ್ಯಕಥೆಗಳನ್ನು ನಿರೂಪಿಸುತ್ತ, ಬದುಕಿನ ಆಗು ಹೋಗುಗಳನ್ನು ಚಿತ್ರಿಸುವುದಾಗಿತ್ತು. ಅಲ್ಲಿ ವಾಸ್ತವಕತೆಗೆ ಹೆಚ್ಚು ಒತ್ತು ನೀಡದಿದ್ದರು, ಸಾಮಾಜಿಕ ಜೀವನವನ್ನು ಪೂರ್ಣವಾಗಿ ಕಡೆಗಣಿಸಲಿಲ್ಲ. ಸಾಮಾಜಿಕ ಸುಧಾರಣೆಯ ದೃಷ್ಠಿಯಿಂದಾಗಿ ಕಾದಂಬರಿಗಳಲ್ಲಿ ನೀತಿಬೋಧನೆ ಪ್ರಮುಖವಾಯಿತು. ಹೀಗೆ ಇತಿಹಾಸ ವಸ್ತುಗಳನ್ನು ರಮ್ಯ ಕಥಾನಕ್ಕೆ ಅಳವಡಿಸಿಕೊಂಡಿದಿದು ಗಮನಾರ್ಹ ಸಂಗತಿ. "ಕನ್ನಡ ಮೊದಲ ಸಾಮಾಜಿಕ ಕಾಂದಬರಿಗಳಲ್ಲಿ ಎದ್ದು ಕಾಣುವ ಅಂಶವೆಂದರೆ ಅವುಗಳ ಸಮಕಾಲೀನ ಪ್ರಜ್ಞೆ ಮತ್ತು ಕಳಕಳಿ ಈ ಶತಮಾನದ ಪ್ರಾರಂಭದಲ್ಲಿ, ಹಿಂದೂ ಸಮಾಜದ ಜ್ವಲಂತ ಸಮಸ್ಯೆಗಳಾದ ಬಾಲ್ಯವಿವಾಹ ಮತ್ತು ವಿಧವಾವಿವಾಹ, ಮಠಾಧಿಪತಿಗಳ ಅನೈತಿಕತೆ ಮತ್ತು ನಿರುಂಕುಶತೆ, ಅಧಿಕಾರಿವರ್ಗದ ದರ್ಪ ಹಾಗೂ ಸ್ವಾರ್ಥ ಇವುಗಳಿಗೆಲ್ಲಾ ಈ ಕಾದಂಬರಿಗಳು ನೇರವಾಗಿ ತೀವ್ರವಾಗಿ ಸ್ಪಂದಿಸುತ್ತವೆ. ಆ ಸ್ಪಂದನದ ಹಿಂದೆ ಪತಿತ ಸಮಾಜವನ್ನು ಎತ್ತುವ ಚೊಕ್ಕಗೊಳಿಸುವ ಕಾಳಜಿಯಿದೆ.[೪]

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ನವೋದಯ ಪೂರ್ವಕಾದಂಬರಿಗಳಾದ 'ಇಂದಿರಾಬಾಯಿ', 'ವಾಗ್ದೇವಿ', 'ಇಂದಿರೆ', 'ಮಾಡಿದುಣ್ಣೋಮಹಾರಾಯ', ಕೃತಿಗಳು ಪ್ರಮುಖವೆನಿಸಿವೆ. ಇವುಗಳ ಅಧ್ಯಯನದಿಂದ ಅಂದಿನ ಕಾದಂಬರಿಗಳ ಸ್ವರೂಪ ತಾತ್ವಿಕನೆಲೆಗಳ ಗುರುತಿಸಲು ಸಾಧ್ಯ. ಮೊಟ್ಟಮೊದಲ ಸಾಮಾಜಿಕ ಕಾದಂಬರಿ ಎಂದು

ಗುರುತಿಸಲ್ಪಟ್ಟಿರುವ 'ಇಂದಿರಾ ಬಾಯಿ' ಯಲ್ಲಿ ಪರಂಪರಾಗತವಾಗಿ ಬಂದ ಧಾರ್ಮಿಕ ಕಟ್ಟಲೆಗಳ ಮೀರಿ ಬದುಕುವ ಹಂಬಲ ವಿಧವಾ ವಿವಾಹದಂಥ ಕ್ರಾಂತಿಕಾರಕ ವಿಚಾರಗಳನ್ನು ನಿರ್ಭೀತಿಯಿಂದ ಪ್ರತಿಪಾದಿಸಲಾಗಿದೆ. ಅನಂತರದಲ್ಲಿ ಬಂದ ವಾಗ್ದೇವಿ ಮಠಾಧಿಪತಿಯೊಬ್ಬನ ವಿಕೃತ ವರ್ತನೆಗಳನ್ನು ಚಿತ್ರಿಸುತ್ತದೆ. 'ರೋಹಿಣಿ' 'ಇಂದಿರೆ' ಕಾದಂಬರಿಗಳು ಕೂಡ ಇಂಥದ್ದೇ ಸಮಸ್ಯೆಯನ್ನು ಬಿತ್ತರಿಸುವ ಕೃತಿಗಳು 'ಮಾಡಿದುಣ್ಣೋಮಹಾರಾಯ' ನೀತಿ ಪ್ರತಿಪಾದನೆ ಜೊತೆಗೆ ಅಂದಿನ ವಿದ್ಯಾಭ್ಯಾಸದ ಕ್ರೂರ ಪದ್ಧತಿ, ಮಾಟಮಂತ್ರದಂಥಹ ದುಷ್ಟ ಆಚರಣೆಗಳು, ಸ್ತ್ರೀ ಶೋಷಣೆಗಳನ್ನು ನಿರೂಪಿಸಲಾಗಿದೆ. ಸ್ವತಂತ್ರ ಕಾದಂಬರಿಗಳ ರಚನೆಗೆ ಕೆಲವು ನಿಶ್ಚಿತ ಆಯಾಮಗಳನ್ನು ಒದಗಿಸಿಕೊಟ್ಟ ಈ ಕೃತಿಗೆ ಒಂದು ಐತಿಹಾಸಿಕ ಮಹತ್ವ ದೊರಿತಿದೆ. ಆರಂಭದ ಎಲ್ಲಾ ಕಾದಂಬರಿಗಳೂ ಸಮಾಜದ ಸಮಸ್ಯೆಗಳು ಏನೆಂಬುದನ್ನು ಕಣ್ಣೆದುರು ಕಟ್ಟಿಕೊಡುತ್ತವೆ. "ಅದೇ ಹೊಸದಾಗಿ ಹುಟ್ಟಿದ ಪ್ರಕಾರವಾದ್ದರಿಂದ ಕಾದಂಬರಿಯ ಚಟುವಟಿಕೆಗಳು ಇನ್ನೂ ಬೀಸಾಗಿ ನಡೆದಿರಲಿಲ್ಲ ಪಾಶ್ಚಾತ್ಯ ಕಾದಂಬರಿಗಳ ಅನುಕರಣ ಆಗಿನ ಕಾಲಕ್ಕೆ ಅನಿವಾರ್ಯವಾಗಿತ್ತು. ಹೊಸ ಸತ್ವವನು ಎಲ್ಲಿಂದಲೋ ತಂದು ಕಸಿಮಾಡಿ ಸಾಹಿತ್ಯವನ್ನು ಬಲಪಡಿಸಿಬೇಕಾಗಿತ್ತು. ವಾಸ್ತವಾಗಿ ಜರುಗಿದ ಸಂಗತಿಯನ್ನು ಕತೆಯಾಗಿ ಹೇಳುವ ಕಲೆ ಈ ಕಾದಂಬರಿಗಳಲ್ಲಿ ಕ್ರಮವಾಗಿ ಪರಿಪೀರ್ಣತೆ ಹೊಂದುತ್ತಬಂದಿದೆ."[೨] ಎಂಬ ಹೇಳಿಕೆ ಸತ್ಯವೆನಿಸುತ್ತದೆ.

೨೦ನೇ ಶತಮಾನದ ಮೂರನೇ ದಶಕದ ಹೊತ್ತಿಗೆ ಕನ್ನಡ ಕಾದಂಬರಿ ರಚನೆಯಲ್ಲಿ ತ್ವರಿತಗತಿ ಕಂಡಿತು. ವಸ್ತು, ತಂತ್ರ, ನಿರೂಪಣೆಯಲ್ಲಿ ಹೊಸತನವನ್ನು ಕಂಡುಕೊಂಡಿತು. ಈ ಸಂದರ್ಭದಲ್ಲಿ ಬಂದ ಕಾದಂಬರಿಗಳು ಆರಂಭಿಕ ದಿಸೆಗಳಲ್ಲಿನ ಕಾದಂಬರಿಗಳಿಗಿಂತ ಸ್ವರೂಪ, ಲಕ್ಷಗಳಲ್ಲಿ, ಭಿನ್ನವಾಗಿದ್ದವು. ಆಧುನಿಕ ಜಗತ್ತಿನ ಎಲ್ಲಾ ವಿದ್ಯಾಮಾನಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಅಭಿವ್ಯಕ್ತಿಯಲ್ಲಿ ನಾವಿಣ್ಯತೆ ತರಲು ಸಾಧ್ಯವಾಯಿತು. ನವೋದಯ ಲೇಖಕರೆಲ್ಲರು ವ್ಯಕ್ತಿ ಸ್ವಭಾವ ಪರಿವರ್ತನೆ ಜೊತೆಗೆ ಸಾಮಾಜಿಕ ವ್ಯವಸ್ಥೆಯಲ್ಲಾಗುವ ಬದಲಾವಣೆಯ ಕಡೆ ಹೆಚ್ಚುಗಮನ ಹರಿಸಿದರು. ಕಾದಂಬರಿಗಲ್ಲಿ ಸಮಸ್ಯೆಗಳು ವ್ಯಕ್ತಿಕೇಂದ್ರಿತವಾಗಿ ಬಿಚ್ಚಿಕೊಂಡರೂ ಅದರ ಹಿಂದೆ ಸಾಮಾಜಿಕ ಕಾಳಜಿಯೊಂದು ಇದ್ದೇ

ಇರುತ್ತಿತ್ತು. ಅಂದಿಗೆ ಕಾದಂಬರಿಗಳ ಸಂಖ್ಯೆ ತುಂಬಾ ಕಡಿಮೆ ಇದ್ದರೂ ಸತ್ವದ ದೃಷ್ಟಿಯಿಂದ ಉತ್ತಮವೆನಿಸಿದ್ದವು. ಕಾರಂತರ 'ದೇವದೂತರು', 'ಚೋಮನದುಡಿ', ಆನಂದಕಂದರವರ 'ಸುದರ್ಶನ', 'ರಾಜಯೋಗಿ', 'ಅಶಾಂತಿಪರ್ವ', ಅ.ನ.ಕೃರವರ 'ಜೀವನಯಾತ್ರೆ', 'ಸಂಧ್ಯಾರಾಗ', ಮುಗಳಿಯವರ 'ಬಾಳುರಿ', ಶ್ರೀರಂಗರ 'ವಿಶ್ವಾಮಿತ್ರ', 'ಸೃಷ್ಟಿ', ಗೋಕಾಕರ 'ಇಜ್ಜೋಡು', ಜಡಭರತರ 'ಧರ್ಮಸೆರೆ', ಶ್ರೀನಿವಾಸರ 'ಸುಬ್ಬಣ್ಣ', ಕುವೆಂಪುರವರ 'ಕಾನೂರು ಹೆಗ್ಗಡಿತಿ', ಮುಂತಾದವು ಕಾದಂಬರಿ ಜಗತ್ತನ್ನು ಅರ್ಥಪೂರ್ಣವಾಗಿ ವಿಸ್ತರಿಸಿ ಬಿತ್ತರಿಸಿದವು. ವಸ್ತು, ತಂತ್ರ, ವಿನ್ಯಾಸಗಳ ದೃಷ್ಟಿಯಿಂದ ವೈವಿಧ್ಯತೆಯನ್ನು ಮೆರೆದವುಗಳಾಗಿವೆ. ಈ ಎಲ್ಲಾ ಕಾದಂಬರಿಗಳನ್ನು ಗಮನಿಸಿದಾಗ ಶೇಷಗಿರಿರಾವ್‌ರವರ ಈ ಅಭಿಪ್ರಾಯ ಸಮಂಜಸವೆನಿಸುತ್ತದೆ. "ಈ ಎಲ್ಲಾ ಕಾದಂಬರಿಕಾರರು ಒಂದು ಪಂಥಕ್ಕೆ ಅಥವಾ ಪರಂಪರೆಗೆ ಸೇರಿದವರು ಎಂದು ಹೇಳುವಂತಿಲ್ಲ; ಹಾಗೆ ಹೇಳವಷ್ಟರ ಮಟ್ಟಿಗೆ ಒಂದೇ ಲಕ್ಷಣಗಳು ಅವರ ಕಾದಂಬರಿಗಳಲ್ಲಿಲ ಆದರೆ ಅವರ ಕೃತಿಗಳಿಂದ ಈಗ ಕಾಲದಲ್ಲಿ ತಕ್ಕಷ್ಟು ದೂರನಿಂತು ನೋಡುವಾಗ ಕೆಲವು ಸಾಮಾನ್ಯ ಲಕ್ಷಣಗಳು ಕಾಣುತ್ತವೆ. ಇವರೆಲ್ಲ ಮನುಷ್ಯರಲ್ಲಿ ಘನತೆಯನ್ನು ಕಾಣಲು ಹೊರಟವರು, ಪ್ರಾಮಣಿಕವಾಗಿ ಅಂತಹ ಘನತೆಯುಂಟು ಎಂದು ನಂಬಿದವರು."[೬]

೧೯ನೇ ಶತಮಾನದ ನಂತರ ಕನ್ನಡ ಸಾಹಿತ್ಯ ರಂಗ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಎಂಬ ನಾಲ್ಕು ಸಾಹಿತ್ಯಘಟ್ಟಗಳಲ್ಲಿ ವಿಭಾಗಹೊಂದಿತು. ನವೋದಯ ಸಾಹಿತ್ಯಘಟ್ಟದಲ್ಲಿ ಅಂದರೆ ೧೯೨೦ ರಿಂದ ೧೯೫೦ರ ಅವಧಿಯಲ್ಲಿ ಸುಮಾರು ೮೦ಕ್ಕೂ ಹೆಚ್ಚು ಕಾದಂಬರಿಗಳು ಪ್ರಕಟವಾದವು. ಕಾರಂತರ 'ಮರಳಿಮಣ್ಣಿಗೆ', 'ಬೆಟ್ಟದಜೀವ', ದೇವುಡು 'ಮಹಾಕ್ಷತ್ರಿಯ', 'ಮಹಾದರ್ಶನ', ಕುವೆಂಪುರವರ 'ಮಲೆಗಳಲ್ಲಿ ಮದುಮಗಳು', ವಿನಾಯಕರ 'ಸಮರಸವೇ ಜೀವನ'- ಮೊದಲಾದವು ಈ ಸಂದರ್ಭದ ವಸ್ತುವಿನ್ಯಾಸ ಹಾಗೂ ನಿರೂಪಣೆ ವಿಧಾನ ಕ್ರಮದಲ್ಲಿ ವಿಭಿನ್ನ ಮಾದರಿಗಳನ್ನು ಒಳಗೊಂಡ ಕಾದಂಬರಿಗಳಾಗಿವೆ. ಈ ಬಗೆಗಿನ ಕಾದಂಬರಿಗಳಲ್ಲಿ ವಿಸ್ತಾರವಾದ ಜೀವನಾನುಭವ, ಆಗಾಧವಾದ ಜೀವನ ಶ್ರದ್ಧೆ ಹಾಗೂ ಸಂಯಮಶೀಲತೆ ಕಂಡು ಬಂದವು. ಈ ಬಗೆಯ ವಿಸ್ತಾರ ಅನುಭವಹೊಂದಿದ ಬದುಕ

ಕಟ್ಟಿಕೊಡುವಲ್ಲಿ ಕಾರಂತರು ಮುಖ್ಯರು ಈ ಬಗೆಯನ್ನು ಮುಂದಿನ ಕೆಲವು ಕಾದಂಬರಿಕಾರರು ಅನುಸರಿಸಿದರು ಅವರಲ್ಲಿ ಪ್ರಮುಖರು ರಾವುಬಹದ್ದೂರ್ ಇವರ 'ಗ್ರಾಮಾಯಣ', ಬೈರಪ್ಪನವರ 'ದಾಟು', 'ಗೃಹಭಂಗ', 'ಮತದಾನ', 'ವಂಶವೃಕ್ಷ', ಇತ್ಯಾದಿಗಳು ಇನ್ನು ಕುವೆಂಪು ಮಲೆನಾಡಿನ ಜೀವನ ವಿಧಾನವನ್ನು ಸೂಕ್ಷ್ಮವಾಗಿ ಚಿತ್ರಿಸಿದರೆ, ದೇವುಡು ಕಡೆದು ನಿರ್ಮಿಸೋ ಪೌರಾಣಿಕ ಪ್ರಪಂಚ ಅದ್ವಿತಿಯಾವಾದುದು. ಒಟ್ಟಾರೆ ನವೋದಯ ಕಾಲ ಸಂದರ್ಭದ ಕಾದಂಬರಿಗಳು ವಸ್ತುವೈವಿಧ್ಯವುಳ್ಳವುಗಳಾಗಿದ್ದವು ಎಂಬದು ಹುಸಿಯಲ್ಲ.

೧೯೫೦ರ ಸುಮಾರಿಗೆ ಪ್ರಗತಿಶೀಲ ಚಳುವಳಿ ಹುಟ್ಟಿಕೊಂಡಿತು. ಪ್ರಗತಿಶೀಲರಿಗೆ ನವೋದಯದ ಆದರ್ಶಪ್ರಿಯತೆ ಪ್ರಮುಖವೆನಿಸಲಿಲ್ಲ. ಇವರಿಗೆ ರಷ್ಯಾದ ಕಮೂನಿಷ್ಟರ ಧೋರಣೆ ನಿಲುವುಗಳು ಸರಿಯೆನಿಸಿದವು. ಮಾರ್ಕ್ಸ್‌ವಾದದ ತಾತ್ವಿಕ ಚೌಕಟ್ಟುಳ್ಳ ಒಂದು ವರ್ಗ ಹೋರಾಟವನ್ನು ಅವರು ಸಂಘಟಿಸಿದರು. ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ತರುವ ಹಂಬಲ ಆ ನಿಟ್ಟಿನ ಚಿಂತನಾ ಕ್ರಮವನ್ನು ಪ್ರಗತಿಶೀಲರು ಅನುಸರಿಸಿದರು ಹೀಗಿರುವಾಗ ಇವರಿಗೆ ಚಾರ್ಲ್ಸ್‌ಡಿಕನ್ಸ್, ಗಾಲ್ಸ್‌ವರ್ದಿ, ಲಿಯೋಟಾಲ್ಸ್‌ಟಾಯ್, ಮ್ಯಾಕ್ಸಿಂಗಾರ್ಕಿ, ಸಿಂಕ್ಲೇರ್, ಎಮಿಲಿಜೋಲಾ ಮುಂತಾದವರ ಕಾದಂಬರಿಗಳು ಪ್ರಿಯ ಹಾಗೂ ಪ್ರೇರಣೆಗಳಾದವು.

ರಷ್ಯಾ ಸಾಹಿತ್ಯದಿಂದ ಪ್ರಭಾವಿತರಾದ ಅ.ನ.ಕೃ ಹಾಗೂ ಇವರ ಬೆಂಬಲಿಗರು ಸಾಮಾನ್ಯ ಜನತೆಯ ಜೀವನ ಸಾಹಿತ್ಯ ಲೋಕದೊಳಗೆ ಪ್ರವೇಶಿಸಲು ಹಂಬಲಿಸಿದರು ೧೩೦ ಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದ ಅ.ನ.ಕೃ ಕುಟುಂಬಜೀವನ, ಗ್ರಾಮಜೀವನ, ನಗರಜೀವನ, ವೇಶ್ಯೆಯರಜೀವನ, ಕಾರ್ಮಿಕರಜೀವನ, ಅಸ್ಪೃಶ್ಯತೆ, ಕಾಮಜೀವನ ಎಲ್ಲವನ್ನು ಕಾದಂಬರಿಯ ಪರಧಿಯಲ್ಲಿ ತರಲು ಯತ್ನಿಸಿದರು. ಅ.ನ.ಕೃ, ತ.ರಾ.ಸು, ಕುಮಾರವೆಂಕಣ್ಣ, ಬಸವರಾಜಕಟ್ಟೀಮನಿ, ಎಸ್.ಅನಂತನಾರಾಯಣ ಮೊದಲಾದವರು ಪ್ರಗತಿಶೀಲ ನಿಲುವುಗಳನ್ನು ಅನುಸರಿಸಿ ಬರೆದರು. ಸಮಾಜದಲ್ಲಿ ನೆಲೆನಿಂತಿದ್ದ ಅಸಮಾನತೆ ಅನ್ಯಾಯ, ಶೋಷಣೆ, ಆಷಾಢಭೂತಿತನ, ಮೋಸ, ದುಷ್ಟಾಚಾರಗಳನ್ನು ಬಯಲಿಗೆಳೆದರು. ಈ ಹಾದಿಯಲ್ಲಿ ಅ.ನ.ಕೃ ರವರ 'ಶನಿಸಂತಾನ' ತ.ರಾ.ಸು ರವರ 'ಮುಂಜಾವಿನಿಂದ

ಮುಂಜಾವು', ಬಸವರಾಕಟ್ಟೀಮನಿ 'ಜ್ವಾಲಮುಖಿ', ಅರ್ಚಕವೆಂಕಟೇಶರ 'ಅಸ್ಥಿಪಂಜರ', ನಿರಂಜನರ 'ವಿಮೋಚನೆ', 'ಚಿರಸ್ಮರಣೆ', 'ಮೃತ್ಯುಂಜಯ' ಮೊದಲಾವು ಗಮನ ಸೆಳೆದವು.

ಸುಮಾರು ೧೯೫೦ರ ವೇಳೆಗೆ ನವ್ಯ ಕಾದಂಬರಿಗಳ ಯುಗ ಆರಂಭವಾಯಿತು. ಶಾಂತಿನಾಥ ದೇಸಾಯಿಯವರ 'ಮುಕ್ತಿ'ಯನ್ನು ಮೊದಲನೆಯ ನವ್ಯ ಕಾದಂಬರಿಯೆಂದು ಕರೆಯಲಾಗಿದೆ. ಆದರೆ ಇದೇ ಸುಮಾರಿನಲ್ಲಿ ಪ್ರಕಟಗೊಂಡ ಕೆ.ವಿ.ಅಯ್ಯರ್ ಅವರ 'ರೂಪದರ್ಶಿ' ಹಾಗೂ ಶಂಕರಮೊಕಾಶಿಪುಣೇಕರ ಅವರ 'ಗಂಗವ್ವ- ಗಂಗಾಮಾಯಿ', ಎಂಬ ಕಾದಂಬರಿಗಳಲ್ಲಿಯೇ ನವ್ಯದ ಮುನ್ಸೂಚನೆಯಿರುವುದನ್ನು ವಿಮರ್ಶಕರು ಗುರುತಿಸಿದ್ದಾರೆ. ಎರಡನೇ ಮಹಾಯುದ್ಧದ ಪರಿಣಾಮವಾಗಿ ಪಾಶ್ಚಿಮಾತ್ಯ ದೇಶದ ಜನರ ಜೀವನದಲ್ಲಿ ಹತಾಷೆ, ಜಿಗುಪ್ಸೆ, ಅತಂತ್ರಸ್ಥಿತಿ, ತಳಮಳ, ಅಸಂಗತತೆ, ಅನಾಥಪ್ರಜ್ಞೆ, ಪರಕೀಯತೆ, ಕಾಡತೊಡಗಿತು. ಅಲ್ಲಿ ಭೌತಿಕವಾಗಿ ನಡೆದ ಸಂಗತಿಗಳನ್ನು ಭಾರತೀಯರು ಮಾನಸಿಕವಾಗಿ ಅನುಭವಿಸಿದರು. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಕನಸುಗಳೆಲ್ಲಾ ಸ್ವಾತಂತ್ರ್ಯ ನಂತರ ಭ್ರಮನಿರಸನಕ್ಕೆ ಒಳಗಾದವು. ಜೀವನದಲ್ಲಿ ಎಲ್ಲವೂಪ್ರಾಸಂಗಿಕ, ಯಾವುದೂ ಅನಿವಾರ್ಯವಲ್ಲ, ಸರಳವಲ್ಲದಜೀವನ, ಅಂತರ್ಮುಖಿನಾಯಕ, ಮೌಲ್ಯಗಳ ಶೋಧನೆ ಮುಖ್ಯವಾಯಿತು. ಪರಿಹಾರ ಮುಖ್ಯವಲ್ಲ, ಸಾಮಾಜಿಕ ಪ್ರದರ್ಶನಕ್ಕಾಗಿ ಗೌರವಾನ್ವಿತ ವ್ಯಕ್ತಿತ್ವವೊಂದನ್ನು ಸಾಹಿತ್ಯದಲ್ಲಿ ಮಾತ್ರ ನಿರ್ಮಿಸಿಕೊಂಡು ಬರೆಯುವ ಅಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ.

ಒಟ್ಟಾರೆ ನವ್ಯ ಕಾದಂಬರಿಯ ಸಮಸ್ಯೆಗಳು ವೈಯಕ್ತಿಕ, ನಾಯಕ ಅಂತರ್ಮುಖಿ ತನ್ನ ಸುತ್ತಮುತ್ತಲಿನ ಜಗತ್ತಿನೊಡನೆ ತನ್ನ ಸಂಬಂಧವನ್ನು ತನಗೆ ತಾನೆ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಇಲ್ಲಿಯ ನಾಯಕ ಆದರ್ಶನಲ್ಲ, ದುರ್ಬಲವ್ಯಕ್ತಿ, ತನ್ನ ಬದುಕಿನ ದಾರಿ ಸ್ಪಷ್ಟವಾಗದೆ ಇತರರು ತೋರಿದ ಬೆಳಕಿನಲ್ಲಿ ಬದುಕಲಾಗದೆ ತೊಳಲಾಡುತ್ತಾನೆ. ಪಾರಂಪಾರಿಕವಾಗಿ ಬಂದ ಮೌಲ್ಯಗಳನ್ನು, ನಂಬಿಕೆಗಳನ್ನು ಸ್ವೀಕರಿಸಲಾಗದೆ ಏಕಾಂಗಿತನ, ಅನಾಥಪ್ರಜ್ಞೆ, ಪರಕೀಯತೆ ಕಾಡುತ್ತದೆ. ನವ್ಯ ಕಾದಂಬರಿ ಇತಿಹಾಸ ನವೋದಯ ಕಾದಂಬರಿ ಇತಿಹಾಸದಷ್ಟು ದೊಡ್ಡದಲ್ಲ, ಅವುಗಳ ಸಂಖ್ಯೆ ತೀರಾ ಕಡಿಮೆ. ಶಾಂತಿನಾಥ ದೇಸಾಯಿಯವರ 'ವಿಕ್ಷೇಪ', 'ಬೀಜ' ಯಶವಂತ ಚಿತ್ತಾಲರ 'ಮೂರುದಾರಿಗಳು'. 'ಶಿಕಾರಿ', 'ಪುರುಷೋತ್ತಮ',

ಲಂಕೇಶರ 'ಬಿರುಕು', ಯು.ಆರ್.ಅನಂತಮೂರ್ತಿಯವರ 'ಸಂಸ್ಕಾರ', 'ಭಾರತೀಪುರ', 'ಭವ', ಕುಸುಮಾಕರರ 'ಮುಗಿಯದಕಥೆ', 'ನಾಲ್ಕನೆಯಆಯಾಮ', ಗಿರಿಯವರ 'ಗತಿಸ್ಥಿತಿ', ಶೌರಿಯವರ 'ಹಳದಿಮೀನೂ' ಈ ಎಲ್ಲಾ ಕಾದಂಬರಿಗಳಲ್ಲಿ ಘಟಿಸುವ ಘಟನೆಗಳು ಮನುಷ್ಯನ ಒಳಜಗತ್ತಿಗೆ ಸಂಬಧಿಸಿದವು.

೧೯೬೦ರ ಸುಮಾರಿನಲ್ಲಿ ಮಹಾರಾಷ್ಟ್ರದಲ್ಲಿ ಆರಂಭಗೊಂಡ ದಲಿತಸಾಹಿತ್ಯ ಚಳುವಳಿ, ದಲಿತ ಪ್ಯಾಂಥರ್ಸ್ ಚಳುವಳಿ ಕನ್ನಡ ಬರಹಗಾರಿಗೆ ಮುಖ್ಯ ಪ್ರೇರಣೆಯಾಯಿತು. ಜೊತೆಗೆ ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ, ಲೋಹಿಯಾವಾದ, ಪಾಬ್ಲೇನೆರೊಡ, ಹಾಗೂ ಚಿನುವಾ ಅಚಿಬೆಯಂಥವರ ಚಿಂತನೆಗಳೂ, ದಲಿತ ಸಾಹಿತ್ಯ ರೂಪುಗೊಳ್ಳಲು ಅಡಿಪಾಯ ಒದಗಿಸಿದವು. ಒಟ್ಟಾರೆ ಎಡಪಂಥಿಯ ಸಿದ್ಧಾಂತಗಳು ಚಿಂತೆನೆಗಳು ದಲಿತ ಸಾಹಿತ್ಯ ಪ್ರೇರಣೆಗಳಾದವು. ಸವರ್ಣಿಯರಿಂದ, ಮೇಲುವರ್ಗದವರಿಂದ ಶೋಷಣೆಗೆ ಒಳಗಾದ ಜನರ ದನಿಯಾಗಿ ದಲಿತ ಸಾಹಿತ್ಯ ಮೂಡಿಬಂದಿತು. ಜನಪರ ಮೌಲ್ಯಗಳನ್ನ, ಪ್ರಗತಿಪರ ವಿಚಾರಗಳನ್ನ ಪ್ರತಿಪಾದಿಸುವ ಬಂಡಾಯ ಸಾಹಿತ್ಯ ಚಳುವಳಿ ಆರಂಭವಾಯಿತು. ದಲಿತ ಸಾಹಿತ್ಯದ ಮುಖ್ಯ ಉದ್ದೇಶ ಸಾಮಾಜಿಕ ಮೌಲ್ಯಗಳನ್ನ ಪ್ರಶ್ನಿಸುವುದಾಗಿತ್ತು. ಆರಂಭದ ದಿನಗಳಲ್ಲಿ ಕೋಪ, ರೋಷ, ಆವೇಶ, ಅಬ್ಬರದ ನೆಲೆಯಲ್ಲಿ ಅಭಿವ್ಯಕ್ತಿಗೊಂಡ ಪ್ರತಿರೋಧ ನಂತರದಲ್ಲಿ ಸಂಯಮದ ಹಾದಿಹಿಡಿಯಿತು. ತಮ್ಮ ಮೇಲಿನ ಧಾರ್ಮಿಕ, ಸಾಮಾಜಿಕ, ಅನಾಯ್ಯಗಳನ್ನು ಪ್ರಶ್ನಿಸುವ ಗ್ರಾಮೀಣ ವ್ಯವಸ್ಥೆಯೊಳಗಿನ ಜಮೀನ್ದಾರಿ ಪದ್ಧತಿ ಹಾಗೂ ಆರ್ಥಿಕ ಅಸಮಾನತೆಗಳ ವಿರುದ್ಧ ಬಂಡೇಳುವ ರೀತಿಯನ್ನ ದಲಿತ-ಬಂಡಾಯ ಸಾಹಿತ್ಯ ಬಿತ್ತರಗೊಳಿಸಿತು. ಈ ಎಲ್ಲಾ ಹಿನ್ನೆಲೆಯಲ್ಲಿ ಪ್ರಕಟಗೊಂಡ ಕಾದಂಬರಿಗಳ ಧೋರಣೆಗಳು ಪ್ರಮುಖವಾದವು. ಇಲ್ಲೆಲ್ಲಾ ಅಸ್ಪೃಶ್ಯ ವರ್ಗದ ಪಾತ್ರಗಳ ತಳಮಳ ಸಾಮಾಜಿಕ, ಆರ್ಥಿಕ, ಅಸಮಾನತೆಯ ವಿರುದ್ಧದ ಸಂಘರ್ಷ ಕಾಣಬಹುದಾಗಿದೆ.

ಜಿ.ವೆಂಕಟಯ್ಯನವರ 'ನೊಂದಜೀವ', ದೇವನೂರುಮಹಾದೇವರ 'ಒಡಲಾಳ', 'ಕುಸಮಬಾಲೆ', ಮ.ನ.ಜವರಯ್ಯರ 'ಮಾಗಿ', ಅರವಿಂದ ಮಾಲಗತ್ತಿಯವರ 'ಕಾರ್ಯ', ಮುಳ್ಳೂರುನಾಗರಾಜರ 'ಮರಣಮಂಡಲದೊಳಗೆ', 'ದಂಡಕಾರಣ್ಯ' ಶಿವರುದ್ರ ಕಲ್ಲೋಳಿಕರ್‌ರ

'ಹೊಲಗೇರಿಯ ರಾಜಕುಮಾರ', ಚೆನ್ನಣ್ಣವಾಲೀಕಾರ ಅವರ 'ಬೇಳ್ಯ', 'ಹುಲಿಗೆಮ್ಮ', 'ಕೋಟಬಾಗಿಲು', 'ಒಂದು ಹೆಣ್ಣಿನ ಜಗತ್ತು', ಬಿ.ಟಿ.ಲಲಿತನಾಯಕರವರ 'ಗತಿ', ಗೀತಾನಾಗಭೂಷಣ ಅವರ 'ನೋವು' 'ಮಾಪುರ ತಾಯಿಯ' ಮಕ್ಕಳು ಈ ಕಾದಂಬರಿಗಳಲ್ಲೆ ದಲಿತ ಸಮುದಾಯದ ಒಳತೋಟಿ ಪ್ರಾದೇಶಿಕ ಭಾಷೆಹಿನ್ನೆಲೆಯಲ್ಲಿ ಅಭಿವ್ಯಕ್ತಿಗೊಂಡಿರುವುದನ್ನು ಕಾಣಬಾಹುದಾಗಿದೆ.

ದಲಿತರೇ ಬರೆದಿದ್ದು 'ದಲಿತ ಸಾಹಿತ್ಯ' ಎಂಬ ಸಾಹಿತ್ಯವಲಯದ ವಿವಾದವನ್ನು ಮರೆತು. ದಲಿತಸಾಹಿತ್ಯ ಬಂಡಾಯ ಸಾಹಿತ್ಯ ಒಂದು ಭಾಗವೆಂದು ಪರಿಗಣಿಸಿವುದಾದರೆ. ಇನ್ನೂ ಕೆಲವು ಕಾದಂಬರಿಗಳನ್ನು ಮುಖ್ಯವೆಂದು ಗುರಿತಿಸ ಬಹುದಾಗಿದೆ. ಅವುಗಳಲ್ಲಿ ಬಹು ಪ್ರಮುಖವೆಂದೆನಿಸಿಕೊಳ್ಳುವ ಕುವೆಂಪು ರವರ 'ಮಲೆಗಳಲ್ಲಿ ಮದುಮಗಳು', ಕಾರಂತರ 'ಚೋಮನದುಡಿ', ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಹೇಮಾವತಿ', ಬಸವಾರಜ ಕಟ್ಟೀಮನಿಯವರ 'ನೀ ನನ್ನ ಮಟ್ಟ ಬೇಡ' ಚದುರಂಗರ 'ವೈಶಾಖ', ಎಸ್.ಎಲ್.ಭೈರಪ್ಪನವರ 'ದಾಟು', ಯು.ಆರ್‌ಅನಂತಮೂರ್ತಿಯವರ 'ಭಾರತೀಪುರ' ಇತ್ಯಾದಿಗಳು ಭಾರತದ ಸಾಮಾಜಿಕ, ಸಾಂಸ್ಕೃತಿಕ ಅವಸ್ಥಾಂತರ ಸಂದರ್ಭದ ಸಮಸ್ಯೆಗಳನ್ನು ಈ ಲೇಖಕರು ಚರ್ಚಿಸಿರುವುದನ್ನು ಮುಖ್ಯವೆಂದು ತೆಗೆದುಕೊಳ್ಳ ಬೇಕಾಗುತ್ತದೆ.

"ಕಾದಂಬರಿ ಯಾವಮಾರ್ಗದ್ದು ಎನ್ನುವುದು ಮುಖ್ಯವಲ್ಲ, ಜೀವನವನ್ನು ಗಂಭೀರವಾಗಿ ತೆಗೆದು ಕೊಳ್ಳುತ್ತದೆಯೇ, ಓದುವವರ ಮನಸ್ಸನ್ನು ಸೂಕ್ಷ್ಮ ಗೊಳಿಸುತ್ತದೆಯೋ ಎನ್ನುವುದು ಮುಖ್ಯ."[೭] ಎಂಬ ಶೇಷಗಿರಿರಾವ ಅವರ ಹೇಳಿಕೆಯಂತೆ ಯಾವ ಸಾಹಿತ್ಯ ಮಾರ್ಗಕ್ಕೂ ಒಳಪಡದ ಅನೇಕ ಕಾದಂಬರಿಗಳಿವೆ ಅವುಗಳಲ್ಲಿ ಪ್ರಮುಖವಾದವೆಂದರೆ ಶ್ರೀಕೃಷ್ಣ ಆಲನಹಳ್ಳಿ ಅವರ 'ಕಾಡು', 'ಪರಸಂಗದಗೆಂಡೆತಿಮ್ಮ', "ಭುಜಂಗಯ್ಯನದಶವತಾರ', ಬಿ.ವಿ ವೈಕುಂಠರಾಜುರ 'ಅಂತ್ಯ', 'ಆಕ್ರಮಣ', ಎಚ್.ಎಲ್ ನಾಗೇಗೌಡರ 'ದೊಡ್ಡಮನೆ', ಬೈರಪ್ಪನವರ 'ಧರ್ಮಶ್ರೀ', 'ದೂರಸರಿದರು', 'ಗ್ರಹಣ', 'ವಂಶವೃಕ್ಷ', ವಿ.ಎಂ ಇನಾಂದಾರರ 'ಮಂಜು ಮುಸುಕಿದದಾರಿ', ಕಾಮರೂಪಿಯವರ 'ಕುದುರೆಮೊಟ್ಟೆ", ನಾ.ಡಿಸೋಜರ 'ದ್ವೀಪ', 'ಮಾನವ', ಮೊದಲಾದವು ಇನ್ನೂ ಸ್ತ್ರೀಯರು ಬರೆದ ಕಾದಂಬರಿಗಳನ್ನು

ಗಮನಿಸಿನೋಡಿದಾಗ ತಿರುಮಲಾಂಬರ 'ಸುಶೀಲೆ', 'ನಭಾ', ಕಲ್ಯಾಣಮ್ಮರ 'ನಿರ್ಭಾಗ್ಯವನಿತೆ', ಪ್ರಿಯಂವದಾ', ಎಂ.ಕೆ.ಇಂದಿರಾ ಅವರ 'ತಗ್ಗಿನ ಮನೆಯ ಸೀತೆ', ಅನುಪಮನಿರಂಜನರ 'ಮಾಧವಿ', ತ್ರಿವೇಣಿಯವರ 'ಶರಪಂಜರ', ವೀಣಾಶಾಂತೇಶ್ವರ ಅವರ 'ಗಂಡಸರು', ಸಾ.ರ. ಅಬೂಬಕರ ರವರ 'ಚಂದ್ರಗಿರಿಯ ತೀರದಲ್ಲಿ', 'ಸಹನ', ಮೊದಲಾದ ಕಾದಂಬರಿಗಳನ್ನು ಅಭ್ಯಯಿಸಿದವುದು ಅತ್ಯಗತ್ಯ ಹಾಗಿದ್ದಾಗ ಮಾತ್ರ ಕನ್ನಡ ಕಾದಂಬರಿಗಳ ಸ್ವರೂಪ ಮತ್ತು ಇತಿಹಾಸದ ಒಟ್ಟು ಸ್ಥೂಲಚಿತ್ರಣ ನಮಗೆ ದೊರಕುತ್ತದೆ. ಒಟ್ಟಾರೆ ಈ ಎಲ್ಲಾ ಅಂಶಗಳನ್ನು ತನ್ನೊಡಲಿನಲ್ಲಿ ಅರಗಿಸಿಕೊಂಡು ಕನ್ನಡ ಕಾದಂಬರಿ ಪರಂಪರೆ ನಮ್ಮ ಸಮಕಾಲೀನ ಕಾಲಕ್ಕಾಗಲೇ ಹೊಸ ದುಷ್ಟಿ–ಧೋರಣೆ ಮತ್ತು ಹೊಸ ವಿನ್ಯಾಸಗಳೊಂದಿಗೆ ಬೆಳೆಯುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ಅಡಿಟಿಪ್ಪಣಿಗಳು:

೧. 'ದೇವುಡು ಅವರ ಸೃಜನಶೀಲ ಸಾಹಿತ್ಯ', ಸಿ.ಎಸ್ ಶಿವಕುಮಾರಸ್ವಾಮಿ, ಪುಟ-೨೩.

೨. 'ಹೊಸಗನ್ನಡ ಸಾಹಿತ್ಯ ಚರಿತ್ರೆ', ಎಲ್.ಎಸ್.ಶೇಷಗಿರಿರಾವ್, ೨೦೦೮, ಪುಟ-೧೩೫,೧೩೬.

೩. 'ಯುಗಧರ್ಮ ಹಾಗೂ ಸಾಹಿತ್ಯ ದರ್ಶನ', ಕೀರ್ತಿನಾಥ ಕುರ್ತಕೋಟಿ,೨೦೦೮, ಪುಟ-೧೮೨.

೪. 'ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು', ಸಿ.ಎನ್.ರಾಮಚಂದ್ರನ್, ೧೯೮೭, ಪುಟ-೨೮.

೫. 'ಯುಗಧರ್ಮ ಹಾಗೂ ಸಾಹಿತ್ಯ ದರ್ಶನ', ಕೀರ್ತಿನಾಥ ಕುರ್ತಕೋಟಿ,೨೦೦೮, ಪುಟ -೧೮೮.

೬. 'ಹೊಸಗನ್ನಡ ಸಾಹಿತ್ಯ ಚರಿತ್ರೆ', ಎಲ್.ಎಸ್.ಶೇಷಗಿರಿರಾವ್, ೨೦೦೮,ಪುಟ-೧೪೬.

೭. ಅದೇ, ಪುಟ-೧೭೨.

ಅಧ್ಯಾಯ-೩

ಗೊರೂರು ಮತ್ತು ತ.ರಾ.ಸು: ಬದುಕು-ಬರಹ

ಡಾ.ಗೊರೂರು ರಾಮಸ್ವಾಮಿ ಅಯ್ಯಂಗಾರ್ ಆಧುನಿಕ ಕನ್ನಡ ಸಾಹಿತ್ಯದ ಹಿರಿಯ ತಲೆಮಾರಿನ ಲೇಖಕರಲ್ಲೊಬ್ಬರು; ಪ್ರಥಮ ಶ್ರೇಣಿಯವರೂ ಕೂಡ. ಹಾಸನ ಜಿಲ್ಲೆಯ ಹೇಮಾವತಿ ತೀರದ ಗೊರೂರು ನಮ್ಮನಾಡಿನ ಇತರ ಎಷ್ಟೋ ಊರುಗಳಂತೆ ಒಂದು ಸಾಮನ್ಯ ಹಳ್ಳಿ. ಆದರೂ ಅದಕ್ಕೆ ದೊರತಿರುವ ಖ್ಯಾತಿ ಇತರ ಊರುಗಳು ಕರುಬುವಂಥದ್ದು. ಈ ಖ್ಯಾತಿಗೆ ಕಾರಣರಾದವರು ಶ್ರೀರಾಮಸ್ವಾಮಿ ಅಯ್ಯಂಗಾರ್ ಅವರು. ರಾಮಸ್ವಾಮಿ ಅಯ್ಯಂಗಾರರು ಗೊರೂರು ಎಂಬ ಸಂಕ್ಷಿಪ್ತ ನಾಮದಿಂದಲೇ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಚಿರಪರಚಿತರಾಗಿದ್ದಾರೆ. ಗೊರೂರು ೧೯೦೪ರಲ್ಲಿ ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಜನಿಸಿದರು. ಅವರ ತಂದೆ ಶ್ರೀನಿವಾಸ ಅಯ್ಯಂಗಾರ, ತಾಯಿ ಲಕ್ಷ್ಮಮ್ಮ. ತಮ್ಮ ಹಳ್ಳಿಯಲ್ಲಿ ಲೋಯರ್ ಸೆಕೆಂಡರಿ ಶಿಕ್ಷಣವನ್ನು ಮುಗಿಸಿದ ಗೊರೂರು ಹಾಸನದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಗಾಂಧೀಜಿಯವರ ಅಸಹಕಾರ ಚಳುವಳಿಯಿಂದ ಆಕರ್ಷಿತರಾಗಿ ಶಿಕ್ಷಣಕ್ಕೆ ವಿದಾಯ ಹೇಳಿದರು. ಅನಂತರ ಅವರು ಗಾಂಧೀಜಿಯ ಆಶ್ರಮವನ್ನು ಸೇರಿ ಗುಜರಾತಿನ ವಿದ್ಯಾಪೀಠದ ವಿದ್ಯಾರ್ಥಿಯಾದರು.

ಗೊರೂರು ಶಕ್ತಿ ಸಾಮರ್ಥ್ಯಗಳು ಕೇವಲ ಸಾಹಿತ್ಯ ಸೃಷ್ಟಿಗೆ ಮೀಸಲಾದವಲ್ಲ. ಅವರು ಸಾಮಾಜಿಕ ಕ್ಷೇತ್ರದಲ್ಲಿ ರಾಜಕೀಯ ರಂಗದಲ್ಲಿ ಸಾಕಷ್ಟು ಕಾರ್ಯನಿರ್ವಹಿಸಿದ್ದಾರೆ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರತ್ಯೇಕ್ಷವಾಗಿ ಭಾಗವಹಿಸಿ ಕಷ್ಟ ನಷ್ಟಗಳಿಗೆ ಒಳಗಾಗಿ ಅಪಾರ ತ್ಯಾಗ ಮಾಡಿದ್ದಾರೆ. ಗೊರೂರು ಪತ್ರಿಕೋದ್ಯಮದಲ್ಲೂ ತಮ್ಮ ಸೇವೆ ಸಲ್ಲಿಸಿದ್ದಾರೆ. ಮದರಾಸಿನ 'ಲೋಕಮಿತ್ರ' ಎಂಬ ಕನ್ನಡ ಪತ್ರಿಕೆ ಉಪಸಂಪಾದಕರಾಗಿ 'ಆಂದ್ರ ಪತ್ರಿಕೆ' ಮತ್ತು 'ಭಾರತಿ ಪ್ರತಿಕೆ' 'ಕನ್ನಡ ಸಮಾಚಾರ' ಲೇಖಕರಾಗಿ ಸ್ವಲ್ಪ ಕಾಲ ಕೆಲಸ ಮಾಡಿ ಕೆಂಗೇರಿಯ ಗುರುಕುಲಾಶ್ರಮವನ್ನು. ಸೇರಿದರು. ಹರಿಜನೋದ್ಧಾರ ಅವರ ಮುಖ್ಯ ಕಾರ್ಯವಾಗಿತ್ತು. ಅದನ್ನು ಗೊರೂರು ಶ್ರದ್ಧೆಯಿಂದ ನಿರ್ವಹಿಸಿದರು. ಬೆಂಗಳೂರಿನ ಅಖಿಲಭಾರತ ಚರಕ ಸಂಘದ ಖಾದಿ ವಸ್ತ್ರಾಲಯದ ಸಂಚಾಲಕರಾದರು. ಅಲ್ಲಿಯೇ ಅವರ ಸಾಹಿತ್ಯ ಸೇವೆ

ಮೊದಲಾಯಿತು. ೧೯೩೩ರಲ್ಲಿ ಗೊರೂರು ತಮ್ಮ ಗ್ರಾಮಕ್ಕೆ ಮರಳಿ ಮೈಸೂರು ಗ್ರಾಮ ಸೇವಾ ಸಂಘವನ್ನು ಸ್ಥಾಪಿಸಿ. ಖಾದಿ ಪ್ರಚಾರ, ಹರಿಜನೋದ್ಧಾರ, ವಯಸ್ಕರ ಶಿಕ್ಷಣ, ಗ್ರಾಮ ಕೈಗಾರಿಕೆಗಳು ಮುಂತಾದ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿದರು. ೧೯೪೩ ರ 'ಚಲೇಜಾವ್ ಚಳುವಳಿಯಲ್ಲಿ' ತುರಂಗವಾಸವನ್ನು ಅನುಭವಿಸಿದರು. ಸ್ವತಂತ್ರ್ಯ ಬಂದ ಮೇಲೆ ಮೈಸೂರಿನಲ್ಲಿ ಪ್ರಜಾ ಸರ್ಕಾರ ಸ್ಥಾಪನೆಗಾಗಿ ನಡೆದ ಚಳುವಳಿಯಲ್ಲೂ ಭಾಗವಹಿಸಿದರು. ಅದು ಸ್ಥಾಪಿತವಾದ ಮೇಲೆ ಸುಮಾರು ಹನ್ನೆರಡು ವರ್ಷಗಳ ಕಾಲ ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಈ ಅವಧಿಯಲ್ಲಿ ಕರ್ನಾಟಕದ ಏಕೀಕರಣಕ್ಕಾಗಿ, ಯೂನಿವರ್ಸಿಟಿ ಸೆನೆಟ್ಟು, ಮೂಲ ಶಿಕ್ಷಣ ಸಮಿತಿಗಳಿಗೆ ದುಡಿದವರು

ಗೊರೂರು ಜೀವನದಲ್ಲಿ ದೇಶಸಂಬಧವಾದ ಕಾಳಜಿ, ಹಳ್ಳಿ ಜನರ ಬಗೆಗಿನ ಪ್ರೇಮ, ವೈದಿಕರಾಗಿದ್ದು ಗಳಿಸಿಕೊಂಡ ಜಾತಿ ಮತದ ಬಗೆಗಿನ ಆರೋಗ್ಯಕರ ಬೆಂಗಳೂರಿನಿಂದ - ನ್ಯೂಯಾರ್ಕ್ ವರೆಗೆ ಅತ್ಯಾಧುನಿಕ ನಗರದಲ್ಲಿದ್ದಾಗಲೂ ನಾಚದೆ ಉಳಿಸಿಕೊಂಡ ಸಾಚಾ ಹಳ್ಳಿಗತನ, ರೈತ, ಬೆಸ್ತ, ಬಡಗಿ, ಹಜಾಮ, ಹರಿಜನ, ದಾಸಯ್ಯ, ಶಾನುಭೋಗ, ಅಮಲದ್ದಾರ, ಮೋಜಣಿದಾರ, ಹಾರುವ, ತುರುಕ-ಇವರೆಲ್ಲ ತಮ್ಮ ನಗ್ನ ಸತ್ಯದಲ್ಲಿ ಹೊರಟ ಮೆರವಣಿಗೆ ಗೊರೂರುಸಾಹಿತ್ಯದ ತಿರುಳಾಗಿದೆ.

ಗೊರೂರು ಬರಹವೊಂದರ ಬಗ್ಗೆ ಡಿವಿಜಿ ಬರೆದ ಮಾತು ಇದು "ನೆನ್ನೆ ರಾತ್ರಿ ನಿದ್ರೆ ಬರದ್ದರಿಂದ ಸುಮಾರು ಹನ್ನೆರಡು ಗಂಟೆಗೆ ನಿಮ್ಮ ಗರುಡ ಗಂಬದ ದಾಸಯ್ಯ ಓದಲು ಪ್ರಾರಂಬಿಸಿದೆ ನಿದ್ರೆ ಬರದಾಗ ಇದು ನನ್ನ ಪದ್ಧತಿ ಆಚಾರ ಕೆಟ್ಟರು ಆಕಾರ ಕೆಡಬಾರದೆಂಬುದನ್ನು ಓದುತ್ತಾ ತಡೆಯಲಾರದ ನಗು ಬಂತು ಗಟ್ಟಿಯಾಗಿ ನಗತೊಡಗಿದೆ ನಮ್ಮ ಹುಡುಗರು ಗಾಬರಿಯಿಂದ ಎದ್ದು ಬಂದು ವಿಷಯ ತಿಳಿದ ನಂತರ ಅವರು ನಗತೊಡಗಿದರು." ಹೀಗೆಂದಾಗ ಹಾಸ್ಯವಷ್ಟೇ ಅವರ ಬರಹದ ಉದ್ದೇಶವಲ್ಲ ಎಷ್ಟು ಸಲ ಅದು ಚಿತ್ರದ ಸುತ್ತಹಾಕಿದ ಚೌಕಟ್ಟು ಅಷ್ಟೇ ಆಗಿರುತ್ತದೆ.

ಆಧುನಿಕ ಕನ್ನಡ ಸಾಹಿತ್ಯಕ್ಕೆ ಆಳ-ವಿಸ್ತಾರಗಳನ್ನೂ, ವೈವಿಧ್ಯ-ವೈಶಿಷ್ಟಗಳನ್ನೂ ತಂದುಕೊಟ್ಟ ಕೆಲವೇ ಗಣ್ಯ ಲೇಖಕರಲ್ಲಿ ಗೊರೂರು ಒಬ್ಬರು. ನಮ್ಮ ಸಾಹಿತ್ಯಕ್ಕೆ ಅವರು

ಸೇರಿಸಿರುವ ಪ್ರಾದೇಶಿಕ ಧನಿ ಬಣ್ಣಗಳು ಸಾಹಿತ್ಯ ಚರಿತ್ರೆಯಲ್ಲಿ ಪ್ರತ್ಯೇಕ ಉಲ್ಲೇಖಕ್ಕೆ ಅರ್ಹವಾಗಿದೆ. ಒಂದು ಪ್ರಾದೇಶಿಕ ಜೀವನದ ಸುಖ-ದುಖಃಗಳನ್ನು ವಾಚಕ ಕೋಟಿಯ ಅನುಭವನ್ನಾಗಿಸಿದ ನಿಪುಣ ಕಲಾವಿದರು ಗೊರೂರರು. ಹಳ್ಳಿಯ ಜೀವನವನ್ನು ನಮ್ಮ ಸಾಹಿತ್ಯಕ್ಕೆ ತಂದು ಹೊಸ ಪ್ರಕಾರವೊಂದನ್ನು ಸೃಷ್ಟಿಸಿದ ಕೀರ್ತಿಗೆ ಅವರು ಪಾತ್ರರಾಗಿದ್ದಾರೆ. ಕಥೆ, ಕಾದಂಬರಿ, ಪ್ರಬಂಧ, ಜೀವನಚರಿತ್ರೆ, ವಿಚಾರ ಸಾಹಿತ್ಯ ಅನುವಾದ ಮೊದಲಾದ ಪ್ರಕಾರಗಳಲ್ಲಿ ಅವರು ಮಹತ್ವ ಪೂರ್ಣವಾದ ಕೃತಿಗಳನ್ನು ರಚಿಸಿದ್ದಾರೆ.

ಕನ್ನಡ ಸಾಹಿತ್ಯಕ್ಕೆ ಆಕರ್ಷಕವಾದ ಹಾಸ್ಯಮುಖವನ್ನು ಜೋಡಿಸಿದ ಗೊರೂರರದು ಒಂದು ಅದ್ಭುತ ಸಾಧನೆ ಇಂತಹ ಬಹುಮುಖ ಪ್ರತಿಭೆಯುಳ್ಳ ಉನ್ನತ ವ್ಯಕ್ತಿತ್ವದ ಗೊರೂರಿಗೆ ಅವರು ಬರೆದ ಕೆಲ ಪುಸ್ತಕಗಳ ನೆನಪಿಲ್ಲ ಅವುಗಳ ಪ್ರತಿಗಳೂ ಅವರ ಬಳಿಯಿಲ್ಲ! ಅವರ ಗೌರವ ಗ್ರಂಥದಲ್ಲಿ ಡಿ.ಆರ್.ವೆಂಕಟರಮಣನ್ ಸೂಚಿಸಿರುವಂತೆ 'ಭಾರತ ಸ್ವಾತಂತ್ರ್ಯ' ಮತ್ತು ಸಾಹಿತ್ಯಾನುಭವ', 'ಸರ್ವಜ್ಞನು ತೋರಿದ ದಾರಿ' ಎಂಬ ಪುಸ್ತಕಗಳನ್ನು ನೋಡುವುದು ಕೂಡ ನಮಗೆ ಸಾಧ್ಯವಿಲ್ಲ. ಗೊರೂರು ಕೆಂಗೇರಿಯ ಗುರುಕುಲದಲ್ಲಿದ್ದಾಗ ನಾನಾ ವಿಷಯಗಳನ್ನು ಕುರಿತು ೧೬-೨೦ ಪುಟಗಳ ಸುಮಾರು ೪೦-೫೦ ಪುಸ್ತಕಗಳನ್ನು ಪ್ರಕಟಿಸಿದ್ದಾಗಿ ಗೊರೂರು ಹೇಳಿದ್ದಾರೆ. ಇವುಗಳಲ್ಲಿ ಒಂದು ಕೃತಿಯೂ ದೊರತಿಲ್ಲ ಇದು ವಿಷಾದನೀಯ ಸಂಗತಿ. ಪ್ರಾಚೀನ ಕೃತಿಗಳಂತೆ ಸಮಕಾಲಿನ ಕೃತಿಗಳೂ ಕಾಲ ಗರ್ಭದಲ್ಲಿ ಅಡಗಿ ಹೋಗಿರುವುದು ಅತ್ಯಂತ ದೊಡ್ಡ ಸಾಂಸ್ಕೃತಿಕ ನಷ್ಟ. ಜನಪದ ಸಾಹಿತ್ಯ ಕುರಿತ ಅವರ ಮೂರು ವಿಶೇಷ ಉಪಾನ್ಯಾಸಗಳನ್ನು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿದೆ. ಗೊರೂರಿನ ದೇವಸ್ಥಾನಗಳನ್ನು ಕುರಿತ ಬರವಣಿಗೆ, ತಿರುಮಲಾರ್ಯನ ಕುರಿತ ಹೊತ್ತಿಗೆ, ಸಾಹಿತ್ಯ ಅಕಡೆಮಿಗಾಗಿ 'ಕಥಾ ಸರಿತ್ಸಾಗರ', ಇವುಗಳಲ್ಲದೆ ಗೊರೂರರ ಕಥಾ ಸಂಕಲನಗಳು 'ಹಳ್ಳಿಯ ಚಿತ್ರಗಳು', 'ಗರುಡ ಗಂಬದ ದಾಸಯ್ಯ', 'ನಮ್ಮ ಊರಿನ ರಸಿಕರು', 'ಬೆಟ್ಟದ ಮನೆಯಲ್ಲಿ ಮತ್ತು ಇತರ ಕಥೆಗಳು', 'ಕಥೆಗಳು ಮತ್ತು ವಿನೋಧ ಚಿತ್ರಗಳು', 'ಬೆಸ್ತರಕರಿಯ', 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು',-ಈ ಸಂಕಲಗಳಲ್ಲಿ ಗೊರೂರು

ಪ್ರಬಂಧಗಳು ಕಥೆಗಳೊಡನೆ ಸಂಕಲತವಾಗಿದೆ. 'ನಮ್ಮ ಊರಿನ ರಸಿಕರು ಪ್ರಬಂಧ ಸಮುದಾಯದಲ್ಲಿ ಒಂದು ವಿಶಿಷ್ಟ ಕೃತಿ ಇದನ್ನು ಚಿತ್ರ ಕಾದಂಬರಿಯೆಂದು ಕರೆಯಲಾಗಿದೆ.

ಗೊರೂರು ಕಾದಂಬರಿಗಳು ನಾಲ್ಕು: 'ಹೇಮಾವತಿ', 'ಪುನರ್ಜನ್ಮ', 'ಮೆರವಣಿಗೆ' ಮತ್ತು 'ಊರ್ವಶಿ' ಇವರ 'ಹೇಮಾವತಿ' ಚಲನಚಿತ್ರವಾಗಿ ಬೆಳ್ಳಿ ತೆರೆಕಂಡಿದೆ. 'ಆತ್ಮ ಕಥೆ ಅಥವಾ ನನ್ನ ಸತ್ಯಾನ್ವೇಷಣೆ', ಆತ್ಮಕಥೆ 'ಉಸುಬು', 'ಕನ್ಯಾ ಕುಮಾರಿ ಮತ್ತು ಇತರ ಕಥೆಗಳು', 'ಕಮ್ಮಾರ ವೀರಭದ್ರಾಚಾರಿ', 'ಗೋಪುರದ ಬಾಗಿಲು', 'ವೈಯಾರಿ', 'ಶಿವರಾತ್ರಿ' ಮೊದಲಾದವು ಗೊರೂರರ ಕಥಾಸಂಕಲನಗಳಾಗಿವೆ. ಜಗತ್ತಿನ ಮಹಾನ್ ವ್ಯಕ್ತಿಗಳು ಮೌಲಾನಾ ಅಬ್ದುಲ್ ಕಲಾಂ ಅಜಾದ್(ಜೀವನ ಚಿತ್ರಗಳು) ಹಳ್ಳಿಯಬಾಳು (ಒಂದು ವಿವೇಚನೆ) ಭಾರತ ಭಾಗ್ಯವಿದಾತ (ಗಾಂಧೀಜಿ ಕುರಿತ ಲೇಖನಗಳು) ಇವಲ್ಲದೆ ಅನೇಕ ಕಾದಂಬರಿ, ಕಥೆ , ಜೀವನ ಚರಿತ್ರೆಗಳನ್ನು ಗೊರೂರು ಅನುವಾದಿಸಿದ್ದಾರೆ. ಮಲೆನಾಡಿನವರು, ಭಕ್ತಿಯೋಗ, ಭಗವಾನ್ ಕೌಟಿಲ್ಯ ಅನುವಾದಿತ ಕೃತಿಗಳು.

ಗ್ರಾಮ, ಹೇಮಾವತಿ ನದಿ–ಈ ಎರಡು ಗೊರೂರರ ಸಾಹಿತ್ಯದಿಂದ ಅಮರವಾದವು. ಹೇಮಾವತಿ ಆ ಸಾಹಿತ್ಯ ಸಮಸ್ತಕ್ಕೂ ಸ್ಫೂರ್ತಿ. ಹೀಗೆ ಒಂದು ಊರಿನೊಡನೆ, ನದಿಯೊಡನೆ ಅಭಿನ್ನತೆ ಸಾಧಿಸಿದ ಲೇಖಕರು ವಿರಳವೇ ಎಂದು ಹೇಳಬಹುದು. ಇದರಿಂದ ಗೊರೂರರ ವಾಙ್ಮಯಕ್ಕೆ ಪ್ರಾದೇಶಿಕ ಸ್ವರೂಪ ಪ್ರಾಪ್ತವಾಗಿದ್ದರೂ ಅದೊಂದೇ ಅವರ ಬರವಣಿಗೆ ವೈಶಿಷ್ಟ್ಯವಲ್ಲ ಅವರು ಕೊಡುವ ಜೀವನ ಚಿತ್ರಣ ಪ್ರಾದೇಶಿಕವಾಗಿರುವಂತೆ ಪ್ರಾತಿನಿಧಿಕವೂ ಆಗಿದೆ ಎಂಬುದಂತು ಸತ್ಯ. ಗೊರುರರ ಗಾಂಧೀವಾದ, ಜಾನಪದ ಪ್ರಜ್ಞೆ ಅದ್ಭುತವಾದುದು.ಅವರು ಹೇಳುತ್ತಾರೆ: "ನಾನು ಸಾಹಿತಿಗಿಂತ ಜನಸಾಮಾನ್ಯರ ಮನುಷ್ಯ"[೧] ಎಂದು ಅವರ ನಂಬಿಕೆ "ಜಾನಪದ ಗುಣಗಳನ್ನೂ, ಶಕ್ತಿಯನ್ನೂ ಹೆಚ್ಚು ಹೆಚ್ಚು ನೋಡಿದಂತೆ ಭಾರತವನ್ನು ಆಧುನಿಕತೆ ಸರ್ವನಾಶದಿಂದ ತಪ್ಪಿಸಬಲ್ಲದು ಎಂಬ ನಂಬಿಕೆ ದೃಢವಾಗುತ್ತದೆ."[೨] ಈ ಜಾನಪದ ಮತ್ತು ಜನಪರ ದೃಷ್ಟಿಯ ಹಿನ್ನೆಲೆಯಲ್ಲಿ ಗೊರೂರು ಹಾಸ್ಯ ಪ್ರಜ್ಞೆ ಯಶಸ್ವಿಯಾಗಿ ಕೆಲಸಮಾಡಿದೆ.

ಇಂತಹ ಅದ್ವಿತಿಯ ಪ್ರತಿಭಾಶಕ್ತಿ ಗೊರೂರಿಗೆ ಸಂದ ಗೌರವ ಪ್ರಶಸ್ತಿಗಳು ಅವಿಸ್ಮರಣೀಯ ಇವರಿಗೆ ಮೈಸೂರು ವಿಶ್ವ ವಿದ್ಯಾನಿಲಯ ೧೯೭೪ರಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸನ್ಮಾನಿಸಿತು. ೧೯೮೨ ರಲ್ಲಿ ಶಿರಸಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧಕ್ಷರಾಗಿದ್ದರು. ಅವರ 'ಅಮೇರಿಕಾದಲ್ಲಿ ಗೊರೂರು' ಕೃತಿಗೆ ೧೯೮೦ರ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಅಖಿಲ ಭಾರತ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆ, ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದೇವಾರಜ ಬಹದ್ದೂರ್ ಪ್ರಶಸ್ತಿ, ಅಭಿಮಾನಿಗಳು ಅರ್ಪಿಸಿದ ಗೌರ ಸೂಚಕ ಗ್ರಂಥ 'ಗೊರೂರು ಗೌರವ ಗ್ರಂಥ' ಸಂಸ್ಮರಣಗ್ರಂಥ, ಹೇಮಾವತಿ ಚೇತನ ಗೊರೂರರ ಸಾಹಿತ್ಯ ಸೇವೆ ಸಂದ ಕಿರೀಟ "ಗೊರೂರು ಕೃತಿಗಳು ಬರು ಬರುತ್ತಾ ಹಳ್ಳಿಗಳ ಮಹಾ ಭಾರತಗಳೇ ಆಗುತ್ತಿವೆ". ಎಂಬ ವಿ.ಕೃ.ಗೋಕಾಕರ ಮಾತೊಂದು ಉಲ್ಲೇಖನೀಯವಾದುದು. ಮರೆಯಲಾರದ ಸಾಹಿತ್ಯ ಚೇತನ ಗೊರೂರು ಅನಾರೋಗ್ಯದ ಕಾರಣದಿಂದ ಬದುಕಲ್ಲಿ ನಡೆಸಿದ ಹೋರಾಟಕ್ಕೆ ಪೂರ್ಣವಿರಾಮ ವಿತ್ತು. ೧೯೯೧ ಸೆಪ್ಟಂಬರ್ ೨೮ರಂದು ನಿಧನರಾದರು.

ಗೊರೂರರ ಪ್ರವಾಸ ಕಥನ 'ಅಮೆರಿಕಾದಲ್ಲಿ ಗೊರೂರು' ಇದು ಅಮೆರಿಕಾದಲ್ಲಿ ಗೊರೂರು ಕುರಿತ ಪ್ರವಾಸ ಕಥನ. ಇಲ್ಲಿಯೂ ಅವರ ಹಾಸ್ಯ ಪ್ರಜ್ಞೆ ಮೇಲುಗೈಯಾಗಿದೆ, ತಮ್ಮ ಕಥನದ ಆರಂಭದಲ್ಲಿ ಅವರೆ ಹೇಳುತ್ತಾರೆ "ನನ್ನದು ಅಲೆಮಾರಿ ಸ್ವಭಾವ ಯಾವ ಬಂಧನಕ್ಕೂ ಸಿಕ್ಕದೆ ಹರಕೆ ಪದರದೇಶಿಯಂತೆ ಗ್ರಾಮ್ಯಕ್ಯ ರಾತ್ರಿಯಾಗಿ ಈ ರಾಷ್ಟ್ರದ ನೆಲೆ, ನೀರು, ಪರ್ವತ ಶ್ರೇಣಿ ದೇವಾಲಯ ವಿಶಾಲವಾದ ಅದ್ಭುತ ಬಯಲು, ಪ್ರಕೃತಿ ವೈಚಿತ್ರ್ಯಗಳನ್ನು ಅನುಭವಿಸುತ್ತ ಗುರುತು ಪರಿಚಯವಿಲ್ಲದ ಯಾವುದೊ ಕಡೆ ಕಂತೆ ಒಗೆಯ ಬೇಕೆಂಬುದು ನನ್ನ ಇಷ್ಟ"[೩] ಗೊರೂರರ ಸಾಹಿತ್ಯಕ್ಕೆ ಅನನ್ಯತೆಯನ್ನು ತಂದುಕೊಟ್ಟಿರುವುದು ಈ ಪ್ರವೃತ್ತಿಯಿಂದಲೇ ಆಗಿದೆ. ಅದು ದೇಶ್ಯ ಪಾಶ್ಚಿತ್ಯಗಳ, ನಗರ ಗ್ರಾಮಗಳ ಹಳತು ಹೊಸತನ್ನೂ ಸಂಕೇತಿಸುತ್ತದೆ. ಅವರ ಬಹುಪಾಲು ಕಥೆಗಳು ಹಳ್ಳಿಯ ಜೀವನ, ಪೇಟೆಯ ಜೀವನ ಎರಡುಕ್ಕೂ ಸಂಬಂಧಿಸಿದವುಗಳಾಗಿವೆ. ಎಲ್ಲಾ ಕಥೆಗಳಲ್ಲಿ ಪಾತ್ರಗಳಲ್ಲಿ ವೈವಿದ್ಯತೆಯಿದ್ದರು ಒಳತೋಟಿಯಿಲ್ಲವೆಂದು ಹೇಳಬಹುದು. 'ಬೂತಯ್ಯನ ಮಗ ಅಯ್ಯು' ಗೊರೂರ ಕಥೆಗಳಲ್ಲಿ

ಶ್ರೇಷ್ಠ ಕಥೆಯಾಗಿದೆ. ದ್ವೇಷದ ನೆಲೆಯಲ್ಲಿ ಭೀಕರವಾಗಿ ಆರಂಭವಾಗುವ ಕಥೆ ಸ್ನೇಹದ ನೆಲೆಗೆ ಹಬ್ಬಿ ಸುಕಾಂತ್ಯವಾಗಿ ಮುಗಿಯುತ್ತದೆ. "ಮುಗ್ಧತೆಗೆ ಸೆರೆಯಾಗದ ಆದರ್ಶತ್ವ, ಸರಳೀಕರಣಕ್ಕೆ ಸೆರೆಯಾಗದ ವಾಸ್ತವಿಕತೆ, ಅನುಕಂಪವನ್ನು ಬಿಡದ ತಿಳಿಹಾಸ್ಯ, ಮಾನವ ಸ್ವಭಾವದಲ್ಲಿ ನೈಜವಾದ ಮತ್ತು ಉದಾರವಾದ ಆಸಕ್ತಿ-ಇವು ಅವರ ಕಥಾಸಾಹಿತ್ಯಕ್ಕೆ ಜೀವನವನ್ನೂ ಬೆಲೆಯನ್ನೂ ತಂದಿವೆ."[೪] ಎಂಬ ಮಾತು ಉಲ್ಲೇಖನಾರ್ಹವಾಗಿದೆ.

ಗೊರೂರು 'ಹೇಮಾವತಿ', 'ಪುನರ್ಜನ್ಮ', 'ಊರ್ವಶಿ', 'ಮೆರವಣಿಗೆ' ಕಾದಂಬರಿಗಳನ್ನು ಬರೆದಿದ್ದಾರೆ. 'ಪುನರ್ಜನ್ಮ' ಸ್ವಾತಂತ್ರ್ಯ ಸಂಗ್ರಾಮ ಕಾಲದ ಒಂದು ಆದರ್ಶ ಪೂರ್ಣ ಕಥೆಯನ್ನು ಭಿತ್ತರಿಸುತ್ತದೆ. 'ಮೆರವಣಿಗೆ' ಈ ಕಾದಂಬರಿ ಮಠಾಧಿಪತಿಗಳ ಮೇಲೆ ಕಿಡಿ ಕಾರಿದ್ದಾರೆ. ವೈಚಾರಿಕ, ಮನೋಭಾವ ಮತ್ತು ವಿವೇಕ ಚಿಂತನಾ ಪರತೆವುಳ್ಳ ಕಾದಂಬರಿ. 'ಊರ್ವಶಿ' ಯಾವುದೋ ಒಂದು ಕೆಟ್ಟ ಗಳಿಗೆಯಲ್ಲಿ ತನ್ನ ತಪ್ಪಿಲ್ಲದೆ ಜಾರಿದ ಹೆಣ್ಣು ಮುಂದೆ ಎಚ್ಚೆತ್ತುಕೊಂಡು ಸಮಾಜಕ್ಕೆ ಸೇವೆ ಸಲ್ಲಿಸಿದ ಕರುಣಾಜನಕ ಕಥೆಯಾಗಿದೆ. ಹೀಗೆ ಈ ಕಾದಂಬರಿಗಳಲ್ಲೆಲ್ಲಾ ಸಮಾಜ ಮುಖಿಕಾಳಜಿಗಳನ್ನು, ಚಿಂತನೆಗಳನ್ನು ಕಾಣಬಹುದಾಗಿದೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಕಾದಂಬರಿಕಾರರಾಗಿ ಸಣ್ಣ ಕಥೆಗಾರರಾಗಿ ತ.ರಾ.ಸು ಎಂದೇ ಖ್ಯಾತರಾದ ಸುಬ್ಬರಾಯರು ಚಿತ್ರದುರ್ಗ ಜಿಲ್ಲೆಯ ಹರಿಹರ ತಾಲ್ಲೂಕಿನ ಮಲೆಬೆನ್ನೂರಿನಲ್ಲಿ ತಳುಕಿನ ರಾಮಸ್ವಾಮಿ ಹಾಗೂ ಸೀತಮ್ಮನವರಿಗೆ ಮಗನಾಗಿ ೧೨-೪-೧೯೨೦ರಲ್ಲಿ ಜನಿಸಿದರು ಇವರು ಸಾಹಿತಿಯಾಗಿ ರೂಪುಗೊಳ್ಳುವಲ್ಲಿ ಕೌಟಿಂಬಿಕ ವಾತಾವರಣ ಮಹತ್ವದಾಗಿತ್ತು. ಇವರ ಅಜ್ಜ ಸುಬ್ಬರಾಯರು ದೊಡ್ಡ ಆಶುಕವಿಗಳು, ತಂದೆ ವಕೀಲರಾದರೂ ಸಾಹಿತ್ಯ ಪ್ರೇಮಿಗಳು ಇವರಿಗೂ ಕಥೆ ಪದ್ಯಗಳನ್ನು ಬರೆಯುವ ಅಭ್ಯಾಸವಿತ್ತು. ಇವರ ದೊಡ್ಡಪ್ಪ ಕನ್ನಡ ನವೋದಯ ಸಾಹಿತ್ಯದ ಹರಿಕಾರರಲ್ಲಿ ಒಬ್ಬರಾದ ತಳುಕಿನ ವೆಂಕಣ್ಣಯ್ಯ, ಚಿಕ್ಕಪ್ಪಸಾಹಿತಿ ತ.ಸು.ಶಾಮರಾಯರು, ಸೋದರಮಾವ ಹೆಸರಾಂತ ನಾಟಕಕಾರರಾದ ಬಿ. ಸೀತಾರಾಮಶಾಸ್ತ್ರಿ ಇಷ್ಟೆಲ್ಲ ಸಾಹಿತ್ಯದ ಕೌಟುಂಬಿಕ ವಾತಾವರಣವಲ್ಲದೆ ತ.ರಾ.ಸು ಮನೆಗೆ ಆಗಾಗ ಬೇಟಿ ಕೊಡುತ್ತಿದ್ದ ಬಿ.ಎಂ.ಶ್ರೀ, ಮಾಸ್ತಿ, ವಿ.ಸೀ ದೇವುಡು

ನರಸಿಂಹಶಾಸ್ತ್ರಿ ಮೊದಲಾದ ಸಾಹಿತ್ಯ ದಿಗ್ಗಜರ ಒಡನಾಟ ಮುಂದೆ ಬೆಳೆಯುತ್ತಾ ಸಿದ್ಧವ್ವನ ಹಳ್ಳಿ ಕೃಷ್ಣಶರ್ಮ ಹಾಗೂ ಅ.ನ.ಕೃ ಮೊದಲಾದವರಿಂದ ಪ್ರಭಾವಿತರಾದರು.

ತ.ರಾ.ಸು ಅವರ ಬಾಲ್ಯ ಯೌವ್ವನಗಳ ಹಲವು ಪ್ರಭಾವಗಳು ಅವರ ಸಾಹಿತ್ಯದ ಸ್ವರೂಪವನ್ನು ರೂಪಿಸದವು. ಮುಖ್ಯವಾಗಿ ಇತಿಹಾಸದ ದುರಂತ ಕಥೆಹೇಳುವ ಚಿತ್ರದುರ್ಗದ ಪರಿಸರ ಆಸ್ಥಳದೊಂದಿಗೆ ತ.ರಾ.ಸು ಬೆಳೆಸಿಕೊಂಡ ಆತ್ಮೀಯ ಸಂಬಂಧ ತಮ್ಮ ಕೊನೆಯ ಕಾದಂಬರಿ 'ದುರ್ಗಾಸ್ತಮಾನ'ದ ಮುನ್ನುಡಿಯಲ್ಲಿ ಅವರು ಹೀಗೆ ಬರೆದರು 'ಚಿತ್ರದರ್ಗದ ಜನರಿಗೆ ಚಿತ್ರದುರ್ಗ ಎಂದರೆ ಒಂದು ಊರಲ್ಲ, ಕೋಟೆಯಲ್ಲ, ಬೆಟ್ಟವಲ್ಲ ತಮ್ಮ ಕರುಳಿಗೆ ಹೊಂದಿಕೊಂಡು ಬೆಳೆದ ಜೀವಂತ ವಸ್ತು", ಚಿತ್ರದುರ್ಗದ ಉತ್ಸಾಹೀ ಇತಿಹಾಸಕಾರರು ಹುಲ್ಲೂರು ಶ್ರೀನಿವಾಸ ಜೋಯಿಸರು ತ.ರಾ.ಸು ಅವರ ದುರ್ಗದ ಅಭಿಮಾನಕ್ಕೆ ನೀರೆರೆದು ದುರ್ಗದ ಇತಿಹಾಸವನ್ನು ಜೀವಿಂತಗೊಳಿಸಿದರು.

ತ.ರಾ.ಸು ಅವರ ವಿದ್ಯಾಭ್ಯಾಸ ಚಿತ್ರದುರ್ಗ, ಶಿವಮೊಗ್ಗ, ತುಮಕೂರು, ಬೆಂಗಳೂರು ನ್ಯಾಷನಲ್ ಹೈಸ್ಕೂಲ್‌ಗಳಲ್ಲಿ ಇವರ ಓದು ಸೀನಿಯರ್ ಇಂಟರ್ ಮೀಡಿಯೇಟ್‌ವರಗೆ ಮಾತ್ರ, ತುಂಬಾ ವಾಚಾಳಿಯಾಗಿದ್ದ ತ.ರಾ.ಸುರವರನ್ನು ದೊಡ್ಡಪ್ಪ ತಳುಕಿನ ವೆಂಕಣಯ್ಯನವರು ಮಾತನಾಡುವುದಕ್ಕಿಂತ ಬರೆದು ತೋರಿಸು ಎಂದು ಪ್ರೇರೇಪಿಸಿರದರು. ಈ ಪ್ರೇರಣೆ ಹುಮ್ಮಸ್ಸಿನಲ್ಲಿ ತಮ್ಮ ಚೊಚ್ಚಲ ಕಥೆ 'ಪುಟ್ಟನ ಚೆಂಡು' ಬರೆದು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಪಾದಾರ್ಪಣೆ ಮಾಡಿದರು. ಮುಂದೆ ಕಥೆಗಾರರಾಗಿ, ಕಾದಂಬರಿಕಾರರಾಗಿ, ಪ್ರತಿಕೋಧ್ಯಮಿಯಾಗಿ ಸಾಹಿತ್ಯ ಸೇವೆಯ ಜೊತೆಗೆ ರಾಜಕೀಯ ಕ್ಷೇತ್ರದಲ್ಲೂ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು ಶಾಲಾ ವಿದ್ಯಾಭ್ಯಾಸದಲ್ಲಿ ಅನಾಸಕ್ತರಾಗಿದ್ದ ತ.ರಾ.ಸು ಇತರೆ ಪುಸ್ತಕಗಳ ಓದಿನಲ್ಲಿ ಉತ್ಸುಕರಾಗಿದ್ದರು ಚಿಕ್ಕಂದಿನಲ್ಲಿ ಓದಿದ ಗಳಗನಾಥರ ಕಾದಂಬರಿಗಳು, ದೇವುಡು ನರಸಿಂಹ ಶಾಸ್ತ್ರೀಗಳು ಕೊಟ್ಟ 'ಮಯೂರ' ಐತಿಹಾಸಿಕ ಕಾದಂಬರಿ ಇವರ ಐತಿಹಾಸಿಕ ಕಾದಂಬರಿಗಳ ರಚನೆಗೆ ಪ್ರಚೋದಿಸಿದವು, ಚಿತ್ರದುರ್ಗದ ಬೆಟ್ಟ ಗುಡ್ಡಗಳ ಶ್ರೀನಿವಾಸ ಜೋಯಿಸರು ಹೇಳಿದ ಕಥೆಗಳು ಅನುಭವಿಸಿದ,

ನೋಡಿದ ಜೀವನ ಪರಿಸರ ಇವೆಲ್ಲಾ ಇವರು ಸಾಹಿತಿಯಾಗಿ ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದವು.

ಆದರ್ಶತ್ವದ ಬೆನ್ನು ಹತ್ತಿ ಧೀರ ಜೀವನ ನಡೆಸುತ್ತಿದ್ದ ತಿರುಮಲೆ ತಾತಾಚಾರ್ಯ ಶರ್ಮರ ಪತ್ರಿಕೆ ಅವರ ಜೊತೆಗೆ ಸಿದ್ದವ್ವನಹಳ್ಳಿ ಕೃಷ್ಣ ಶರ್ಮ ಇಬ್ಬರ ಶಕ್ತಿಯುತ ತೇಜಸ್ವಿ ಶೈಲಿ, ಅವರ ಧ್ಯೇಯಗಳನ್ನು ಜೀವನ ರೀತಿಯನ್ನು ಬರಹವನ್ನು ಮೆಚ್ಚಿ ಅವರಂತೆಯೇ ಬರಹವನ್ನೇ ವೃತ್ತಿಯನ್ನಾಗಿ ಮಾಡಿಕೊಂಡವರು. ತ.ರಾ.ಸು ಪತ್ರಿಕೋದ್ಯಮಿಯಾಗಿ ಅರೆಹೊಟ್ಟೆ ಊಟಮಾಡಿ, ಆದರ್ಶತ್ವ ಕೇಳುವ ಬೆಲೆಯನ್ನು ತೆತ್ತರು, ಅಪಾರ ಅನುಭವಿ ತ.ರಾ.ಸು ವಿಶ್ವಕರ್ನಾಟಕ, ಪ್ರಜಾಮತ, ಪತ್ರಿಕೆಗಳಲ್ಲಿ ಉಪಸಂಪಾದಕರಾಗಿ, ಚೇತನ, ನವೋದಯ, ವಿಚಾರ ವಾಣಿ ಕಾಲದೂತ, ಶ್ರೀಶಂಕರಕೃಪ ಪತ್ರಿಕೆಗಳಲ್ಲೆಲ್ಲಾ ಕಾರ್ಯ ನಿರ್ವಹಿಸಿದರು. ತ.ರಾ.ಸು ಸ್ವಾತಂತ್ರ್ಯ ಹೋರಾಟಗಾರರಾಗಿ, ಕನ್ನಡ ಚಳುವಳಿಗಾರರಾಗಿ ನಾಡು ನುಡಿಗಾಗಿ ಹೋರಾಡಿದರು. ತಮ್ಮ ೯-೧೦ ನೇ ವಯಸ್ಸಿನಲ್ಲೇ ಚಿತ್ರದುರ್ಗದಲ್ಲಿ ಅಸ್ಪೃಶ್ಯತೆ ವಿರುದ್ಧ ಭಾಷಣ ಮಾಡಿದ್ದರೂ ಮನೆಗಿಂತ ಹೊರಗಿನ ಪರಿಸರ ಹಾಗೂ ಗೆಳೆಯರೊಂದಿಗೆ ಹೆಚ್ಚು ನಿಕಟವಾಗಿದ್ದ ತ.ರಾ.ಸು ಗುಂಡೂರಾವ್ ಎನ್ನುವ ಅವರ ಹಳೆಯ ಸ್ನೇಹಿತರ ಒಡನಾಟದಲ್ಲಿ ತಿಲಕ್, ಗೋಖಲೆ, ಅರವಿಂದರ ಗ್ರಂಥಗಳ ಅಧ್ಯಯನ ಮಾಡಿದ್ದರೂ ಪೋಲಿಸರಿಂದ ತಪ್ಪಿಸಿಕೊಂಡು ಚಿತ್ರದುರ್ಗದಲ್ಲಿದ್ದು ಎಂ.ಎನ್.ಶೆಟ್ಟಿ ಎಂಬ ಕ್ರಾಂತಿಕಾರ ಮಿತ್ರ ನೀಡಿದ ಕಾರ್ಲ್‌ಮಾರ್ಕ್ಸ್, ಏಂಜೆಲ್ಸ್ ಕೃತಿಗಳು; ಜಲಿಯನ್ ಬಾಲ್ ಬಾಗ್ ವರದಿ; ಸೆಡಿಸಷನಲ್ ಕಮಿಟಿ ರಿಪೋರ್ಟ್; ಬಂಗಾಲದ ಡೆಕ್ಕಾ ಅನೂಶಿಲನಾ ಸಭಾ ಎಂಬ ಕ್ರಾಂತಿಕಾರಿ ಸಂಸ್ಥೆ ನಿರ್ಮಿಸಿದ ರಾಜಕೀಯ ಸಾಹಿತ್ಯವನ್ನು ಓದಿದ್ದಲ್ಲದೆ ಆ ಕಾಲದ ಮಹಕ್ರಾಂತಿ ವೀರರಾದ ಚಂದ್ರಶೇಖರ ಅಜಾದ್, ರಾಮ್ ಪ್ರಸಾದ್ ಬಿಸ್ಮಿಲ್ಲಾ ಜತೀನ್‌ದಾಸ್, ಭಗತ್‌ಸಿಂಗ್ ಮುಂತಾದವರ ಜೀವನ ರೋಮಾಂಚಕ ಕಥೆ ಕೇಳಿ ತಾನು ಅಂತಹ ಕ್ರಾಂತಿಕಾರರ ತಂಡವೊಂದನ್ನು ನಿರ್ಮಾಣ ಮಾಡಬೇಕು ಎಂದು ತನ್ನ ಹಾಗೇಯೇ ಯೋಚಿಸುವ ಮಿತ್ರರ ಗುಂಪೊಂದನ್ನು ಕಲೆ ಹಾಕಿ'ಪ್ರಭಾತ್ ಸೋಷಿಯಲಿಸ್ಟ್ ಲೀಗ್' ಎನ್ನುವ ಸಂಸ್ಥೆಯೊಂದನ್ನು ಹುಟ್ಟು ಹಾಕಿದರು. ಮುಂದುವರೆದು ೧೯೭೩ರ ಸ್ವಾತಂತ್ರ್ಯ ಚಳುವಳಿಯಲ್ಲಿ ಚಿತ್ರದುರ್ಗದ

ಕಾಂಗ್ರೇಸ್ ಮುಖಂಡ ಸಿದ್ಧವ್ವನಹಳ್ಳಿ ನಿಜಲಿಂಗಪ್ಪನವರು ಚಳುವಳಿಯಲ್ಲಿಯಲು ಪ್ರೇರೆಪಿಸಿದರು, ಹಳ್ಳಿಗಳಲ್ಲಿ ಭಾಷಣ ಮಾಡುವಾಗ 'ಬಾಗೂರ್' ಎಂಬ ಹಳ್ಳಿಯಲ್ಲಿ ದಸ್ತಗಿರಿಯಾಗಿ ಚಿತ್ರದುರ್ಗ ಜೈಲು ಸೇರಿದರು ಮತ್ತೆ ೧೯೩೯ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿ ೧೯೪೨ ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಶಾಲಾ ಕಾಲೇಜುಗಳ ಮುಂದೆ ಪಿಕೆಟಿಂಗ್, ಸಾರ್ವಜನಿಕ ಭಾಷಣ, ರೈಲು ತಡೆ, ಟೆಲಿಗ್ರಾಫ್ ತಂತಿ ಕತ್ತರಿಸುವುದು ಮುಂತಾದ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ತೊಡಗಿ ತುಮಕೂರಿನ ಜೈಲು ಸೇರಿದರು. ಗಾಂಧಿಯವರ ಬಗೆಗೆ ಒಲವಿದ್ದರೂ ಕಾಂಗ್ರೇಸ್ ಬಿಟ್ಟು ಸೋಷಿಯಲಿಸ್ಟ್ ಪಕ್ಷ ಸೇರಿದರು. ಹೀಗೆ ಮುಂದುವರಿದು ರಾಜಕೀಯ ಜೀವನದಲ್ಲಿ ಸ್ವತಂತ್ರ ನಂತರ ಮೈಸೂರು ಪುರಸಭಾ ಕೌನ್ಸಿಲ್‌ರಾಗಿ ಗೆದ್ದು ವಿಧಾನ ಪರಿಷತ್ ಸದಸ್ಯತ್ವಕ್ಕೆ ಸ್ಪರ್ಧಿಸಿಸೋತರು.

೧೯೪೪-೪೬ರ ವರಗೆ ಪ್ರಗತಿಶೀಲ ಚಳುವಳಿಯಲ್ಲಿ; ೧೯೬೦ ರಿಂದ ೧೯೭೦ರ ವರಗೆ ಕನ್ನಡ ಚಳುವಳಿಯಲ್ಲಿ ಭಾಗವಹಿಸಿದ್ದಲ್ಲದೆ ರಾಜ್ಯ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಸರಾಗಿ ಸೇವೆ ಸಲ್ಲಿಸಿದ್ದಾರೆ. ೧೯೬೯ರಲ್ಲಿ ಬರ್ಲಿನ್ 'ವರ್ಲ್ಡ್‌ಪೀಸ್ ಕಾನ್ಫರೆನ್ಸ್'ನಲ್ಲಿ ಭಾಗವಹಿಸಿಲು ಭಾರತದ ಪ್ರತಿನಿಧಿಯಾಗಿ ಸೋವಿಯತ್ ರಷ್ಯಾ ಹಾಗೂ ಪಶ್ಚಿಮ ಜರ್ಮನಿಗೆ ಪ್ರವಾಸ ಮಾಡಿದರು. ೧೯೪೬ರಲ್ಲಿ ತ.ರಾ.ಸುಅವರ ಮೊದಲನೆ ಕಥಾ ಸಂಕಲನ 'ರೂಪಸಿ' ಪ್ರಕಟವಾಯಿತು ಇದೇ ಸರಿ ಸುಮಾರಿಗೆ ಅವರ ಮೊದಲನೆ ಕಾದಂಬರಿ 'ಮನಗೆ ಬಂದ ಮಹಾಲಕ್ಷ್ಮೀ' ಪ್ರಕಟವಾಯಿತು ಇಲ್ಲಿಂದ ಮೂತ್ತಾರು ವರ್ಷಗಳ ಕಾಲ ತ.ರಾ.ಸು ಸಾಹಿತ್ಯ ರಚನೆ ಮಾಡಿದರು ಸುಮಾರು ಹದಿನೆಂಟು ವರ್ಷಗಳಲ್ಲಿ ತ.ರಾ.ಸು ಇಪ್ಪತ್ತೊಂದು ಕತೆಗಳನ್ನು ಬರೆದರು. ಆದರೆ ಇದು ಅವರ ಮುಖ್ಯ ಮಾಧ್ಯಮವಾಗಲಿಲ್ಲ, 'ರೂಪಿಸಿ' (೧೯೪೬), 'ತೊಟ್ಟಿಲು ತೂಗಿತು'(೧೯೪೭), 'ಗಿರಿಮಲ್ಲಿಗೆಯ ನಂದನದಲ್ಲಿ (೧೯೫೭)' ಈ ಸಂಗ್ರಹ ಪ್ರಕಟವಾದ ಹತ್ತು ವರ್ಷಗಳ ನಂತರ ತ.ರಾ.ಸು ಅವರ ಕಡೆಯ ಕಥಾ ಸಂಗ್ರಹ 'ಇದೇ ನಿಜವಾದ ಸಂಪತ್ತು' (೧೯೬೫), ಪ್ರಕಟವಾಯಿತು. (ಅವರ ಸಮಗ್ರ ಸಣ್ಣ ಕಥೆಗಳಲ್ಲಿ ಇನ್ನೆರಡು ಕಥೆಗಳು 'ಕುಂಟುಕಾಲಿನ ಕತ್ತೆ' ಮತ್ತು 'ಎಲ್ಲಿದ್ದ ಇವನು?' ಸೇರಿವೆ) ತ.ರಾ.ಸು ಅವರೇ ತಮ್ಮ ಕಥೆಗಳ ಬೆಲೆ ಕಡಿಮೆಯಾದುದಕ್ಕೆ ಕಾರಣ ಹೇಳುತ್ತಾರೆ.

"ಕದಾಂಬರಿಯನ್ನು ಬರೆಯುವುದಕ್ಕಿಂತಲ್ಲೂ ಸಣ್ಣ ಕಥೆಯನ್ನು ಬರೆಯುವುದು ಕಠಿಣವಾದ ಕಲಾ ಮಾರ್ಗ ಎಂಬ ಸತ್ಯ ನನಗೆ ಗೋಚರಿಸಿದೆ", (ಇದೇ ನಿಜವಾದ ಸಂಪತ್ತು' ಮುನ್ನುಡಿ) ತ.ರಾ.ಸು ಅವರ ಕಾದಂಬರಿಯಗಳನ್ನು ಮೂರು ವರ್ಗಗಳಾಗಿ ವಿಂಗಡಸಬಹುದು.

ಪ್ರಗತಿಶೀಲ ಪಂಥದ ಉತ್ಸಾಹೀ ಅತಿರಥರಾಗಿ ಬರೆದ ಸಾಮಾಜಿಕ ಕಾದಂಬರಿಗಳು 'ರಕ್ತತರ್ಪಣ' (೧೯೪೬), 'ಜೀತದಜೀವ' (೧೯೪೯), 'ಮನೆಗೆ ಬಂದ ಮಹಾಲಕ್ಷ್ಮಿ'(೧೯೫೮),'ಕಾಮಾಕ್ಷಿ'(೧೯೪೯),'ಪುರುಷಾವತಾರ'(೧೯೫೧),'ಮುಂಜಾವಿನಿಂದಮ ೦ಂಜಾವು'(೧೯೫೦), 'ಬೇಡದಮಗು'(೧೯೫೪), 'ಮಸಣದ ಹೂ'(೧೯೫೩), 'ಬಿಡುಗಡೆಯಬೇಡಿ'(೧೯೫೩), 'ಚಂದನಗೊಂಬೆ'(೧೯೬೫), 'ಚಕ್ರತೀರ್ಥ'(೧೯೬೭), 'ಸಾಕುಮಗಳು'(೧೯೫೫),'ಬೆಂಕಿಯಬಲೆ'(೧೯೫೧), 'ನಾಗರಹಾವು'(೧೯೫೫),'ಎರಡು ಹೆಣ್ಣುಒಂದುಕಣ್ಣು','ಸರ್ಪಮತ್ಸರ',(೧೯೫೬),'ಕೇದಿಗೆವನ'(೧೯೬೦),'ಕಣ್ಣುತೆರೆಯಿತು',(೧೯೫೯) ,'ವಿಷಪ್ರಾಶನ'(೧೯೫೮),'ಹಂಸಗೀತೆ'(೧೯೫೨),'ಮೊದಲನೋಟ','ಗೃಹಪ್ರವೇಶ','ರಾಜೇಶ್ವರಿ', (೧೯೮೨),'ಚಂದವಳ್ಳಿಯತೋಟ'(೧೯೫೪),'ಮಾರ್ಗದರ್ಶಿ','ಭಾಗ್ಯಶಿಲ್ಪಿ'(೧೯೫೯),'ಬೆಳಕಿನಬೀದಿ'(೧೯೬೧),'ಮರುಳುಸೇವೆ'(೧೯೬೨),'ಗಾಳಿಮಾತು'(೧೯೬೩), ಬೇಲಿಮೆಯ್ದಹೊಲ' ೧೯೬೨) 'ಬಂಗಾರಿ'(೧೯೬೨), 'ಆಕಸ್ಮಿಕ'(೧೯೫೭), 'ಅಪರಾಧಿ' (೧೯೫೮), 'ಪರಿಣಾಮ'(೧೯೬೬), 'ಹಾವುಹಿಡವರು' (೧೯೬೬), 'ಗ್ರಹಣಬಿಟ್ಟು' (೧೯೭೩), 'ಎಲ್ಲಾ ಅವನ ಹೆಸರಿನಲ್ಲಿ' (೧೯೬೩), 'ಪಂಜರಪಕ್ಷಿ' (೧೫೯೯), 'ಒಮ್ಮೆ ನಕ್ಕನಗು'(೧೯೬೦), 'ಶಿಶುದೈತ್ಯ', (೧೯೫೭), 'ಹೆಣ್ಣು ಕಟ್ಟಿದಮನೆ' (೧೯೬೧), 'ಶ್ರೀಚಕ್ರೇಶ್ವರಿ'(೧೯೭೩), 'ಶ್ರೀಚಕ್ರೇಶ್ವರಿ೨' (೧೯೫೮), 'ಕಾರ್ಕೋಟ' (೧೯೫೮),'ಯಕ್ಷಪ್ರಶ್ನೆ' (೧೯೬೩), 'ಬಯಕೆಯಬಂದಿ'(೧೯೭೩),'ಪರಿಮಳದಉರುಳು'(೧೯೬೮), 'ಖೋಟಾನೋಟು' (೧೯೬೮),'ಲಾವಣ್ಯವತಿ'(೧೯೫೮), 'ಚಂದುರಂಗಮನೆ'(೧೯೬೦),'ಅಕ್ಕಮ್ಮನಭಾಗ್ಯ'(೧೯೭೩), 'ಶುಕ್ರವಾರದಲಕ್ಷ್ಮಿ'(೧೯೫೯), 'ಸಿಡಿಲಮೊಗ್ಗು'(೧೯೫೬) 'ಕೀರ್ತಿನಾರಾಯಣ'(೧೯೫೭), 'ಶಿಲ್ಪಶ್ರೀ'(೧೯೬೬),'ಅಗ್ನಿರಥಮುಕ್ತಿಪಥ'(೧೯೬೬),'ಕಸ್ತೂರಿಕಂಠ'(೧೯೬೬), 'ಕಂಬನಿಯ ಕುಯಿಲು'(೧೯೫೩),'ರಾಜ್ಯದಾಹ'(೧೯೬೬), 'ರಕ್ತರಾತ್ರಿ'(೧೯೬೬), 'ತಿರುಗುಬಾಣ'(೧೯೫೪),

'ಹೊಸಹಗಲು'(೧೯೫೭),'ವಿಯೋತ್ಸವ'(೧೯೫೯),'ದುರ್ಗಾಸ್ತಮಾನ'(೧೯೭೯), ಉಪನಿಷತ್ತಾಧಾರಿತಕಾದಂಬರಿಗಳು:'ಬೆಳಕುತಂದಬಾಲಕ'(೧೯೬೧),ನಾಲ್ಕುXನಾಲ್ಕು'(೧೯೭೯), ಇಂತಹಕಾದಂಬರಿಗಳನ್ನುಬರೆದಿದ್ದಾರೆ.'ಜ್ವಾಲ'(೧೯೫೧),'ಮೃತ್ಯುಸಿಂಹಾಸನ'(೧೯೬೪), 'ಅನ್ನಾವತಾರ'(೧೯೫೪), 'ಮಹಾಶ್ವೇತೆ' (೧೯೫೪),ಎಂಬ ನಾಲ್ಕು ನಾಟಕಗಳನ್ನು ಬರೆದಿದ್ದಾರೆ.

ಜೀವನಚರಿತ್ರೆ,ರೇಖಾಚಿತ್ರಗಳು,ಅ.ನ.ಕೃ,(೧೯೪೭),ತ.ರಾ.ಸುಸಂಪಾದಿತಕೃತಿಗಳು"ಶ್ರೀಜಗದ್ಗುರು(ಲ.ಸ.ಶಾಸ್ತ್ರಿಅವರೊಂದಿಗೆ೧೯೭೩),ಶ್ರೀಶಿವಾರ್ಪಣಂ(ಬಸವಿರಾಮಶರ್ಮ,ಜಿ.ಎಚ್.ಕೃಷ್ಣಮೂರ್ತಿಅವರೊಂದಿಗೆ),ನವಸಾಕ್ಷರರಿಗೆ:೧೯೭೭,ತ.ರಾ.ಸು ಬಗೆಗೆ. ಪ್ರಕಟಗೊಂಡ ಕೃತಿಗಳು 'ಗಿರಿಮಲ್ಲಿಗೆ' (ತ.ರಾ.ಸು ಸಂಸ್ಮರಣ ಸಂಪುಟ. ೧೯೮೫), ತ.ರಾ.ಸು ಬದುಕು ಬರೆಹ–ತ.ಸು ಶಾಮರಾವ್, ಮಂಥನ (ಆತ್ಮ ವಿಮರ್ಶಾ ಲೇಖನಗಳ ಸಂಕಲನ, ೧೯೯೨), ಹಿಂತಿರುಗಿ ನೋಡಿದಾಗ ತ.ರಾ.ಸು ಮತ್ತು ಅಂಬುಜಾ(೧೯೯೦), ಸ್ನೇಹ ಸಮನ್ವಯ ಸಂ.ನಾ, ಪ್ರಭಾಕರ್, (೧೯೯೩), ವರ ಲೇಖಕ–ಛಾಯಾಪತಿ(೧೯೮೭) ಮೊದಲಾದವುಗಳು ತ.ರಾ.ಸು ರವರ ಸಾಹಿತ್ಯ ಕೃತಿಗಳಾಗಿವೆ. 'ಬಿಡುಗಡೆ ಬೇಡಿ' ವಿದ್ಯಾವಂತೆ ಪ್ರಜ್ಞಾವಂತೆ ಯುವತಿಯೊಬ್ಬಳಿಗೆ ಎದುರಾಗುವ ಸ್ತ್ರೀ ಸ್ವಾತಂತ್ರ್ಯವನ್ನು ಕುರಿತ ಕಾದಂಬರಿ. ಈ ಕಾದಂಬರಿ ಪ್ರಜ್ಞಾ ಪ್ರವಾಹ ತಂತ್ರದಲ್ಲಿದೆ. 'ಚಂದನದ ಗೊಂಬೆ' ಅನಾಥ ಹೆಣ್ಣೊಬ್ಬಳು ಪ್ರಸ್ತುತ ಸಮಾಜದಲ್ಲಿ ಶೋಷಣೆಗೊಳಾಗಿ ಹೇಗೆ ದರುಂತವಾಗುತ್ತಾಳೆನ್ನುವುದು ಚಂದನ ಗೊಂಬೆಯ ಕಥಾವಸ್ತು.

"ಮುಂಜಾವಿನಿಂದ ಮುಂಜಾವು" ಸಣ್ಣ ಅಂಗಡಿಯ ಮಾಲೀಕ, ಕೂಲಿಕಾರ, ಮುದ್ರಾಣಾಲಯದ ಕೆಲಸಗಾರ, ಪತ್ರಿಕೋದ್ಯಮಿ ಇವರ ಬದುಕನ್ನು ತ.ರಾ.ಸು. ಈ ಕಾದಂಬರಿಯಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. 'ನಾಗರಹಾವು' ಎರಡು ಹೆಣ್ಣು ಒಂದು ಗಂಡು, ಸರ್ಪಮತ್ಸರ, ಹೀಗೆ ಮೂರು ಭಾಗಗಗಳಲ್ಲಿರುವ ಕಾದಂಬರಿಯ. ಮನುಷ್ಯ ಇಷ್ಟಅನಿಷ್ಟಗಳು ಸಮಾಜ ನಂಬಿರುವ ಮೌಲ್ಯಗಳಿಗೆ ವಿರುದ್ಧವಾದ ಆ ಮನುಷ್ಯನ ಜೀವನದಲ್ಲಾಗುವ ದುರಂತವನ್ನು ಚಿತ್ರಿಸುವ ಕತೆ. ರಕ್ತ ತರ್ಪಣ' ಸ್ವತಃ ಸ್ವಾತಂತ್ರ್ಯ ಹೋರಾಟಗಾರರಾದ ತ.ರಾ.ಸು ಸ್ವಾತಂತ್ರ್ಯಾಂದೋಲನದ ಹಿನ್ನೆಲೆಯಲ್ಲಿ ರಚಿಸಿರುವ

ಕಾದಂಬರಿ. ಸ್ವಾತಂತ್ರ್ಯಾಂದೋಲನದಲ್ಲಿ ಜಾತಿ, ಮತ, ಧರ್ಮಗಳನ್ನು ಲೆಕ್ಕಿಸಿದೆ ಒಂದಾಗಿ, ಗುಲಾಮಗಿರಿಯ ವಿರುದ್ಧ ಸಿಡಿದು ನಿಂತ ಗ್ರಾಮದ ಚಿತ್ರಣ ಕೊಡುವ ಕಾದಂಬರಿ. ಯಕ್ಷ ಪ್ರಶ್ನೆ–ಮಹಾಭಾರತದಲ್ಲಿ ಬರುವ ಯಕ್ಷ ಪ್ರಶ್ನೆ ಕಥೆಯನ್ನು ಸಾಂಕೇತವಾಗಿ ಬಳಸಿಕೊಂಡು ತ.ರಾ.ಸು ಈ ಕಥೆಯನ್ನು ಹೆಣೆದಿದ್ದಾರೆ, ತನ್ನ ಗಂಡನ ಹೃದಯವನ್ನು ಸಮರ್ಪಿಸಿಕೊಳ್ಳಲಾಗದೆ ತೊಳಲಾಡುವ ಹೆಣ್ಣು. ಹಳೆಯನದನ್ನು ಮರೆತು ಹೊಸ ಬಾಳನ್ನು ಬದುಕಬೇಕೆನ್ನುವ ಹಂಬಲದಿಂದ ಹೊರಟ ಗಂಡು ಇವರೆಲ್ಲರ ಸುತ್ತ ನಡೆಯುವ ಕತೆ ಯಕ್ಷ ಪ್ರಶ್ನೆ.

ಮಸಣದ ಹೂವು–ವೇಶ್ಯಾಜೀವನದ ಹಲವು ಮುಖಗಳನ್ನು ತೋರಿಸುವ ಕಾದಂಬರಿ. ಈ ಜ್ವಲಂತ ಸಮಸ್ಯೆಯು ಹುಟ್ಟು ಬೆಳವಣಿಗೆಯ ಬಗೆಗೆ ವಿಶ್ಲೇಷಿಸಿ ಸಮಾಜದ ಎದುರು ಇರಿಸಿದ್ದಾರೆ. ಪರಿಹಾರಗಳನ್ನು ಸೂಚ್ಯವಾಗಿ ಹೇಳಿದ್ದಾರೆ. ಕಂಬನಿಯ ಕುಯಿಲು: ಮದಕರಿ ನಾಯಕ ಮಕ್ಕಳಿಲ್ಲದೆ ಮರಣನ್ನಪ್ಪಿದಾಗ ಸಿಂಹಾಸನದ ಉತ್ತರಾಧಿಕಾರಿಯ ಸಮಸ್ಯೆ ತಲೆದೋರುತ್ತದೆ. ಮದಕರಿ ನಾಯಕ ನಂತರ ಅವರ ಅಣ್ಣನ ಮಕ್ಕಳಾದ ಲಿಂಗಣ್ಣನಾಯಕ ಹಾಗೂ ಚಿಕ್ಕಣ್ಣ ನಾಯಕರಿಗೆ ಆ ಹಕ್ಕು ಸಲ್ಲಬೇಕೆಂದು ಸೇನೆಯ ಮುಖ್ಯಸ್ಥನಾದ ದಳವಾಯಿ ಮುದ್ದಣ್ಣ ಮತ್ತು ದೇಸಣ್ಣನವರವಾದ. ರಕ್ತರಾತ್ರಿ: ಕಂಬನಿ ಕುಯಿಲಿನಿಂದ ಮುಂದುವರಿದ ಭಾಗ ರಕ್ತರಾತ್ರಿ ಓಬ್ಬಣ್ಣನಾಯಕನ ನಂತರ ಪಟ್ಟವನ್ನೇರಬೇಕೆಂಬ ಆಸೆಯಿದ್ದ ಕುತಂತ್ರಿ ದಳವಾಯಿ ಮುದ್ದಣ್ಣನಿಗೆ ಲಿಂಗಣ್ಣನಾಯಕನಿರುವರಗೆ ಸಾಧ್ಯವಾಗುವುದಿಲ್ಲವೆನ್ನುವುದು ತೋರುತ್ತದೆ.

ತಿರುಗುಬಾಣ: ಕಂಬಿನಿ ಕುಯಿಲಿನಿಂದ ಆರಂಭವಾದ ದಳವಾಯಿ ಮುದ್ದಣ್ಣನ ಕ್ರೌರ್ಯ ರಕ್ತರಾತ್ರಿಯಲ್ಲಿ ಮುಂದುವರಿದು ಅವನ ಸರ್ವಾಧಿಕಾರ, ಕುತಂತ್ರ, ರಾಜದ್ರೋಹಗಳಿಗೆ ತಿರುಬಾಣವಾಗಿ ಅವನಿಗೆರಗಿದ ದಾರುಣ ಸ್ಥಿತಿಯ ರೋಮಾಂಚಕ ಕತೆಯಲ್ಲಿ ಅವನ ಅಂತ್ಯವಾಗಿ ದುರ್ಗಕ್ಕೆ ಹೊಸ ಹಗಲು ಉದಯಿಸುತ್ತದೆ. ನೃಪತುಂಗ: ಈ ಕಾದಂಬರಿ ಕ್ರಿ.ಶ. ಒಂಬತ್ತನೇ ಶತಮಾನದಲ್ಲಿ ರಾಷ್ಟ್ರಕೂಟ ದೊರೆ ಅಮೋಘವರ್ಷ ನೃಪತುಂಗನನ್ನು ಕುರಿತಾದದ್ದು. ಈ ಕಾದಂಬರಿ ತ.ರಾ.ಸು ಶಾಸನಗಳ ಆಧಾರದ ಮೇಲೆ ರಚಿಸಿದ್ದಾರೆ.

ಸಿಡಿಲ ಮೊಗ್ಗು: ಹೊಯ್ಸಳ ದೊರೆ ವಿಷ್ಣುವರ್ಧನನ್ನು ಕುರಿತಾದ ಕಾದಂಬರಿ ಸಿಡಿಲಮೊಗ್ಗ, ವಿಷ್ಣುವರ್ಧನನ ತಂದೆ ಎರೆಯಂಗದೇವನು ಬಳ್ಳಿಗಾವೆಗೆ ಬಂದಿದ್ದಾಗ ಚಾಲುಕ್ಯ ಚಕ್ರವರ್ತಿ ವಿಕ್ರಮಾದಿತ್ಯನ ಧೂರ್ತತನಕ್ಕೆ ಬಲಿಯಾಗಿ ತನ್ನ ಗಂಗರಾಜ್ಯವನ್ನು ಕಳೆದುಕೊಂಡಿದ್ದು ಸಿಡಿಲ ಮೊಗ್ಗು ಕಾದಂಬರಿಯ ವಸ್ತು. ಬೆಳಕು ತಂದ ಬಾಲಕ: ಕಠೋಪನಿಷತ್‌ನಲ್ಲಿ ಬರುವ ನಚಿಕೇತನ ಕತೆಯನ್ನು 'ಬೆಳಕು ತಂದ ಬಾಲಕ' ಕಾದಂಬರಿಗೆ ಬಳಸಿಕೊಂಡಿದ್ದಾರೆ. ಶಿಲ್ಪಶ್ರೀ–ಗಂಗ ಅರಸರಲ್ಲಿ ಮಂತ್ರಿಯೂ ಸ್ವತಃ ಸಾಹಿತಿಯೂ ಆಗಿದ್ದು ಶ್ರವಣ ಬೆಳಗೊಳದ ವಿಶ್ವಪ್ರಸಿದ್ದ ಗೊಮ್ಮೇಶ್ವರನ ವಿಗ್ರಹವನ್ನು ಕಡೆಸಿದ ಚಾವುಂಡರಾಯನನನ್ನು ಕುರಿತ ಕಾದಂಬರಿ. ೪X೪=೧: ಛಾಂದೋಗ್ಯೋಪಷತ್ತಿನಿನಲ್ಲಿ ಬರುವ ಸತ್ಯಕಾಮ ಜಾಬಾಲಿಯ ಕಥೆಯನ್ನು ಆಧರಿಸಿದ ಬ್ರಹ್ಮಜ್ಞಾನವನ್ನು ಸಂಪಾದಿಸಿದ ಧೀರ ಬಾಲಕನೊಬ್ಬನ ಕಥೆ.

ಚಂದವಳ್ಳಿ ತೋಟದಿಂದ ತ.ರಾ.ಸು ಅವರ ಹಲವಾರು ಕಾದಂಬರಿಗಳು ಚಲಚಿತ್ರಗಳಾಗಿ ಬೆಳ್ಳಿ ಪರದೆಯ ಮೇಲೆ ಬಂದಿವೆ ಅನೇಕ ಚಿತ್ರಗಳಿಗೆ ಸಂಭಾಷಣೆ ಹಾಡುಗಳನ್ನು ಬರೆದು ಚಿತ್ರಸಾಹಿತಿ ಆಗಿಯೂ ಕೆಲಸ ನಿರ್ವಹಿಸಿದ್ದಾರೆ. ಇವರ ಹಂಸಗೀತೆ ಹಿಂದಿಯಲ್ಲಿ ಬಂಸತ್ ಬಹಾರ್ ಆಗಿ ನಂತರ ಕನ್ನಡದಲ್ಲಿ ತೆರೆಕಂಡು ರಾಷ್ಟ್ರ ಪ್ರಶಸ್ತಿಗಳಿಸಿತು. 'ನಾಗರ ಹಾವು' ಶ್ರೇಷ್ಠ ಕಥೆಗಾಗಿ ಕರ್ನಾಟಕ ರಾಜ್ಯ ಸರ್ಕಾರ ಪುರಸ್ಕಾರ ನೀಡಿದೆ. ಶ್ರೇಷ್ಠ ಕಾದಂಬರಿಕಾರ ಪ್ರಶಸ್ತಿ–ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ (೨೬–೧೨–೧೯೭೦), ೧೯೭೪ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಾಹಿತ್ಯ ರತ್ನ ಪ್ರಶಸ್ತಿ ೧೮–೦೨–೧೯೮೧ ಭಾರತೀಯ ಧರ್ಮ ಸಮ್ಮೇಳನ ಚಿತ್ರದುರ್ಗ ಯಕ್ಷಪ್ರಶ್ನೆ–ಮೈಸೂರು ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಶಿಲ್ಪಶ್ರೀ–ಗೊಮ್ಮಟೇಶ್ವರ ಪುರಸ್ಕಾರ ಸಮಿತಿಯ ಪದಕ ಹಾಗೂ ವಿದ್ಯಾವಾದರಿ ಪ್ರಶಸ್ತಿ, ದುರ್ಗಾಸ್ತಮಾನ–ಕರ್ನಾಟಕ ಸಾಹಿತ್ಯ ಅಕಾಡೆಮಿ ವಿಶೇಷ ಪುರಾಸ್ಕಾರ(೧೯೮೩) ಪಡೆದ ಕಾದಂಬರಿಗಳು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(ಮಣೋತ್ತರ)–೧೯೮೫ ಹೀಗೆ ತ.ರಾ.ಸು ಹಲವು ಪ್ರಶಸ್ತಿಗಳಿಗೆ ಭಾಜನಾರಾಗಿದ್ದಾರೆ. ತ.ರಾ.ಸು ಮನಗೆ ಬಂದ ಮಹಾಲಕ್ಷ್ಮೀಯಿಂದ ದುರ್ಗಾಸ್ತಮಾನದ ವರಗೆ(ಚಕ್ರೇಶ್ವರಿ–ಅರ್ಧ)೭೦ ಕಾದಂಬರಿಗಳನ್ನು ನಾಲ್ಕು ಸಂಕಲನಗಳನ್ನು ಇಪ್ಪತ್ತೊಂದು ಸಣ್ಣ ಕಥೆಗಳನ್ನು ,

ಜೀವನ ಅನುವಾದ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಕೃಷಿಯನ್ನು ಹಸನುಗೊಳಿಸಿದ ತ.ರಾ.ಸುಬ್ಬರಾಯರು ೧೯೮೪ರ ಏಪ್ರಿಲ್ ೧೦ರಂದು ನಿಧನರಾದರು.

ಅಡಿಟಿಪ್ಪಣಿ:

೧. 'ಸಾಲುದೀಪಗಳು', ಸಂ.ಜಿ.ಎಸ್.ಸಿದ್ಧಲಿಂಗಯ್ಯ ಪುಟ-೧೬೦,

೨. ಅದೇ ಪುಟ-೧೬೦.

೩. 'ಅಮೇರಿಕದಲ್ಲಿ ಗೊರೂರು', ಗೊರೂರು ರಾಮಸ್ವಾಮಿ ಅಯ್ಯಂಗಾರ, ಪುಟ-೧

೪. 'ಗೊರೂರು ಗೌರವ ಗ್ರಂಥ', ಸಂ. ಹಾ.ಮಾ.ನಾಯಕ, ಪುಟ-೧೮೯.

ಅಧ್ಯಾಯ:೪

ತೌಲನಿಕ ಪರಿಕಲ್ಪನೆಗಳು

ನಮ್ಮ ವಿಮರ್ಶೆಯ ಬಗೆಗೆ ವಾದವನ್ನು ಮಂಡಿಸಿದ ಪಾಶ್ಚಿಮಾತ್ಯ ವಿಮರ್ಶಕರಲ್ಲಿ ಐ.ಎ.ರಿಚರ್ಡ್ಸ್ ಹಾಗೂ ಟಿ.ಎಸ್.ಎಲಿಯಟ್ ಪ್ರಮುಖರಾಗಿದ್ದಾರೆ. ಇವರಿಗಿಂತ ಮೊದಲು ಅಮೇರಿಕಾದ ಜಾನ್ ಕ್ರೋರ್ರ್ಯಾನ್ಸಮ್, ರಾಬರ್ಟ್‌ಪೆನ್‌ವಾರೆನ್, ಕ್ಲಿಯಾಂತ್‌ಬ್ರೂಕ್ಸ್ ಮೊದಲಾದವರು New criticism ಅನ್ನು ಕಟ್ಟಿಕೊಟ್ಟಿದ್ದರು. ರಿಚರ್ಡ್ಸ್ Practical criticism ಗೆ ಪ್ರಾಧಾನ್ಯತೆ ನೀಡಿದರೆ, ಎಲಿಯಟ್ comparative criticism ಗೆ ಆದ್ಯತೆ ಕೊಡುತ್ತಾನೆ. ಒಂದು ಕಾವ್ಯ ಭಾಗದ ಪಕ್ಕದಲ್ಲಿ ಮತ್ತೊಂದನ ಇಟ್ಟು ನೋಡುವಲ್ಲಿಯೇ ಎಲಿಯಟ್‌ನ ಈ ತುಲನಾ ವಿಧಾನವನ್ನು ಕುರಿತು ರ್‍ಯಾನ್‌ಸಮ್ ಹೀಗೆ ಹೇಳಿತ್ತಾನೆ "Something always happens under Eliot's acute observation" ಎಲಿಯಟ್‌ನ ಈ ತುಲನಾ ವಿಧಾನದಲ್ಲಿ ವಿಶ್ಲೇಷಣೆ ಮತ್ತು ತುಲನೆ ಈ ಎರಡು ಪದಗಳಿಗೆ ಬಹಳ ಪ್ರಾಮುಖ್ಯತೆಯಿದೆ.

ಯಾವುದೇ ಕೃತಿ ಪ್ರಕಟವಾದಾಗ ಅದು ತನ್ನಷ್ಟಕ್ಕೆ ತಾನೇ ಸ್ವಯಂಭುವಾಗಿರುವುದಿಲ್ಲ ಅದಕ್ಕೆ ಪರಂಪರೆಯ ಕೊಡುಗೆ ಇರುತ್ತದೆ. ಈ ಸತ್ಯ ಆ ಕೃತಿಯನ್ನು ಹಿಂದಿನ ಕಾಲದ ಕೃತಿಗಳ ಜೊತೆಗೆ ಇಟ್ಟು ನೋಡಿದಾಗ ತಿಳಿಯುತ್ತದೆಂದು ಎಲಿಯಟ್ ಸ್ಪಷ್ಟಪಡಿಸಿದ. "ಯಾವ ಒಬ್ಬ ಕವಿಯ ಅಥವಾ ಕಲಾವಿದನ ಕೃತಿಗೆ ಕೇವಲ ತನ್ನದೇ ಆದ ಅರ್ಥವಿದೆಯೆಂದು ಭಾವಿಸಬಾರದು, ನೀವು ಆ ಒಂದು ಕಲಾಕೃತಿಯನ್ನು ಕುರಿತು ಮಾಡುವ ಪ್ರಶಂಸೆ ಹಾಗೂ ಅರ್ಥವಿಶಿಷ್ಟತೆ, ಅವನಿಗಿಂತ ಹಿಂದಿನ ಕವಿಗಳ, ಕಲಾವಿದನ ಕೃತಿಗಳಿಗೆ ಸಂಬಂಧಿಸಿದ್ದೂ ಹೌದು ನೀವು ಆತನೊಬ್ಬನನ್ನೇ ಪ್ರತ್ಯೇಕವಾಗಿ ಪರಿಗಣಿಸಲಾರಿರಿ. ಗತಿಸಿದ ಕವಿಗಳ ಸಾಲಿನಲ್ಲಿ, ಸಾಮ್ಯ-ವೈಶಮ್ಯ ವಿಶ್ಲೇಷಣೆಗೆ ಆತನನ್ನು ನಿಲ್ಲಿಸಿಕೊಳ್ಳಲೇಬೇಕು"[1] ಎಂದು ಹೇಳಿದ ಎಲಿಯಟ್‌ನ ತೌಲನಿಕ ವಿಮರ್ಶೆಗೆ ಗಟ್ಟಿಯಾದ ತಳಪಾಯ ಹಾಕಿದ ಎಲಿಯಟ್‌ನ ಈ ವಿಮರ್ಶಾ ವಿಧಾನದಿಂದ ಪರಪಂರೆಯ ಪರಿಶೀಲನೆಯ ಕಾರ್ಯ ಆರಂಭವಾಯಿತು.

ಸಮಾನವಾದ ವಸ್ತು ಸನ್ನಿವೇಶ ಆಶಯಗಳಿದ್ದಾಗ ಪರಸ್ಪರರನ್ನು ತುಲನೆ ಮಾಡಲು ತೌಲನಿಕ ಅಧ್ಯಯನದಲ್ಲಿ ಸಾಧ್ಯವಾಗುತ್ತದೆ.

ವಿಮರ್ಶೆಯ ಪೂರ್ವ ಪಶ್ಚಿಮ ಕೃತಿಯಲ್ಲಿ ತೌಲನಿಕ ವಿಮರ್ಶೆಯ ಕ್ರಮಗಳನ್ನು ಹೀಗೆ ವಿವರಿಸಿದ್ದಾರೆ.

೧. "ಒಂದೇ ವಸ್ತುವನ್ನು ಆಶ್ರಯಿಸಿದ ಬೇರೆ ಬೇರೆ ಕವಿಗಳು ಬೇರೆ ಬೇರೆ ಕಾಲದಲ್ಲಿ ರಚಿಸಿದ ಕೃತಿಗಳ ಪರಶೀಲನೆ

೨. ಒಂದು ಅಥವಾ ಕೆಲವು ಸಮಾನ ಸನ್ನಿವೇಶಗಳು, ವರ್ಣನೆಗಳು ಬೇರೆ ಬೇರೆಯ ಕೃತಿಯಲ್ಲಿ ಕಂಡು ಬಂದಾಗ ಮಾಡುವ ವಿವೇಚನೆ.

೩. ಒಂದು ಭಾಷೆಯ ಕವಿಗೂ ಮತ್ತೊಂದು ಭಾಷೆಯ ಕವಿಗೂ ಸಮಾನವಾದ ವಸ್ತುಸನ್ನಿವೇಶ, ವರ್ಣನೆ, ಪಾತ್ರಚಿತ್ರಣಗಳಲ್ಲಿ ಕಂಡುಬರುವ ಸಾಮ್ಯ ವೈಷ್ಯಮಗಳ ಅವಲೋಕನ.

೪. ಸಮಕಾಲೀನ ಕವಿಯನ್ನು ಮತ್ತೊಬ್ಬ ಸಮಕಾಲೀನ ಕವಿಯೊಂದಿಗೆ ಇರಿಸಿ ಅವರವರ ಕಾವ್ಯದ ವಿಶಿಷ್ಟತೆಯನ್ನು ಗುರುತಿಸುವ ಪ್ರಯತ್ನ."[೩]

ಹೀಗೆ ನಾಲ್ಕು ಘಟ್ಟಗಳಾಗಿ ತೌಲನಿಕ ವಿಮರ್ಶೆಯ ವಿಮರ್ಶನ ಕ್ರಮವನ್ನು ವಿಂಗಡಿಸಿಕೊಳ್ಳಲಾಗಿದೆ. ಹೀಗೆ ಬೇರೆ ಬೇರೆ ಭಾಷೆಯ ಮಹತ್ವದ ಕೃತಿಗಳ ಜೊತೆಗೆ ನಮ್ಮ ದೇಶ ಭಾಷೆಯ ಮಹತ್ವದ ಸಾಮ್ಯತೆಯಿರುವ ಕೃತಿಗಳನ್ನು ತೌಲನಿಕ ದೃಷ್ಟಿಕೋನದಿಂದ ಅಧ್ಯಯನ ಮಾಡಿದಾಗ ಜಾಗತಿಕ ಮಟ್ಟದಲ್ಲಿ ನಿಲ್ಲಬಲ್ಲ ನಮ್ಮ ಕೃತಿಗಳಾವುವು ಎಂಬ ನಿಜಾಂಶ ತಿಳಿಯಲು ಸಾಧ್ಯವಾಗುತ್ತದೆ. ಈ ತೆರನಾದ ಅಧ್ಯಯನದಿಂದ ಜೊಳ್ಳು ಹೊರಟು ಹೋಗಿ ತಿರಳು ಮಾತ್ರ ಉಳಿಯುತ್ತದೆ.

'ತೌಲನಿಕ ವಿಮರ್ಶೆ' (Comparative criticism) ಇಂದು ನಿನ್ನೆಯದೇನು ಅಲ್ಲ. ಎಲ್ಲಾ ಭಾಷೆಯಗಳಲ್ಲಿಯೂ ಸಾಹಿತ್ಯ ವಿಮರ್ಶೆಯ ಉಗಮದೊಡನೇಯೇ ತುಲಾನಾತ್ಮಕ ವಿಮರ್ಶೆಯೂ, ಎಂದರೆ ಎರಡು ಕೃತಿಗಳನ್ನು ಅಥವಾ ಇಬ್ಬರು ಲೇಖಕರನ್ನು ಒಂದೆಡೆ ತಂದು, ಅವುಗಳ ನಡುವಿನ ಸಾಮ್ಯ ವೈಷಮ್ಯಗಳನ್ನು ಗುರುತಿಸುವ ಕಾರ್ಯ ಜನ್ಮತಾಳುತ್ತದೆ.

ಈ ಬಗೆಯ ಅಧ್ಯಯನ ಪರಿಕಲ್ಪನೆ ಇಂದು ಕೇವಲ ಕೃತಿ, ಲೇಖಕರ ಸಾಮ್ಯ ಭಿನ್ನತೆಗಳ ಅಧ್ಯಯನ ಮಾತ್ರವಲ್ಲದೆ ಸಮಾಜ, ಸಂಸ್ಕೃತಿ ಮುಂತಾದ ಎಲ್ಲಾ ವಲಯಗಳಲ್ಲೂ ಜನ್ಮತಾಳಿ ಕಾರ್ಯ ನಿರ್ವಹಿಸುತ್ತಿದೆ. ಈ ಪ್ರವೃತಿಯನ್ನು ನಾವು ಅರಿಸ್ಟಾಟಲ್, ಲಾಂಜೈನಸ್ ಇತ್ಯಾದಿ ಪಾಶ್ಚತ್ಯ ವಿಮರ್ಶಕರಲ್ಲಿಯೂ ಭರತ, ಆನಂದವರ್ಧನ ಇತ್ಯಾದಿ ಭಾರತೀಯ ಮಿಮಾಂಸಕರಲ್ಲಿಯೂ ಕಾಣುತ್ತೇವೆ. ಏಕೆಂದರೆ ಯಾವುದೇ ವ್ಯಕ್ತಿಯನ್ನು, ಕೃತಿಯನ್ನು, ವಿಚಾರವನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು ಹೋಲಿಕೆಯ ಮೂಲಕ ಮಾತ್ರ "ತುಲನೆ ಮತ್ತು ವಿಶ್ಲೇಷಣೆ ಇವರೆಡು ವಿಮರ್ಶೆಯ ಮುಖ್ಯ ಸಾಧನಗಳು"[೪] ಎಂಬ ಎಲಿಯಟ್‌ನ ಹೇಳಿಕೆ ಸುಪ್ರಸಿದ್ಧ. ರೆನವೆಲೆಕ್ "ತೌಲನಿಕ ಅಧ್ಯಯನವೆಂದರೆ ಒಂದು ಚಟುವಟಿಕೆ, ಒಂದು ವಿಮಾರ್ಶಾ ಪದ್ಧತಿ, ಅದು ಸೃಜನಶೀಲ ಸಾಹಿತ್ಯವನ್ನು ಒಂದು ಘಟನೆ ಎಂದು ಪರಿಗಣಿಸುತ್ತದೆ."[೫] ಎಂದು ಹೇಳುತ್ತಾನೆ.

'ತೌಲನಿಕ ಸಾಹಿತ್ಯ' (Comparative literature) ಎಂಬ ಪರಿಕಲ್ಪನೆಯನ್ನು ಮೊಟ್ಟ ಮೊದಲಿಗೆ ಪ್ರಾಯಃಮ್ಯಾಥ್ಯೂಆರ್ನಲ್ಡ್ ತನ್ನ ಒಂದು ಪತ್ರದಲ್ಲಿ ಬಳಸಿದನೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇದೇ ಸಮಯದಲ್ಲಿ, ಅಂದರೆ ಹತ್ತೊಂಭತ್ತನೆಯ ಶತಮಾನದ ಎರಡನೆಯ ಭಾಗದಲ್ಲಿ ಇತರ ಯುರೋಪಿಯನ್ ಭಾಷೆಗಳಲ್ಲಿಯೂ ಈ ಪರಿಕಲ್ಪನೆ ಕಾಣಿಸಿಕೊಂಡಿತು. ಎ.ಎಫ್.ವಿಲ್‌ಮನ್ (abel franeous villeman) ಎಂಬ ವಿದ್ವಾಂಸನು ಇದನ್ನು ಪ್ರಾನ್ಸ್‌ನಲ್ಲಿ 'literature compare' ಎಂಬ ಹೆಸರಿನಲ್ಲಿ ವ್ಯಾಪಕವಾಗಿ ಪ್ರಚಾರಕ್ಕೆ ತಂದನಲ್ಲದೇ ಈ ಪರಿಕಲ್ಪನೆಯನ್ನು ಆಧರಿಸಿದ ಒಂದು ಪಠ್ಯಕ್ರಮವನ್ನು ಮೊಟ್ಟ ಮೊದಲ ಬಾರಿಗೆ ಪ್ಯಾರಿಸ್‌ನ ಸಾರ್‌ಬಾನ್ (Sorbonne) ವಿಶ್ವವಿದ್ಯಾನಿಲಯದಲ್ಲಿ ಜಾರಿಗೆ ತಂದನು. ೧೮೫೪ರಲ್ಲಿ ಜರ್ಮನ್ ವಿದ್ವಾಂಸ ಮಾಂಜ್ ಕಾರಿಯೇರ್ (Monz Corriare) ಈ ಪರಿಕಲ್ಪನೆಯನ್ನು ಜರ್ಮನಿಯಲ್ಲಿ ವ್ಯಾಪಕವಾಗಿ ಪ್ರಚಾರಕ್ಕೆ ತಂದನು. ಈ ಶತಮಾನದಲ್ಲಿ ಮುಖ್ಯವಾಗಿ ನಾಲ್ಕನೆಯ ದಶಕದಿಂದೀಚೆಗೆ ತೌಲನಿಕ ಸಾಹಿತ್ಯದ ಅಧ್ಯಯನ ವ್ಯಾಪಕವಾಗಿ ಅಮೇರಿಕಾ ಮತ್ತು ಇತರ ಯುರೋಪಿಯನ್ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಪಕವಾಗಿ ಬೆಳೆದಿದೆ, ಬೆಳೆಯುತ್ತಿದೆ. ಇಂತಹ ಅಧ್ಯಯನಕ್ಕೆ ಒಂದು ವ್ಯವಸ್ಥಿತ ಹಾಗೂ ಸಾಂಸ್ಥಿತಿಕ

ಸ್ವರೂಪ ದೊರಕಿದ್ದು ೧೯೫೭ ರಲ್ಲಿ ಸ್ಥಾಪನೆಗೊಡ ಅಂತರಾಷ್ಟಿಯ ತೌಲನಿಕ ಸಾಹಿತ್ಯ ಸಂಘದಿಂದ (International comparative literature) association ICLA) ಈ ಸಂಘದ ಛಾಪು ಭಾರತವು ಸೇರಿದಂತೆ ಹೆಚ್ಚು ಕಮ್ಮಿ ಎಲ್ಲಾ ರಾಷ್ಟ್ರಗಳಲ್ಲಿಯೂ ಮೂರು ವರ್ಷಕ್ಕೊಮ್ಮೆ ನಡೆಯುವ ಈ ಸಂಘದ ಅಂತರಾಷ್ಟ್ರೀಯ ಅಧಿವೇಶನದಲ್ಲಿ ಸುಮಾರು ಐದನೂರರಷ್ಟು ವಿವಿಧ ದೇಶಗಳ ವಿದ್ವಾಂಸರು ಸೇರಿ ಒಂದು ವಾರಗಳ ಕಾಲ ವಿವಿಧ ಸಂಕಿರಣಗಳನ್ನು ನಡೆಸುತ್ತಾರೆ.

ಭಾರತದಲ್ಲಿ ತೌಲನಿಕ ಸಾಹಿತ್ಯದ ಅಧ್ಯಯನದ ಪ್ರಾರಂಭ ೧೯೦೬ರಲ್ಲಿ ಅಂದರೆ ೨೦ನೇ ಶತಮಾನದ ಆರಂಭ ಕಾಲದಲ್ಲಿ ರವೀಂದ್ರನಾಥ ಟಾಗೋರ್ ರವರು ಭಾರತದಲ್ಲಿ ಈ ಬಗೆಯ ವಿವೇಚನಾ ಕ್ರಮವನ್ನು ಆರಂಭಿಸಿದರು. ಅವರ "ಸೀತೆ, ಶಕುಂತಲಾ ಮತ್ತು ಮಿರಾಂಢಾ" (ಹೆಸರು ತುಸು ಬೇರೆ ಇದ್ದರು ಇರಬಹುದು ಎಂದು ಸಿ.ಎಸ್.ರಾ.ಅನುಮಾನಸೂಚಿಸುತ್ತಾರೆ.) ಸುಪ್ರಸಿದ್ಧ ಭಾಷಣದಿಂದ ಎಂದು ಹೇಳಬಹುದು. ಟಾಗೋರ್ ಇಂತಹ ಚಿಂತನೆಯನ್ನು 'ವಿಶ್ವಸಾಹಿತ್ಯ' ಎಂದು ಕರೆದರು. ಕನ್ನಡ ನವೋದಯ ಲೇಖಕರಿಗೆಲ್ಲ ತೌಲನಿಕ ಸಾಹಿತ್ಯ ಒಂದು ಅಪಾರ ಆಸಕ್ತಿ ಕ್ಷೇತ್ರವಾಗಿದ್ದಿತು. ಕುವೆಂಪು ಅವರು ಈ ಬಗೆಯ ವಿಧಾನವನ್ನು ಅನ್ವಯಿಸಿ ಹಲವು ಮೀಮಾಂಸ ಪರ ಮತ್ತು ಮಿಮರ್ಶಾ ಪ್ರಬಂಧಗಳನ್ನು ರಚಿಸಿದ್ದಾರೆ. ಅವರ ಸರೋವರದ ಸಿರಿಗನ್ನಡಿಯಲ್ಲಿ, ಶಂಭಾಜೋಶಿರವರ ಕರ್ಣನ ಮೂರು ಚಿತ್ರಗಳು, ಎಸ್.ವಿ.ರಂಗಣ್ಣನವರ 'ಹೊನ್ನಶೂಲ' ಇನ್ನು ಮೊದಲಾದ ಮಾಸ್ತಿ, ಬಿ.ಎಂ.ಶ್ರೀ, ಡಿ.ವಿ.ಜಿ, ಬೇಂದ್ರೆ, ತೀ.ನಂ.ಶ್ರೀ ಹಿರಿಯರ ಕೆಲವು ಬರಹಗಳಲ್ಲಿ ಈ ವಿಮರ್ಶೆಯ ಹೊಳಹುಗಳನ್ನು ಕಾಣಬಹುದು. ಇಡೀ ಒಂದು ಸಾಹಿತ್ಯ ಪ್ರಕಾರವನ್ನೆ ತೌಲನಿಕ ವಿಮರ್ಶೆಯ ನಿಕಷಕ್ಕೆ ಒಡ್ಡಿದ ಕೀರ್ತಿ ಪ್ರೊ.ಎಸ್.ಅನಂತನಾರಾಯಣ ಅವರದು.ಆದರೆ ಇಡೀ ರಾಷ್ಟ್ರದ ಸಾಹಿತ್ಯ ಪ್ರಕ್ರಿಯೆಯನ್ನೆ ಆಧುನಿಕ ಕನ್ನಡ ಸಾಹಿತ್ಯದ ಮುಖ್ಯ ಮತ್ತು ಮೌಲಿಕ ಪರಿಕಲ್ಪನೆಯೊಂದರೊಡನೆ ಪ್ರಾತಿನಿಧಿಕ ಕೃತಿಗಳ ಮೂಲಕ ಹೋಲಿಸಿ ವಿಸ್ತಾರವೂ ಸೂಕ್ಷ್ಮವೂ ಆದ ಗಂಭೀರ ಭೌದ್ಧಿಕ ಚರ್ಚೆಗೆ ಒಳಗು ಮಾಡಿದ ಸಾಹಸ ಡಾ.ನಟರಾಜ ಹುಳಿಯಾರ್ ಅವರದು.

"ಬಿಡಿಬಿಡಿಯಾಗಿ ಕಾಣುವ ವಿವಿಧ ಯುಗಗಳ ಹಾಗೂ ಸಂಸ್ಕೃತಿಗಳ ಆಳದಲ್ಲಿ ಸ್ಪಷ್ಟವಾಗಿ ಕಂಡುಬರುವ ಏಕತೆಯನ್ನು ಗುರುತಿಸುವುದು ತೌಲನಿಕ ಸಾಹಿತ್ಯದ ಮುಖ್ಯ ಗುರಿ."[೬] ಎಂದು ಆವರ್ ಬಾಕ್ (Aurebach) ಹೇಳುತ್ತಾನೆ. "ಎಲ್ಲಾ ಸಾಹಿತ್ಯಿಕ ಸೃಷ್ಟಿಯು ವಸ್ತು ಮತ್ತು ಸಾಹಿತ್ಯಾನುಭವವು ಸಮಾನವಾಗಿರುತ್ತದೆ ಎಂಬ ಅರಿವಿನಿಂದ ಮೂಡುವ ಅಧ್ಯಯನ."[೭] ಎಂದು ರೆನೆವೆಲಕ್ (Renewellek) ಘೋಷಿಸುತ್ತಾನೆ. "ವೈಯಕ್ತಿಕ ಹಾಗೂ ರಾಷ್ಟ್ರೀಯ ಸೃಷ್ಟಿ ಎಂದು ಭಾವಿಸಲಾಗುವ ಸಾಹಿತ್ಯಕ್ಕೆ ತೌಲನಿಕ ಸಾಹಿತ್ಯ ಒಂದು ಅಂತರಾಷ್ಟ್ರೀಯ ಆಯಾಮವನ್ನು ಕಲ್ಪಿಸುತ್ತದೆ."[೮] ಎಂದು ಹೆನ್ರಿ ರೆಮಾಕ್ (Henryremak) ಎಂಬುವನು ಅಭಿಪ್ರಾಯ ಪಡುತ್ತಾನೆ.

ತೌಲನಿಕ ಪರಿಕಲ್ಪನೆ ಕೇವಲ ಪರಸ್ಪರ ಸಮಾನ_ಭಿನ್ನ ಗುಣಗಳನ್ನು ಗುರುತಿಸಿ ಪಟ್ಟಿಮಾಡುವುದಷ್ಟೇ ಅಲ್ಲ. ಇದು ಒಂದು ಪ್ರಾಥಮಿಕ ಹಂತಮಾತ್ರ ಆಗಿರುತ್ತದೆ. ಮುಂದುವರೆದು, ಅತಂಹ ತೌಲನಿಕ ಅಧ್ಯಯನ ಆ ಕೃತಿಗಳನ್ನು, ಸಾಹಿತ್ಯಗಳನ್ನು ರೂಪಿಸಿದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಅಧ್ಯಯನವು ಆಗುತ್ತದೆ. ಇಷ್ಟಕ್ಕೆ ತನ್ನ ಮಿತಿಯನ್ನು ಗುರುತಿಸಿಕೊಳ್ಳದೆ ಹತ್ತು ಹಲವು ಆಯಾಮಗಳಲ್ಲಿ ತನ್ನ ಕಾರ್ಯ ನಿರ್ವಹಿಸುತ್ತದೆ. ಉದಾಹರಣೆಗೆ ರಾಮಾಯಾಣ ಹಾಗೂ ಇಲಿಯಡ್ ಮಹಾಕಾವ್ಯಗಳ ತೌಲನಿಕ ಚಿಂತನೆ ಕೊನೆಗೆ ಎತ್ತುವ ಅಥವಾ ಎತ್ತಬೇಕಾದ ಪ್ರಶ್ನೆ ಎಂದರೆ ಸ್ತ್ರೀಯನ್ನು ಪ್ರಾಚೀನ ಗ್ರೀಕ್ ಭಾರತೀಯ ಸಮಾಜಗಳು ಹೇಗೆ ಕಂಡವು? ಮತ್ತು ಇಂತಹ ದೃಷ್ಟಿಕೋನದ ತಾತ್ವಿಕ ನೆಲೆಗಳಾವುವು? ಎಂಬುದೇ ಅರ್ಥಾತ್ ತೌಲನಿಕ ಅಧ್ಯಯನ ಕೇವಲ ಪರಸ್ಪರ ಸಮಾನ ಅಂಶಗಳ ಹಾದಿಯಲ್ಲಿ ಸಮಾನ ವಸ್ತುಗಳ, ಆಶಯಗಳ, ಅಭಿವ್ಯಕ್ತಿಗಳ ಆಳದಲ್ಲಿರುವ ಸಮಾನತೆಗಳನ್ನು ಗುರುತಿಸುವುದು ಮತ್ತು ತದನಂತರ ಇಂತಹ ಸಮಾನ, ಭಿನ್ನ ಅಂಶಗಳನ್ನು ಸಾಂಸ್ಕೃತಿಕ, ವೈಚಾರಿಕ, ವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಷಿಸಿ ಅರ್ಥೈಸುವುದು.

ಸಂಕ್ಷಿಪ್ತವಾಗಿ ಹೇಳುವುದಾದರೆ ತೌಲನಿಕ ಅಧ್ಯಯನದ ಮುಖ್ಯ ಗುರಿ ಸಾಹಿತ್ಯಾಧ್ಯಯನದಲ್ಲಿ ಪ್ರತ್ಯೇಕತೆಯನ್ನು ವಿರೋಧಿಸುತ್ತಾ. ಅನನ್ಯತೆಗೆ ಬದಲಾಗಿ ಸಾಧಾರಣತೆಯನ್ನು ಗುರುತಿಸಿ ಆ ಮೂಲಕ ನಮ್ಮ ಅರಿವಿನ ಎಲ್ಲೆಗಳನ್ನು ವಿಸ್ತರಿಸುವುದು. ಈ

ನಿಟ್ಟಿನಲ್ಲಿ ಹೇಳಿದ ಮಾತುಗಳು ಹಿಂದೆಗೂ ಮಿಗಿಲಾಗಿ ಇಂದಿನ ವಿಶ್ವದ ಹಾಗೂ ಭಾರತದ ಸಂದರ್ಭದಲ್ಲಿ ಪ್ರಸ್ತುತವೆನಿಸುತ್ತವೆ. ಸಾಹಿತ್ಯವೆಂದರೆ ಭಿನ್ನ ಭಿನ್ನ ಕೃತಿಗಳ ಒಂದು ಮೊತ್ತವಲ್ಲ ಸೀಮಿತ ದೇಶಿಯತೆಯ ಚೌಕಟ್ಟಿನಿಂದ ನಾವು ಹೊರಬಂದು ಪ್ರತಿಯೊಬ್ಬ ಲೇಖಕನ ಕೃತಿಯನ್ನು ಅಖಂಡತೆಯ ಒಂದು ಭಾಗವೆಂದೂ ಮತ್ತು ವಿಶ್ವಶಕ್ತಿಯು ವಿಶ್ವಸಾಹಿತ್ಯದ ಮೂಲಕ ಪ್ರಕಟವಾಗುತ್ತದೆಂದು ಗ್ರಹಿಸಲು ನಾವು ಸದಾ ಪ್ರಯತ್ನಿಸಬೇಕು. ಪೂರ್ವ ವಸಾಹತುಗಳಾಗಿದ್ದ ಭಾರತದಂತಹ ರಾಷ್ಟ್ರಗಳಲ್ಲಿ ತೌಲನಿಕ ಸಾಹಿತ್ಯದ ಅಧ್ಯಯನವು ಹೆಚ್ಚು ಪ್ರಸುತ್ತವೆಂದು ಅದೊಂದು ಗಂಭೀರ ಸಾಂಸ್ಕೃತಿಕ ಜವಾಬ್ದಾರಿಯೆಂದೂ ಭಾರತೀಯ ವಿದ್ವಾಂಸರಾದ ಆಮಿಯಾದೇವ್, ಹರಭಜನ್‌ಸಿಂಗ್ ಮುಂತಾದವರು ವಾದಿಸುತ್ತಾರೆ.

ತೌಲನಿಕ ಅಧ್ಯಯನದ ಮುಖ್ಯ ಪರಿಕಲ್ಪನೆಗಳನ್ನು ಕುರಿತು ಸಿ.ಎಸ್. ರಾಮಚಂದ್ರನ್ ೫ ಪ್ರಕಾರಗಳನ್ನು ಗುರುತಿಸುತ್ತಾರೆ. ಅವುಗಳೊಂದಿಗೆ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೧. ವಸ್ತುಸಮಾನತೆಯನ್ನು ಆಧರಿಸಿದ ಅಧ್ಯಯನ (Thematic Studies or Thematic)
೨. ಪ್ರಭೇದ ಅದ್ಯಯನ (Genre Study or Genealogy)
೩. ಪ್ರಭಾವ ಅಧ್ಯಯನ (Influence Studies)
೪. ತೌಲನಿಕ ಕಾವ್ಯ ಮೀಮಾಂಸೆ (Comparative Poetics)
೫. ಭಾಷಾಂತರ ಅಧ್ಯಯನ (Translation studies)

ಇವಿಷ್ಟು ಪ್ರಕಾರಗಳ ಆಧಾರವಾಗಿಟ್ಟುಕೊಡು ತೌಲನಿಕ ಅಧ್ಯನ ಮಾಡಬಹುದು.

೧. ವಸ್ತುಸಮಾನತೆಯನ್ನು ಆಧರಿಸಿದ ಅಧ್ಯಯನ (Thematic Studies or Thematics):

ತೌಲನಿಕ ಅಧ್ಯಯನ ಅತ್ಯಂತ ವ್ಯಾಪಕ ಹಾಗೂ ಜನಪ್ರಿಯ ಪ್ರಕಾರ ಇದು. ಈ ಅದ್ಯಯನದಲ್ಲಿ ಯಾವುದೋ ಒಂದು ಸಮಾನ ವಸ್ತು ಅಥವಾ ವಿಷಯ ಅಥವಾ ಅಂತರ್ಭಾವವನ್ನು (Matif) ಆಧರಿಸಿ ವಿವಿಧ ಭಾಷೆಗಳಲ್ಲಿ ಮತ್ತು ವಿವಿಧ ಕಾಲಘಟ್ಟಗಳಲ್ಲಿ ರಚಿಸಲ್ಪಟ್ಟಿರುವ ಅನೇಕ ಕೃತಿಗಳನ್ನು ಒಂದೆಡೆ ತಂದು ಅವುಗಳನ್ನು ವಿಶ್ಲೇಷಿಸಿ ಅವುಗಳು ಆ ವಸ್ತುವನ್ನು ವಿಷಯವನ್ನು ಅಂತರ್ಭಾವವನ್ನು ಬೆಳೆಸಿರುವ ಬಗೆಯಲ್ಲಿರುವ ಸಾಮ್ಯ

ವೈಶಮ್ಯಗಳನ್ನು ಗುರುತಿಸಿ, ಅವುಗಳ ಆಧಾರದಮೇಲೆ ಆಕೃತಿಗಳು ಸೃಜಿಸಲ್ಪಟ್ಟ ಸಮಾಜ-ಸಾಂಸ್ಕೃತಿಕಗಳ ಬಗ್ಗೆ ವ್ಯಾಪಕ ಚಿಂತನೆ ನಡೆಸಲು ಅವಕಾಶ ಸಾಧ್ಯ ಉದಾಹರಣೆಗೆ ವಿವಾಹ, ಸಂಗೀತ, ಅಧಿಕಾರ, ಜಾತಿ ಮುಂತಾದ ಯಾವುದಾದರೊಂದು ವಸ್ತುವನ್ನು ಆಧರಿಸಿ ಅದೇ ವಸ್ತುವನ್ನು ಕೇಂದ್ರವಾಗುಳ್ಳ ವಿವಿಧ ಕೃತಿಗಳನ್ನು ಒಂದೆಡೆ ತರಬಹುದು. ಅಥವಾ ಕಾವ್ಯದಲ್ಲಿ ಪ್ರಕೃತಿ ಸ್ಥಾನ ಮಹಾಕ್ಯಾವಗಳಲ್ಲಿ ದೈವತ್ವದ ಪರಿಕಲ್ಪನೆ, ಭೂಮಿ ಮತ್ತು ಒಡೆತನದ ಪ್ರಶ್ನೆ ಇತ್ಯಾದಿ ಒಂದು ವಿಷಯವನ್ನು ಕೇಂದ್ರವಾಗುಳ್ಳ ವಿವಿಧ ಭಾಷೆಗಳ ಕಾವ್ಯಗಳನ್ನು, ಕಾದಂಬರಿಗಳನ್ನು, ನಾಟಕಗಳನ್ನು ಒಂದೆಡೆ ತಂದು ಅವುಗಳನ್ನು ತುಲಾನಾತ್ಮಕವಾಗಿ ಅಭ್ಯಾಸ ನಡೆಸಬಹುದು. ಅಥವಾ ವಿವಿಧ ಕಥನಾಕಗಳಲ್ಲಿ ಪರಿಭ್ರಮಣಿಯ ಪರಿಕಲ್ಪನೆ ಮಹಾ ಕಾವ್ಯಗಳಲ್ಲಿ ನಾಟಕಗಳಲ್ಲಿ ಛದ್ಮವೇಷದ ಸ್ವರೂಪ, ಸಾಮಾಜಿಕ ಸಂಸ್ಥೆಗಳಲ್ಲಿ ಸ್ತ್ರೀ-ಪುರಷ ಸಂಬಂಧಗಳಲ್ಲಿ ವಿಪರ್ಯಯ ಇತ್ಯಾದಿ ಸಮಾನ ಅಂತರ್ಭಾವವನ್ನು ಆಧರಿಸಿ ಅನೇಕ ಕೃತಿಗಳನ್ನು ತುಲಾನ್ಮತಾಕವಾಗಿ ಅಭ್ಯಸಿಸಬಹುದು. ಇಂತಹ ವಸ್ತು, ವಿಷಯ, ಅಂತರ್ಭಾವ ಸಮಾನತೆಯನ್ನು ಆಧರಿಸಿದ ತೌಲನಿಕ ಅಧ್ಯಯನದಿಂದ ಎರಡು ನೆಲೆಗಳಲ್ಲಿ ನಮಗೆ ಅನುಕೂಲಕರವಾಗುತ್ತದೆ. ಒಂದು ಸಮಾನ ವಸ್ತುವನ್ನು ವಿವಿಧ ಸಮಾಜಗಳು ನೋಡುವ ದೃಷ್ಟಿಕೋನಗಳು ಬೇರೆ ಬೇರೆಯಾಗಿರುವುದುರಿಂದ ಆ ವಸ್ತುವಿನ ಸಂಪೂರ್ಣ ಅಥವಾ ಬಹುಮುಖೀ ಅರಿವು ನಮಗೂ ಉಂಟಾಗುತ್ತದೆ. ಹಾಗೆಯೇ ಸಮಾನ ವಸ್ತುವನ್ನು ಭಿನ್ನ ಭಿನ್ನ ನೆಲೆಗಳಲ್ಲಿ ವಿವಿಧ ಸಮಾಜಗಳು ವಿಶ್ಲೇಷಿಸುವುದರಿಂದ ಹಾಗೂ ಚಿತ್ರಿಸಿರುವುದರಿಂದ ಆಯಾ ಸಮಾಜಗಳ ಪ್ರಮುಖ ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಕಾಳಜಿಗಳೂ ನಮ್ಮ ಅರವಿಗೆ ಬರುತ್ತವೆ. ತೌಲನಿಕ ಅಧ್ಯಯನದಲ್ಲಿ ಸಮಾನವಾಗಿರುವ ವಸ್ತುಗಳ, ವಿಷಯಗಳ ಚಿತ್ರಣದಲ್ಲಿ ಕಂಡುಬರುವ ಭಿನ್ನತೆಗಳೇ ತುಂಬ ಮುಖ್ಯ ಹಾಗೂ ಅರ್ಥಪೂರ್ಣ.

೨. ಪ್ರಭೇದ ಅಧ್ಯಯನ (genre study or genealogy):

ಈ ಪ್ರಕಾರದಲ್ಲಿ ಒಂದೇ ಸಾಹಿತ್ಯ ಪ್ರಭೇದಕ್ಕೆ ಸೇರುವ ವಿವಿಧ ಭಾಷೆಗಳ ಕೃತಿಗಳನ್ನು ಒಂದೆಡೆ ತಂದು ಅವುಗಳನ್ನು ತುಲನಾತ್ಮಕವಾಗಿ ಅಭ್ಯಸಿಸಲಾಗುತ್ತದೆ. ಇಂತಹ ಪ್ರಭೇದದ ಅಧ್ಯಯನದಲ್ಲಿ ಒಟ್ಟು ಪ್ರಭೇದದ ಕಾಲಾನುಕ್ರಮ ಬೆಳೆವಣಿಗೆಯ ಮೇಲೆ ಮತ್ತು ಪ್ರಭೇದ

ಲಕ್ಷಣಗಳ ಭಿನ್ನತೆಗಳ ಮೇಲೆ ಬೀಳುತ್ತವೆ. ಒಟ್ಟಿನಲ್ಲಿ ತೌಲನಿಕ ಅಧ್ಯಯನದ ಸಾಧ್ಯತೆಯಂತೆ ಪ್ರಭೇದ ಅಧ್ಯಯನದಲ್ಲಿ ಇಲ್ಲಿಯವರಗೆ ಸಾಹಿತ್ಯಿಕ ವಿಮಾರ್ಶಾ ಕ್ಷೇತ್ರಗಳಲ್ಲಿ ಬೇರೂರಿದ ಪಶ್ಚಿಮ ಕೇಂದ್ರಿತ ನಿಲುವನ್ನು ಬದಲಾಯಿಸಬಲ್ಲ ಸೂಕ್ತ ತಿದ್ದುಪಡಿ ಮಾಡಬಲ್ಲ ಸಾಧ್ಯತೆಗಳು ಅಪಾರ.

೩. ಪ್ರಭಾವ ಅಧ್ಯಯನ (Influence studies):

ತೌಲನಿಕ ಅಧ್ಯಯನದ ಅತ್ಯಂತ ವಿವಾದಾಸ್ಪದ ಪ್ರಕಾರ ಪ್ರಭಾವ ಅಧ್ಯಯನ. ಒಂದು ಸಾಹಿತ್ಯದ, ಸಂಸ್ಕೃತಿಯ, ಲೇಖಕನ ಪ್ರಭಾವ ಇನ್ನೊಂದು ಸಾಹಿತ್ಯದ ಸಂಸ್ಕೃತಿಯ, ಲೇಖಕನ ಮೇಲೆ ಎಷ್ಟು ಮತ್ತು ಹೇಗೆ ಆಗಿದೆ ಎಂಬುದನ್ನು ಮತ್ತು ಆ ಪ್ರಭಾವದ ಪರಿಣಾಮಗಳನ್ನು ಗುರುತಿಸಿಸುವುದು ಈ ಪ್ರಕಾರದಲ್ಲಿ ಮುಖ್ಯವಾಗುತ್ತದೆ. ಸಾಹಿತ್ಯಿಕ, ಸಾಂಸ್ಕೃತಿಕ, ವೈಚಾರಿಕ ಕೊಡಕೊಳ್ಳುವಿಕೆ ಅನೇಕ ನೆಲೆಗಳಲ್ಲಿ ಹಾಗೂ ಹೆಚ್ಚಾಗಿ ಅಪ್ರಜ್ಞಾಪೂರ್ವಕವಾಗಿ ಆಗುವ ಸಾಧ್ಯತೆ ಇರುವುದರಿಂದ ಇದೊಂದು ಅತ್ಯಂತ ಸೂಕ್ಷ್ಮ ಹಾಗೂ ಖಚಿತವಾಗಿ ಗುರುತಿಸಲು ಅಸಾಧ್ಯವಾದ ಪ್ರಕ್ರಿಯೆ. ಇಂತಹ ವಿಶ್ಲೇಷಣೆ ಅನೇಕ ದುಡುಕಿನ ಮತ್ತು ತೇಲುಮಟ್ಟದ ತೀರ್ಮಾನಗಳಿಗೆ ದಾರಿ ಮಾಡಿಕೊಡುವ ಅಪಾಯವಿರುವುದರಿಂದ ರೆನೆವೆಲಕ್ ಮುಂತಾದ ವಿದ್ವಾಂಸರು ಪ್ರಭಾವ ಅಧ್ಯಯನವನ್ನು ಸಂಶಯದಿಂದಲೇ ನೋಡುತ್ತಾರೆ. ಅವರ ವಾದವೇನೆಂದರೆ "ಸಾಹಿತ್ಯಿಕ ಅಧ್ಯಯನದಲ್ಲಿ 'ಕಾರಣ' ಮತ್ತು 'ಪರಿಣಾಮದ' ಪರಿಕಲ್ಪನೆಯೆ ಅವಿಮರ್ಶಾತ್ಮಕ ಹಾಗೂ ಅ ಸಾದು", ಆದರೆ ಯಾವ ಲೇಖಕನೂ ಒಂದು ಶೂನ್ಯ ನಿರ್ವಾತ ಸಂದರ್ಭದಲ್ಲಿ ಬರೆಯುವುದಿಲ್ಲ. ತಾನೂ ಎಂದೋ ಓದಿ ಮೆಚ್ಚಿದ ಕೃತಿ ತಾನೂ ಅಥವಾ ತನ್ನ ಸಮಕಾಲೀನ ಸಂಸ್ಕೃತಿ ಮಾನ್ಯ ಮಾಡಿದ ವೈಚಾರಿಕತೆ ತನ್ನದಕ್ಕಿಂತ ಬೇರಯಾದುದ್ದನ್ನು ಒಳಗೊಂಡ ಸಂಸ್ಕೃತಿ–ಇವುಗಳು ಅವನನ್ನು ಮತ್ತು ಅವನಿಂದ ರಚಿಸಲ್ಪಟ್ಟ ಕೃತಿಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪ್ರಭಾವಿಸಿಯೇ ಇರುತ್ತವೆ. ಇಂತಹ ಪ್ರಭಾವನ್ನು ಅದಕ್ಕಿಂತ ಮುಖ್ಯವಾಗಿ ಇಂತಹ ಪ್ರಭಾವದ ತಾತ್ಕಾಲಿಕ ಒತ್ತಡವನ್ನು ಗುರುತಿಸಲು ಸಾಧ್ಯವಾಗದೆ ಒಂದು ಕಾಲಘಟ್ಟದ ಸಾಹಿತ್ಯ. ಸಂಸ್ಕೃತಿಯ ಸಮಾಜದ ಒಲವುಗಳನ್ನು ಆಸೆ–ಆಕಾಂಕ್ಷೆಗಳನ್ನು ಆಳವಾಗಿ ಅರಿಯಲು ಸಾಧ್ಯವಾಗುತ್ತದೆ. ಆದ್ದರಿಂದಲೇ "ತೌಲನಿಕ ಸಾಹಿತ್ಯದ

ಅಧ್ಯಯನವೆಂದರೆ ಮುಖ್ಯವಾಗಿ ಭಿನ್ನ ಭಿನ್ನ ಲೇಖಕರ ಹಾಗೂ ಸಾಹಿತಿಗಳ ನಡುವೆ ಆಗಿರುವ ಪರಸ್ಪರ ಪ್ರಭಾವದ ಅಧ್ಯಯನ ಮತ್ತು ಆ ಪ್ರಭಾವದ ಪ್ರಸರಣದ ಅಧ್ಯಯನ." ಎಂದು ಸೈಮನ್ ಜೂನ್ ವಾದಿಸುತ್ತಾನೆ. ಪ್ರಭಾವ ಅಧ್ಯಯನ ಅತ್ಯಂತ ವಿವಾದಾಸ್ಪದವೇಕೆಂದರೆ ವ್ಯಾವಹಾರಿಕ ಕ್ಷೇತ್ರದಲ್ಲಿ ಸಾಧ್ಯವಿರುವ ಹಾಗೆ ಸಾಹಿತ್ಯಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ನೇರ ಹಾಗೂ ಸಂಪೂರ್ಣ ಕೊಡು ಕೋಳ್ಳುವಿಕೆ ಸಾಧ್ಯವಿಲ್ಲ. ಒಂದು ಸಮಾಜ, ಸಂಸ್ಕೃತಿ ತಾನು ಯಾವ ಪ್ರಭಾವವನ್ನು ಸ್ವೀಕರಿಸಲು ಸಿದ್ಧವಿದೆಯೋ ಅದನ್ನು ಮಾತ್ರ ಸ್ವೀಕರಿಸುತ್ತದೆ. ಮತ್ತೆ ನಿರ್ಧಿಷ್ಟವಾಗಿ ಯಾವುದೊಂದನ್ನು ಇನ್ನೊಂದು ಸಾಹಿತ್ಯದಿಂದ ಸಂಸ್ಕೃತಿಯಿಂದ ಸ್ವೀಕರಿಸುವಾಗಲೂ ಅದನ್ನು ತನ್ನ ಒತ್ತಡಗಳಿಗೆ ಮಾರ್ಪಡಿಸಿ, ಅಂದರೆ ತನ್ನದಾಗಿಸಿಕೊಂಡು ಸ್ವೀಕರಸುತ್ತದೆ.

4. ತೌಲನಿಕ ಕಾವ್ಯಮೀಮಾಂಸೆ: (Comparative poetics):

ಭಾರತೀಯ ರಸ ಸಿದ್ಧಾಂತ ಮತ್ತು ಗ್ರೀಕ್ ಕೆಥಾಸ್ರಿಸ್ ಪರಿಕಲ್ಪನೆ, ಔಚಿತ್ಯ ಮತ್ತು ಡೆಕೋರಂ ಪರಿಕಲ್ಪನೆಗಳು, ಧ್ವನಿ ಪ್ರಸ್ತಾನ ಮತ್ತು ಪಾಶ್ಚಾತ್ಯ ರೂಪನಿಷ್ಠ ಪ್ರಸ್ತಾನ.... ಇತ್ಯಾದಿ. ಸಮಾನವೆಂದು ಕಾಣುವ ಇಂತಹ ಪ್ರಸ್ತಾನಗಳ ಭಿನ್ನತೆಗಳನ್ನು ಗುರುತಿಸಿ ಆ ಸಮಾನತೆ–ಭಿನ್ನತೆಗಳ ಸಾಂಸ್ಕೃತಿಕ ಗೃಹೀತಗಳನ್ನು ಹಾಗೂ ಪ್ರೇರಣೆಗಳನ್ನು ಅಧ್ಯಯನ ಮಾಡಿದರೆ ಆ ಮೂಲಕ ಆ ಎರಡೂ ಸಾಹಿತ್ಯಗಳ, ಸಂಸ್ಕೃತಿಗಳ ಅರಿವು ಹೆಚ್ಚಾಗುತ್ತದೆ. ಅಲ್ಲದೆ ಈ ಮೊದಲೇ ಸೂಚಿಸದಂತೆ ಇಂತಹ ಅರಿವು ಒಂದು ದೇಶದ ಹೀನ ಪ್ರಜ್ಞೆಯನ್ನು ನಿವಾರಿಸಿ ಸಾಂಸ್ಕೃತಿಕ ಪ್ರತಿಷ್ಠೆಗೆ ಎಡೆಮಾಡಿಕೊಡುತ್ತದೆ. ಅತ್ಯಾಧುನಿಕವೆಂದು ತೋರುವ ಡೆರಿಡಾನ 'ನಿರಚನ' (D-Construction) ಚಿಂತನೆಗೂ ಭಾರತದಲ್ಲಿ ಎರಡು ಸಾವಿರ ವರ್ಷಗಳ ಹಿಂದೆ ಪ್ರಚಲಿತವಿದ್ದ ಬೌದ್ಧ ಚಿಂತಕರ 'ಅಪೋಹ' ವಾದಕ್ಕೂ ಸಾಮ್ಯತೆ, ಇದೆ ಎಂಬ ಅರಿವು ಕೂಡ ಭಾರತೀಯ ಸಾಂಸ್ಕೃತಿಕ ಆತ್ಮ ಅಭಿಮಾನಕ್ಕೆ ಮುಖ್ಯವಾಗುತ್ತದೆ. ತೌಲನಿಕ ಕಾವ್ಯಮಿಮಾಂಸೆಯ ಗುರಿ ಎರಡು ವಿಮರ್ಶಾ ಮಾರ್ಗಗಳ, ಪರಿಕಲ್ಪನೆಗಳ ಸಮಾನ ಅಂಶಗಳನ್ನು ಯಾಂತ್ರಿಕವಾಗಿ ಪಟ್ಟಿಮಾಡುವುದಲ್ಲ. ಅಥವಾ ತುಲನೆಯಲ್ಲಿ ತರ–ತಮ ಮೌಲ್ಯಾತ್ಮಕ ನಿರ್ಣಯಗಳನ್ನು ಕೊಡುವುದಿಲ್ಲ. ಬದಲಾಗಿ ಸಮಾನ ವಿಮರ್ಶಾ ಮಾರ್ಗಗಳು ಹಾಗೂ ಚಿಂತನೆ ಬೆಳೆದು

ಬರುವುದಕ್ಕೆ ಕಾರಣವಾದ ಸಾಮಜಿಕ, ಸಾಂಸ್ಕೃತಿಕ ರಚನೆಗಳನ್ನು ಗುರುತಿಸಿ ಅವುಗಳ ವಿಶ್ಲೇಷಣೆ ಮಾಡುವುದು.

೫. ಭಾಷಾಂತರ ಅಧ್ಯಯನ (Translation studies):

ಪಾಶ್ಚಾತ್ಯರಲ್ಲಿಯೂ ಭಾಷಾಂತರ ಅಧ್ಯಯನ ಇತ್ತೀಚಿನ ಅಂದರೆ ಕೇವಲ ೨೦ನೇ ಶತಮಾನದ ಬೆಳವಣಿಗೆ ಭಾಷಾಂತರವೂ ವಾಖ್ಯಾನ ಪ್ರಕ್ರಿಯೆಯ ಒಂದು ರೂಪವಾದುದರಿಂದ ಭಾಷಾಂತರ ಅಧ್ಯಯನ ಒಂದು ಭಾಷೆ ಪ್ರತಿನಿಧಿಸುವ ಒತ್ತಡಗಳು, ಸಾಮಾಜಿಕ ವಿಧ-ನಿಷೇಧಗಳು ಮತ್ತು ಪ್ರತಿಯೊಂದು ಭಾಷೆಗೂ ಇರುವ ಅನನ್ಯ ವ್ಯೆವಸ್ಥೆ ಇವೆಲ್ಲವುಗಳ ಬಗ್ಗೆ ಗಂಭೀರ ಒಳನೋಟಗಳನ್ನು ಕೊಡಬಲ್ಲದು. ಭಾಷಾಂತರ ಅಧ್ಯಯನ ಎರಡು ದಿಕ್ಕುಗಳಲ್ಲಿ ನಡೆಯಬಹುದು. ಮೊದಲನೆಯದಾಗಿ ತಾತ್ವಿಕ ನೆಲೆಯಲ್ಲಿ ಭಾಷಾಂತರ ಪ್ರಕಾರಗಳು ಮತ್ತು ಅವುಗಳ ಹಿಂದಿರುವ 'ಅನುವಾದ-ಅಸಾಧ್ಯತೆಯ ಎಲ್ಲೆಗಳು' **(limits of untranstbaility)** ಅನುವಾದ ಪ್ರಕ್ರಿಯೆಯಲ್ಲಿ ಅಪರಿಚಿತ ಅಂಶಗಳನ್ನು ಪರಿಚಿತವಾಗಿಸುವ ಸಾಂಸ್ಕೃತಿಕ ವೈಚಾರಿಕ ಒತ್ತಡಗಳು-ಇವುಗಳ ವಿಶ್ಲೇಷಣೆ. ಎರಡನೆಯ ಪ್ರಕಾರವೆಂದರೆ ಒಬ್ಬ ಲೇಖಕನ (ಭಿನ್ನ ಭಾಷೆಗಳಲ್ಲಿ ಆಗಿರುವ) ವಿವಿಧ ಭಾಷಾಂತರ ಅಥವಾ ಒಂದೇ ಭಾಷೆಯಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಒಬ್ಬನೇ ಲೇಖಕನ ಒಂದೇ ಕೃತಿಯ ಭಾಷಾಂತರಗಳ ಅಧ್ಯಯನ ಇಲ್ಲಿಯೂ ಕೂಡ ಒತ್ತುಬೀಳುವುದು ಸಮಾನತೆಗಳಿಗಿಂತ ಭಿನ್ನತೆಗಳ ಮೇಲೆ ಮತ್ತು ಇಂತಹ ಭಿನ್ನತೆಗಳು ಸೂಚಿಸುವ ಸಾಂಸ್ಕೃತಿಕ ಅಂಶಗಳ ಮೇಲೆ ಉದಾ: ಕಾಳಿದಾಸನ 'ಶಾಕುಂತಲಾ' ನಾಟಕದ ಅನೇಕ ಅನುವಾದಗಳು ಕನ್ನಡ, ಇಂಗ್ಲೀಷ್‌ನಲ್ಲಿ ಇತರ ಭಾಷೆಗಳಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಬಂದಿವೆ. ಆದರೆ ಯಾವ ಒಂದು ಭಾಷಾಂತರ ಮೂಲ ಒಂದೇ ಆದರೂ ಸಂಪೂರ್ಣವಾಗಿಲ್ಲ. ಪ್ರತಿಯೊಂದು ಭಾಷಾಂತರವೂ ಮತ್ತೊಂದರಿಂದ ಭಿನ್ನವಾಗಿದೆ. ಉಪಯೋಗಿಸಿದ ಭಾಷಾ ಸ್ಥರದಲ್ಲಿ ಸಂಗ್ರಹ-ವಿಸ್ತಾರ ಕಾರ್ಯಗಳಲ್ಲಿ ಇತ್ಯಾದಿ ಇಂತಹ ಭಿನ್ನತೆಗಳನ್ನು ಗುರುತಿಸಿ ಅವುಗಳ ಆಧಾರದ ಮೇಲೆ ಅನೇಕ ಸಾಹಿತ್ಯಿಕ-ಸಾಂಸ್ಕೃತಿಕ ಒಳನೋಟಗಳನ್ನು ಪಡೆಯುವ ಸಾಧ್ಯತೆ ಇದೆ.

ಈ ರೀತಿಯಂತೆ ತೌಲನಿಕ ಅಧ್ಯಯನಕ್ಕೆ ತೊಡಗುವಾಗ ಮೇಲಿನಂತೆ ಮೊದಲಾದ ಪ್ರಕಾರಗಳನ್ನ ಬಳಸಬಹುದಾಗಿದೆ. ಈ ತೌಲನಿಕ ವಿವೇಚನ ಕ್ರಮ ಪಾಶ್ಚಿಮಾತ್ಯರಲ್ಲಿ ಬಹು ವ್ಯಾಪಕವಾಗಿ ಹರಿಡಿರುವುದು ನಿಜವಾದರೂ ಭಾರತೀಯ ಹಾಗೂ ಕನ್ನಡ ಕೃತಿ ಚಿಂತನಾ ಕ್ರಮದಲ್ಲಿ ಈ ತೌಲನಿಕ ಪ್ರಜ್ಞೆ ಗುಪ್ತಗಾಮಿನಿಯಾಗಿದೆ. ಎಂಬುದನ್ನು ತೆಗೆದುಹಾಕುವಂತಿಲ್ಲ. ವಿರ್ಮಶಕ ತನ್ನ ಈ ತೌಲನಿಕ ಪ್ರಜ್ಞೆಯನ್ನು ಮತ್ತು ತೌಲನಿಕ ವಿಮರ್ಶಾ ವಿಧಾನವನ್ನು ಬಹು ನೆಲೆಯ ಮೇಲೆ ಬೆಳೆಸಬೇಕಾಗುತ್ತದೆ. ಪ್ರೊ.ಜಿ.ಎಸ್. ಶಿವರುದ್ರಪ್ಪನವರು ವಿಮರ್ಶಕ ಸಾಮ್ಯಕಂಡಲೆಲ್ಲಾ ಸ್ವಾಮ್ಯವನ್ನು ಶಂಕಿಸಬಾರದು. ಯಾವುದನ್ನು ಹೋಲಿಸಬೇಕು, ಎಷ್ಟರ ಮಟ್ಟಿಗೆ ಹೋಲಿಸಬೇಕು, ಯಾಕೆ ಹೋಲಿಸಬೇಕು ತನ್ನ ಮುಂದಿರುವ ಕೃತಿಯ ಬಹು ನೆಲೆಗಳನ್ನು ಗುರುತಿಸಲು ಮತ್ತು ಅವುಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಅವುಗಳ ವಿಶಿಷ್ಟತೆಯನ್ನು ಅನನ್ಯತೆಯನ್ನು ಎತ್ತಿಹಿಡಿಯಲು ಈ ಕ್ರಮ ಅಗತ್ಯವೆ? ಅನಿವಾರ್ಯವೇ? ಎಂಬ ಪೂರ್ವಾಲೋಚನೆಗಳನ್ನು ನಿಶ್ಚಿತ ಆಧಾರದ ಮೇಲೆ ಮತ್ತು ಪೂರ್ವಗ್ರಹಿತವಾಗಿ ಈ ವಿವೇಚನಾ ವಿಧಾನವನ್ನು ಅನುಸರಿಸಬೇಕಾಗುತ್ತದೆ.

ತೌಲನಿಕ ಅಧ್ಯಯನಕ್ಕೆ ತೊಡಗುವಲ್ಲಿ ಈ ಮೇಲಿನ ಎಲ್ಲಾ ಪರಿಕಲ್ಪನೆಗಳನ್ನಿಟ್ಟುಕೊಂಡು ಕೃತಿಗಳನ್ನು ಮತ್ತು ಲೇಖಕನನ್ನು ಒಳಗು ಮಾಡಬೇಕಾಗುತ್ತದೆ. ಇದರಂತೆ ತೌಲನಿಕ ಅಧ್ಯಯನ ಕ್ರಮದಲ್ಲಿ ಕೆಲವು ಸಮಸ್ಯೆಗಳನ್ನು ಗುರುತಿಸಬಹುದು. ತೌಲನಿಕ ಅಧ್ಯಯನವು ಒಂದು ಪ್ರತ್ಯೇಕ ಅಧ್ಯಯನ ವಿಷಯವಾಗಿ ತನ್ನನ್ನು ತಾನು ರೂಪಿಸಿಕೊಂಡಿಲ್ಲ. ತನ್ನದೇ ಆದ ಒಂದು ಅಧ್ಯಯನ ವಿಧಾನವನ್ನು ರೂಪಸಿಕೊಂಡು ಬೇಳೆಯಲಾಗಿಲ್ಲ, ಎಂಬುದು ಅದರ ಸದ್ಯದ ಸಮಸ್ಯೆಯಾಗಿದೆ. ವಿದ್ವಾಂಸರೆಲ್ಲ ತೌಲನಿಕ ಅಧ್ಯಯನವನ್ನು ಗತಕಾಲದ ಅಧ್ಯಯನ ವಿಷಯದಲ್ಲಿ ತುರುಕಲು ಅದರ ಮೇಲೆ ೧೯ನೇ ಶತಮಾನ ವಾಸ್ತವ ಸಂಗತಿ ನಿಷ್ಠತೆ ಒಣ ವೈಜ್ಞಾನಿಕ, ಚಾರಿತ್ರಿಕ ಮತ್ತು ಸಾಪೇಕ್ಷವಾದಗಳ ಹೆಣಭಾರವನ್ನು ಹೇರಲು ಪ್ರಯತ್ನಿಸಿದರು, ತನ್ನದೇ ಆದ ಪ್ರತ್ಯೇಕ ಅಧ್ಯಯನ ವಿಧಾನವಿದೆ ಎಂಬುದು ಪ್ರಶ್ನಾರ್ಹವಾಗಿದೆ.

ಅಡಿಟಿಪ್ಪಣಿಗಳು:

೧. 'ಸಾಹಿತ್ಯ ವಿಮರ್ಶೆ'ಡಾ.ಬಸವರಾಜ ಸಬರದ, ಪುಟ–೨೬ (T.S.Eliot: selected prose, page No: 23).

೨. ಅದೇ, ಪುಟ–೨೬.

೩. 'ವಿಮರ್ಶೆಯ ಪೂರ್ವ ಪಶ್ಚಿಮ', ಎಸ್.ಶಿವರುದ್ರಪ್ಪ, ೧೯೭೭, ಪುಟ–೪೧.

೪. 'ತೌಲನಿಕ ಸಾಹಿತ್ಯ ಮತ್ತು ಇತರೆ ಲೇಖನಗಳು', ಸಿ.ಎನ್.ರಾಮಚಂದ್ರನ್, ೧೯೯೮, ಪುಟ–೦೩.

೫. ಅದೇ, ಪುಟ–೩.

೬. ಅದೇ, ಪುಟ–೬.

೭. ಅದೇ, ಪುಟ–೬.

೮. ಅದೇ, ಪುಟ–೧೩.

ಅಧ್ಯಾಯ-೫

ಹೇಮಾವತಿ ಮತ್ತು ಹಂಸಗೀತೆ: ತೌಲನಿಕ ಸಮೀಕ್ಷೆ

೫.೧ ವಸ್ತು ನಿರ್ವಹಣೆ:

ಅನುಭವಗಳ ಕಲಾತ್ಮಕ ಅಭಿವ್ಯಕ್ತಿಯೇ ಸಾಹಿತ್ಯ. ಒಬ್ಬ ಸೃಜನ ಶೀಲ ಬರಹಗಾರ ತಾನು ಅನುಭವಿಸಿದ ಅಥವಾ ಕಂಡ, ಕಲ್ಪಿಸಿದ ಘಟನೆಗಳಿಗೆ ಒಂದು ರೂಪವನ್ನು ಕೊಟ್ಟು ಒಂದು ಮಾಧ್ಯಮದ ಮೂಲಕ ಅಭಿವ್ಯಕ್ತಿಸಬಹುದು, ಹಾಗೆ ಅಭಿವ್ಯಕ್ತಿಸಿದ ಮಾಧ್ಯಮವೇ ಕಾವ್ಯ, ಕಥೆ, ಕಾದಂಬರಿ ಇತ್ಯಾದಿ ಸಾಹಿತ್ಯ ಪ್ರಕಾರಗಳಾಗಿವೆ. "ಕಥಾ ಲೇಖನದಲ್ಲಿ ವಸ್ತುವಿಗೆ ಮಹತ್ವವಿದೆ. ಕಥೆಗಾರ ಜೀವನನವನ್ನು ತಾನು ನೋಡುವ ಬಗೆ, ತನ್ನ ಸಂಸ್ಕಾರ, ತನಗಿಂತ ಮೇಲಿನ ವರ್ಗ ಪ್ರಭಾವ ಇವುಗಳ ಹಿನ್ನೆಲೆಯಲ್ಲಿ ಕಥಾ ವಸ್ತುವನ್ನು ಆಯ್ದುಕೊಳುತ್ತಾನೆ. ಅಂದರೆ ಬದುಕನ್ನು ಕಾಣುವ ದೃಷ್ಟಿಕೋನಗಳು ವಸ್ತುವಿನ ಆಯ್ಕೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ". ಎನ್ನುವ ನಿರಂಜನರ ಮಾತುಗಳು ಅರ್ಥಪೂರ್ಣವಾಗಿದೆ. ಯಾವುದೇ ಒಂದು ಸಾಹಿತ್ಯ ಕೃತಿ, ಕೃತಿಯಲ್ಲಿರುವ ವಸ್ತುವನ್ನು ಲೇಖಕ ಹೇಗೆ ನಿರ್ವಹಿಸುತ್ತಾನೆ. ಎಂಬುದು ಮುಖ್ಯ. ತನ್ನ ಅನುಭವಗಳನ್ನನಿಟ್ಟುಕೊಂಡು ಕೃತಿಯನ್ನು ಓದುವವನ ಅನುಭವವೇ ಅನ್ನುವ ಹಾಗೆ ವಸ್ತು ನಿರ್ವಹಣೆ ಮಾಡುವುದು ಕೃತಿಯ ಯಶಸ್ಸಿಗೆ ಕಾರಣವಾಗುತ್ತದೆ. ವಸ್ತು ಸಾರ್ವತ್ರಿಕತೆಯನ್ನು ಪಡೆದುಕೊಂಡ ನಿರ್ವಹಣೆಗೆ ಒಳಾಗಾಗಿರುತ್ತದೆ. ಅಂತಹ ಯಶಸ್ವಿ ವಸ್ತು ನಿರ್ವಹಣೆಗೊಂಡ ಕಾದಂಬರಿಗಳು 'ಹೇಮಾವತಿ' ಮತ್ತು 'ಹಂಸಗೀತೆ' ಗಳಾಗಿವೆ.

ಗೊರೂರು ಜೀವನದ ಅನುಭವಗಳ ಸಾಮಾಜಿಕ ಸ್ಥಿತಿ-ಗತಿಗಳ, ಸಾಮಾಜಿಕ ಸಮಸ್ಯೆಗಳ ಸವಿಸ್ತಾರ ಚಿತ್ರಣಗಳನ್ನು ತಮ್ಮ ಕಾದಂಬರಿಯಲ್ಲಿ ನೀಡುತ್ತಾರೆ. ಗ್ರಾಮವನ್ನು ಕೇಂದ್ರಿಕರಿಸಿಕೊಂಡು ಗ್ರಾಮ ವ್ಯವಸ್ಥೆಯ ಚಿತ್ರಣ, ವ್ಯವಸ್ಥೆಯಲ್ಲಿ ಉಂಟಾಗುವ ಪರಿವರ್ತನೆ ಹೇಮಾವತಿ ಕಾದಂಬರಿಯಲ್ಲಿ ಕಾಣಬಹುದು. ಕನ್ನಡದಲ್ಲಿ ಚಾರಿತ್ರಿಕ ವಸ್ತುವನ್ನಾಧರಿಸಿ ಬರೆದ ಕೆಲವೇ ಪ್ರಮುಖ ಕಾದಂಬರಿಕಾರರಲ್ಲಿ ತ.ರಾ.ಸು ಒಬ್ಬರು. ಚಾರಿತ್ರಿಕ ವಸ್ತುವನ್ನಾಧರಿಸಿ ಕಾದಂಬರಿ ಬರೆಯುವುದು ಅಷ್ಟು ಸರಳವಾದ ವಿಷಯವಲ್ಲ. ಕಾದಂಬರಿ ಹಿಂದೆ ನಡೆಸ

ಬೇಕಾದ ಪೂರ್ವ ಸಿದ್ಧತೆಗಳು, ಸಾಮಗ್ರಿ ಸಂಗ್ರಹ, ಅಧ್ಯಯನ ಪ್ರಮುಖ ಪಾತ್ರ ವಹಿಸುತ್ತವೆ. ತ.ರಾ.ಸು ರವರ ಐತಿಹಾಸಿಕ ಕಾದಂರಿಗಳನ್ನೊದಿದಾಗ ಅವರು ನಡೆಸಿರುವ ಸಿದ್ಧತೆಗಳ ಅರಿವಾಗುತ್ತದೆ. ಇತಿಹಾಸದ ಅಧ್ಯಯನ, ಶಾಸನಗಳು, ಐತಿಹ್ಯಗಳು, ತಿರುಗಾಟದ ಅನುಭವಗಳು ಇವುಗಳನ್ನು ಸಮಗ್ರವಾಗಿ ಬಳಸಿಕೊಳ್ಳುತ್ತಾರೆ. ವಸ್ತುವಿನ ಆಯ್ಕೆಯಲ್ಲಿ ವೈವಿದ್ಯತೆ ಇರುವಂತೆ ಎಚ್ಚರಿಕೆ ವಹಿಸುತ್ತಾರೆ. ಇಂತಹ ಪೂರ್ವ ಸಿದ್ಧತೆಗಳೊಂದಿಗೆ ರಚನೆಗೊಂಡು ಓದುಗರನ್ನು ರಂಜಿಸುವ ಕಾದಂಬರಿ ಹಂಸಗೀತೆ.

ಗೊರೂರರ ಹೇಮಾವತಿ ಕಾದಂಬರಿಯ ನಾಯಕಿ ಕಾದಂಬರಿ ಶೀರ್ಷಿಕೆಯೇ ಸೂಚಿಸಿರುವಂತೆ ಹೇಮಾವತಿಯೇ ಆಗಿದ್ದಾಳೆ. ರಾಮಣ್ಣ ಪೆರುಮಾಳರದು ಸಂಗೀತಕ್ಕೆ ಪ್ರಸಿದ್ಧವಾದ ಮನೆತನ. ಅವರ ತಾತಂದಿರಾದ ಶ್ರೀನಿವಾಸ ಪೆರುಮಾಳರು ಸಂಗೀತ ಕಲೆಯನ್ನು ಚೆನ್ನಾಗಿ ಸಾಧಿಸಿಕೊಂಡವರು ಅಂತಹ ಕುಟುಂಬದಲ್ಲಿ ಜನಿಸಿದವಳು ಹೇಮಾವತಿ ಅವಳೆ ಕಾದಂಬರಿ ಶೃತಿ. ಅವಳ ಮುಖಾಂತರ ಕಾದಂಬರಿ ಒಳಗಡೆ ಜೀವನದ ಹಾಡು ಸುಮಧುರವಾಗಿ ಮೂಡಿಬಂದಿದೆ. ಹೇಮಾವತಿ ಕಾವೇರಿ ಅಗ್ರಹಾರದ ರಾಮಣ್ಣ ಪೆರುಮಾಳರ ಒಬ್ಬಳೇ ಮಗಳು ತಾಯಿ ಕಳೆದುಕೊಂಡ ತಬ್ಬಲಿ. ಚಿಕ್ಕ ವಯಸ್ಸಿನಿಂದ ಅವಳ ಕಷ್ಟದ ದಿನಗಳು ಪ್ರಾರಂಭವಾಗಿ ಮದುವೆಯಾಗಿ ಕೆಲವು ವರ್ಷಗಳವರೆಗೂ ಮುಂದುವರೆಯುತ್ತದೆ ಕಷ್ಟ ಮುಗಿದು ಅವಳ ಬದುಕಿನ ಸುಖದ ಹಾದಿ ತೆರೆದಾಗ ಕಾದಂಬರಿ ಅಂತ್ಯವಾಗುತ್ತದೆ. ಇದರ ನಡುವೆ ಮಲತಾಯಿ ಮಾತ್ಸರ್ಯದ ರಾಮಣ್ಣ ಪೆರುಮಾಳರ ಎರಡನೇ ಹೆಂಡತಿ ರಂಗನಾಯಕಿ ಮಲತಾಯಿ ಮಾತ್ಸರ್ಯ ಅವಳಕ್ಕ ಈಳಿಗೆ ಮಣೆ ಹೇಮಾವತಿಗೆ ನೀಡುವ ಹಿಂಸೆಯ ಕ್ರೌರ್ಯ, ಅಗ್ರಹಾರದ ಜಮೀನ್ದಾರ ಶಠಾರಿಯವರ ನಡುವೆ ಸಿಲುಕಿ ಹೇಮಾವತಿ ಪಟ್ಟ ಹಿಂಸೆಗಳು, ರಾಮಣ್ಣ ಪೆರುಮಾಳರ ತಮ್ಮ ಆನಂದ ಹೊಲೆಯರ ಕಾಳನ ಮಗಳಿಗೆ ಸಂಗೀತ ಕಲಿಸಿ ಗಾನ ಶಾರದೆಯನ್ನಾಗಿ ಮಾಡುವ ಮಾನವೀಯ ಗುಣಗುಳುಳ್ಳ, ವಾಸು ಗಾನಶಾದರೆ ಚೆನ್ನಯೊಂದಿಗೆ ಜಾತಿ ಮೀರಿ ವಿವಾಹವಾಗುವ ಹೃದಯವಂತಿಕೆ ಇಷ್ಟೆಲ್ಲ ಕಥಾ ಸಾರ ಹೊತ್ತ ಕಾದಂಬರಿ ಹೇಮಾವತಿ.

ಹಂಸಗೀತೆ ಕಾದಂಬರಿಯ ನಾಯಕ ವೆಂಕಟಸುಬ್ಬಯ್ಯ ಹಕ್ಕಿಯ ಕೂಗು, ಗಂಟೆಯ ನಾದ ಎಲೆಗಳ ಸದ್ದು ಮುಂತಾದ ನಿಸರ್ಗ ಸಹಜ ಶಬ್ದಗಳಿಗೆ ಚಿಕ್ಕಂದಿನಲ್ಲಿಯೇ ಸ್ಪಂದಿಸುತ್ತಿದ್ದನು. ಸಂಗೀತ ಸ್ಪರ್ಧೆಯಲ್ಲಿ ದೈವ ವಶಾತ್ ಎಂಬಂತೆ ಗುರು ತಿರುಮಲ್ಲಯ್ಯನನ್ನೇ ಸೋಲಿಸಿ ಅವನ ಸಾವಿಗೆ ಕಾರಣನಾಗುತ್ತಾನೆ. ಸಂಗೀತ ಕಲಿಕೆಯಲ್ಲಿ ಇನ್ನೂ ಅಪೂರ್ಣನಾಗಿದ್ದಾಗ ಪೂರ್ಣತೆ ಕಡೆಗೆ ತಿರುಗಿಸುವವನು ವಿಲಕ್ಷಣ ವ್ಯಕ್ತಿತ್ವದ ಬೈರಾಗಿ ಸದಾನಂದ ಬುವಾ, ಸಂಗೀತ ಸಾಧನೆಯ ಮೆಟ್ಟಿಲ ಹತ್ತಲು ದಾರಿ ತೋರಿಸಿದವನು ಸೋದರ ಮಾವ ಅನಂತಯ್ಯ. ವೆಂಕಟಸುಬ್ಬಯ್ಯ ಸಂಗೀತ ಸಾಧನೆಯಿಂದ ಆಸ್ಥಾನದ ಸಂಗೀತಗಾರನು ಆಗಿಬಿಡುತ್ತಾನೆ. ಇದರ ಪರಿಣಾಮ ಆತನಲ್ಲಿ ಅಹಂ ಭಾವ ಬೆಳೆಯುತ್ತದೆ. ಇದರಿಂದಾಗಿ ಸಂಗೀತ ಕಛೇರಿಯಲ್ಲಿ ಸನ್ಯಾಸಿ ಒಬ್ಬನ ಬಾಲ ಶಿಷ್ಯನ ಮೃದಂಗ ತಾಳಕ್ಕೆ ಶೃತಿ ಕೂಡಿಸಲಾಗದೇ ಸೋಲುತ್ತಾನೆ, ಅನಂತರ ತನ್ನ ತಪ್ಪನ್ನು ಅರಿತು ಸಹಜವಾಗುತ್ತಾನೆ.

ಹೀಗಿರುವಾಗ ಚಂದ್ರಸೇನೆ ಎಂಬ ವೇಶ್ಯೆಯೊಬ್ಬಳಲ್ಲಿ ಮನಸೋತು ಆಕೆಗಾಗಿ ಸಂಗೀತದ ರಾಗಗಳನ್ನು ಒತ್ತೆ ಇಡುತ್ತಾನೆ. ಈತನ ಹಿತೈಶಿ ಸೋದರ ಮಾವ ಅನಂತಯ್ಯ ಮಧ್ಯಸ್ಥಿಕೆಯಲ್ಲಿ ಚಂದ್ರಸೇನೆ ತನ್ನ ಪ್ರಿಯನ ಶ್ರೇಯಸ್ಸಿಗಾಗಿ ವಿಷ ಕುಡಿದು ಸಾಯುತ್ತಾಳೆ. ಇದರಿಂದ ದೊಡ್ಡ ಆಘಾತವಾದ ವೆಂಕಟಸುಬ್ಬಯ್ಯ ಮತ್ತೆ ಸಂಗೀತ ಸಾಧನೆ ಲೋಕಕ್ಕೆ ಮರುಳುತ್ತಾನೆ, ಭೈರವಿ ರಾಗವನ್ನು ತನ್ನದಾಗಿಸಿಕೊಳ್ಳುತ್ತಾನೆ. ಆ ವೇಳೆಗೆ ಚಿತ್ರದುರ್ಗ ಕೋಟೆ ಟಿಪ್ಪು ವಶವಾಗುತ್ತದೆ. ತನ್ನ ಮಡದಿಯ ಬಯಕೆಯಂತೆ ಆಸ್ಥಾನದಲ್ಲಿ ಹಾಡುವಂತೆ ವೆಂಕಟಸುಬ್ಬಯ್ಯನನ್ನು ಟಿಪ್ಪು ಆಜ್ಞಾಪಿಸುತ್ತಾನೆ. ದೇವರ ಗುಡಿಯಲ್ಲಿ ಬಿಟ್ಟು ಆಸ್ಥಾನಗಳಲ್ಲಿ ಹಾಡುವುದಿಲ್ಲ ಎಂದು ಪ್ರಮಾಣ ಮಾಡಿದ್ದ ವೆಂಕಟಸುಬ್ಬಯ್ಯ ಸಹಜವಾಗಿಯೇ ಟಿಪ್ಪು ಆಜ್ಞೆ ವಿರೋಧಿಸುತ್ತಾನೆ. ಟಿಪ್ಪು ಶಿಕ್ಷಿಸುವುದಾಗಿ ಬೆದರಿಸುತ್ತಾನೆ. ಸ್ವಾಭಿಮಾನಿ ವೆಂಕಟಸುಬ್ಬಯ್ಯ ತನ್ನ ನಾಲಿಗೆಯನ್ನು ಕತ್ತರಿಸಕೊಂಡು ಅರಮನೆಯಲ್ಲಿ ಹಾಡದೆ ಪ್ರಾಣ ಬಿಟ್ಟು ಇತಿಹಾಸವಾಗಿ ಉಳಿಯುತ್ತಾನೆ. ಇಂತಹ ಸ್ವಾರಸ್ಯ ಪೂರ್ಣ ಕಥಾ ನಿರ್ವಹಣೆಯನ್ನು 'ಹಂಸಗೀತೆ' ಯಲ್ಲಿ ಕಾಣಬಹುದಾಗಿದೆ.

ಹೇಮಾವತಿ ಕಾದಂಬರಿಯಲ್ಲಿ ಶೋಷಣೆಯ ವಿರುದ್ಧ ಕೂಗಿದೆ. ಇಲ್ಲಿ ಬದುಕಿನ ವೈಲಕ್ಷಣಗಳು, ದೊಡ್ಡ ಕ್ಯಾನ್‌ವಾಸಿನ ಮೇಲೆ ಅರಳಿವೆ. ಮನುಷ್ಯರ ಮಾನವೀಯ ಗುಣಗಳು, ಒರಟು ತನ ಸಣ್ಣ ತನ ಈ ಎಲ್ಲಾ ವಿಷಯಗಳು ಕಥೆಯಲ್ಲಿ ಸಾಂಗೋಪ ಸಾಂಗವಾಗಿ ಸಾಗುತ್ತವೆ. ಗೊರೂರು ಹೇಮಾವತಿ ಜೀವನದ ಸಾಚಾ ಅನುಭವಗಳನ್ನ ಕಥೆಯಲ್ಲಿ ಹೊತ್ತು ಸಾಗುತ್ತಾರೆ. ಕಾಲಾನುಕಾಲಕ್ಕೆ ಸಾಮಾಜಿಕ ಬದಲಾವಣೆಯಲ್ಲಿ ಆಧುನಿಕವಾಗುವುದನ್ನು ಪ್ರಸ್ಥಾಪಿಸುತ್ತಾರೆ. ಈ ಸಮಾಜದ ಅಸ್ತಿತ್ವ ಉಳಿಯಲು ನಾವು ಅವಲಂಬಿಸಬೇಕಾದ ಸಾಮಾಜಿಕ ಮಾರ್ಗ, ತ್ಯಜಿಸಬೇಕಾದ ಪ್ರಾಚೀನ ರೋಗಗಳ ಕುರಿತು ನಿರ್ವಹಿಸುತ್ತಾ ಹೋಗುತ್ತಾರೆ. ಹಳ್ಳಿಯಲ್ಲಿ ಹೊಸ ವಾತಾವರಣ ಸೃಷ್ಟಿಸಿ, ಪಂಚಮರ ಉದ್ದಾರದ ಬಗೆಗೆ ಲೇಖಕರು ಉತ್ತರ ನೀಡುತ್ತ ಕಥೆಯನ್ನು ವಿಸ್ತೃತಗೊಳಿಸುತ್ತಾರೆ. ಗ್ರಾಮಗಳ ಪುನರುಜ್ಜೀವನ ಕುರಿತು ಗಾಂಧೀವಾದದ ಬೆಳಕಿನಲ್ಲಿ ಚಿಂತನೆ ನಡೆಸಿ ಕಾದಂಬರಿ ವಸ್ತುವಿನಲ್ಲಿ ನಿರ್ವಹಿಸುತ್ತಾರೆ. ಆರೋಗ್ಯ ಶಾಲಿ ಮೌಲ್ಯ ಪ್ರಜ್ಞೆಯನ್ನು ಮೂಡಿಸುತ್ತಾರೆ. ಕಾದಂಬರಿಯಲ್ಲಿನ ವ್ಯಕ್ತಿಗಳು ಆದರ್ಶ ಕನಸಿನ ಲೋಕದವರು ನಮ್ಮ ಸುತ್ತ ಮುತ್ತಲಿನ ಜೀವಂತ ಜನರ ಜೀವನಾಡಿ ಹಿಡಿದು ಕಾದಂಬರಿಯಲ್ಲಿ ವಸ್ತು ನಿರ್ವಹಣೆಗೆ ತೊಡುಗುತ್ತಾರೆ. ವಿವಾಹದ ನೆಪದಲ್ಲಿ ನಡೆವ ಶೋಷಣೆಯನ್ನು ಬ್ರಾಹ್ಮಣರ ಮನೆಗಳಲ್ಲಿ ನಡೆದ ದುಷ್ಟವಾದ ಸುಲಿಗೆಗಳನ್ನು ಪ್ರಸ್ತಾಪಿಸುತ್ತಾ ಸಾಗುತ್ತಾರೆ.

ಎಲೆಮರೆ ಕಾಯಿಯಂತಿದ್ದ ಚೆನ್ನಿಯ ಒಳಗಿನ ಸಂಗೀತ ಕಲೆಯನ್ನು ಬೆದಕಿ ಸಮಾಜದ ಕಣ್ಮುಂದೆ ಪ್ರಕಾಶಿಸುವಂತೆ ತೋರಿ ದಲಿತೋದ್ಧಾರವನ್ನು ಕಥಾವಸ್ತುವಿನಲ್ಲಿ ನಿರ್ವಹಿಸುತ್ತಾರೆ. ಈ ಸಂದರ್ಭಕ್ಕೆ "ಕಂಬಳಿ ಹುಳದಂತೆ ಸರಿಯುತ್ತಿದ್ದ ಚೆನ್ನಿಯ ಬದುಕು ಚಿಟ್ಟೆಯಂತೆ ಬಣ್ಣವೇರಿತು."[೧] ಎಂಬ ಪ.ವಿ.ಚಂದ್ರಶೇಖರ ಮಾತು ಪ್ರಶಂಸನೀಯವಾದುದು. ಇದಕ್ಕೆ ಮಾದರಿ ಉದಾಹರಣೆಯಾಗಿ ಮುತ್ತಜ್ಜನ ಕಾಲದಿಂದಲೂ ತೋಟದಲ್ಲಿ ದುಡಿಯುತ್ತಿದ್ದ ಹೊಲೆಯ ಕಾಳನ ಮಗಳು ಚೆನ್ನಿ ಆನಂದ ತೋಟಕ್ಕೆ ಬಂದಾಗ ಮಾವಿನ ಮರದಡಿಯಲ್ಲಿ ಕುಳಿತು ಹಾಡುತ್ತಿದ್ದ ಪ್ರಸಂಗ "ಆನಂದ ತೋಟಕ್ಕೆ ಬಂದುದನ್ನು ಕಾಳ ಕಾಣಲಿಲ್ಲ. ಅವನ ಪಾಡಿಗೆ ಅವನು ತೋಟವನ್ನು ಅಗೆಯುತ್ತಿದ್ದನು. ಮಾವಿನಮರದ ಕೆಲಫೆ ಅವನ ಹುಡುಗಿ

ಆರು ವರುಷದ ಚೆನ್ನಿ ಕಿರುದನಿಯಲ್ಲಿ ಮೆತ್ತಗೆ ಹಾಡುತ್ತಿದ್ದಳು. ಆನಂದ ದೇವಾಸ್ಥಾನದ ಕೈಸಾಲೆಯಲ್ಲಿ ಹುಡುಗಿಯರಿಗೆ ಹೇಳಿಕೊಡುತ್ತಿದ್ದ ಒಂದು ಹಾಡು ಅದು ಊರ ಸುತ್ತ ತಲೆಯ ಮೇಲೆ ಕುಕ್ಕೆ ಇಟ್ಟುಕೊಂಡು ಸಗಣಿಯನ್ನು ಎತ್ತಿಕೊಂಡು ಹೋಗುವಾಗ ಚೆನ್ನಿ ದೇವಸ್ಥಾನದ ಕೈಸಾಲೆಯ. ಹತ್ತಿರ ನಿಂತು ಆಂನದ ಹುಡುಗಿರಯರಿಗೆ ಹಾಡುಗಳನ್ನು ಕಲಿಸುವುದನ್ನು ಕೇಳಿದ್ದಳು. ಒಂದು ಎರಡು ದಿನ ಕೇಳುವುದರೊಳಗಾಗಿ ಅವಳಿಗೆ ಹಾಡುಗಳು ಬಾಯಿಗೆ ಬರುತ್ತಿದ್ದವು. ಅವಳು ಆ ಹಾಡುಗಳನ್ನು ತನ್ನ ಪಾಡಿಗೆ ತಾನು ದನಗಳನ್ನು ಕಾಯುತ್ತಿರುವಾಗ ಸಗಣಿ ಎತ್ತುತ್ತಿರುವಾಗ ಹೇಳಿಕೊಳ್ಳುತ್ತಿದ್ದಳು. ಈಗ ಅವಳ ಕಂಠವನ್ನೇ ಕೇಳಿ ಆನಂದನಿಗೆ ರೋಮಾಂಚನವಾಯಿತು. ಅವನು ಕನಸಿನಲ್ಲಿ ಕೇಳಿದ್ದ ಯಾವ ಧ್ವನಿಯನ್ನು ಅರಸುತ್ತಾ ತಿರುಗುತ್ತಿದ್ದನ್ನೋ ಅದೇ ಈ ಕಂಠ ಎಂದು ಅವನಿಗೆ ತೋರಿತು. ಆನಂದ ಹುಲ್ಲು ಬದುವನ್ನು ಒರಗಿಕೊಂಡು ಕುಳಿತಿದ್ದನು ಕುಳಿತನು. ನೆಟ್ಟಗೆ ಕುಳಿತಿದ್ದವನ್ನು ಎದ್ದು ಚೆನ್ನಿಯ ಹತ್ತಿರಕ್ಕೆ ಹೋದನು. ಚೆನ್ನಿ ಇವನು ಬಂದುದನ್ನು ಅರಿಯದೆ ತನ್ನ ಪಾಡಿಗೆ ತಾನು ಹಾಡುತ್ತಲೇ ಇದ್ದಳು".[೨]

ಇಲ್ಲಿ ತ.ರಾ.ಸು ರವರಂತೆ ಸುಬ್ಬಯ್ಯನಲ್ಲಿ ಸಂಗೀತ ಕಲಿಕೆಯ ಹಂಬಲಿಕೆಯ ಸಾದೃಶ್ಯವನ್ನೇ ಚೆನ್ನಿಯಲ್ಲಿ ಕಾಣಬಹುದು. ಗೊರೂರು ಅವಳಲ್ಲಿದ್ದ ಗೌಪ್ಯವಿದ್ಯೆ, ಸಂಗೀತ ಕಲಿಕೆಯಲ್ಲಿದ್ದ ಆಸಕ್ತಿ, ಶ್ರದ್ಧೆ, ಹುಮ್ಮಸ್ಸುಗಳನ್ನು ವಿವರಿಸುತ್ತಾರೆ. ಇಂತಹ ಮಣ್ಣಿನಲ್ಲಿ ಹುದುಗಿದ್ದ ಚಿನ್ನವನ್ನು ಆಭರಣವಾಗಿ ಬ್ರಾಹ್ಮಣ ಆನಂದ ರೂಪು ಕೊಡುವುದನ್ನು ಗೊರುರು ತಮ್ಮ ಕಥೆ ವಸ್ತುವಿನಲ್ಲಿ ಅದಮ್ಯವಾಗಿ ನಿರ್ವಹಿಸುತ್ತಾ ಹೋಗುತ್ತಾರೆ. ಒಟ್ಟಿನಲ್ಲಿ ಒಂದು ವ್ಯವಸ್ಥೆ ಅಳಿದು ಮತ್ತೊಂದು ವ್ಯವಸ್ಥೆ ರೂಪುಗೊಳ್ಳುವಾಗ, ಹಿಂದಿನ ವ್ಯವಸ್ಥೆಯಲ್ಲಿನ ಸಂಸ್ಕೃತಿಯನ್ನ ಬಿಟ್ಟು ಕೊಡಲಾರದ ಒಂದು ತಲೆಮಾರು ಹಳೆಯ ಪದ್ಧತಿ ಸರಿಯಲ್ಲ ಎಂದು ವಾದಿಸುತ್ತಾ ಬದಲಾವಣೆ ಬಯಸುತ್ತಿರುವ ಮತ್ತೊಂದು ತಲೆಮಾರು ಮುಖಾಮುಖಿಯಾಗುವುದನ್ನು ಕಥೆ ನಿರ್ವಹಣೆಯಲ್ಲಿ ಕಾಣಬಹುದು. ವ್ಯವಸ್ಥೆ ಸ್ಥಿತ್ಯಂತರ ಸಮಯದಲ್ಲಿ ಉದ್ಭವಿಸುವ ದ್ವಂದ್ವ ಸಮಸ್ಯೆಗಳು ಇವನ್ನೆಲ್ಲಾ ಒಂದೇ ಸೂತ್ರದಲ್ಲಿ ಹೆಣೆಯುತ್ತಾರೆ.

ಹಂಸಗೀತೆ ಸಾಧನೆ ಪರಿಪೂರ್ಣತೆಯ ಹಾದಿಯಲ್ಲಿ ಯಾತ್ರೆ ಹೊರಟ ಕಾದಂಬರಿ ಜಡ ವ್ಯಕ್ತಿತ್ವದ ವೆಂಕಟಸುಬ್ಬಯ್ಯ ಮನುಷ್ಯನಾಗಿ ಕೊನೆಗೆ ದೇವರಿಗೆ ಮೀಸಲಾದ ಚೇತನವಾದ ಪ್ರಕ್ರಿಯೆ ಕಾದಂಬರಿಯಲ್ಲಿದೆ. ಚಂದ್ರಸಾನಿ-ವೆಂಕಟಸುಬ್ಬಯ್ಯ ಇವರಿಬ್ಬರ ನಡುವಿನ ಮನುಷ್ಯ ಸಹಜ ಪ್ರವೃತ್ತಿಗಳ ಪ್ರೇಮದಲ್ಲಿ ಗಂಡು-ಹೆಣ್ಣಿನ ಆಕರ್ಷಣೆ ವಿಕರ್ಷಣೆಗಳನ್ನು ಕುರಿತಂತೆ ವಿವರಣೆಯಲ್ಲಿ ಕಥೆಸಾಗಿದೆ. ಪ್ರಗತಿಶೀಲ ಧೋರಣೆಯನ್ನು ಮೀರಿದ ಅಭಿವ್ಯಕ್ತಿ ವಿಧಾನ ವಸ್ತು ನಿರ್ವಹಣೆಯಲ್ಲಿ ತುಂಬಿದೆ. ಅಂದಿನ ಕಾಲ ಸಂದರ್ಭದ ವೇಶ್ಯಾ ಜೀವನದ ಹಲವು ಮುಖಗಳನ್ನು ತೋರಿಸುವ ಕ್ರಿಯೆ ಪುಟ್ಟತಾಯಮ್ಮ, ಚಂದ್ರಸಾನಿ, ಚಿತ್ರದುರ್ಗ ಬುರುಜಿನ ಹಟ್ಟಿಯ ವಿವರಗಳೊಂದಿಗೆ ತೋರಿಸುವ ಪ್ರಯತ್ನ ನಡೆಸುತ್ತಾರೆ.

ಕಸ್ತೂರಿ ರಂಗಾಚಾರ್ಯರ ಹತ್ತಿರ ಪಾಠಕಲಿಯಲು ಹೋಗುತ್ತಿದ್ದ ವೆಂಕಟಸುಬ್ಬಯ್ಯ ಶಾಲೆಯಲ್ಲಿ ಅನ್ಯ ಮನಸ್ಕತೆಯಿಂದ ಇರುತ್ತಿದ್ದನು. "ಇವರು ಮಗ್ಗಿಯನ್ನೋ ಕಾಗುಣಿತವನ್ನೋ ಪಾಠವನ್ನೋ ಹೇಳುತ್ತಿದ್ದರೆ, ಹುಡುಗನ ಮನಸ್ಸೆಲ್ಲೋ ಹುಲ್ಲು ಮೇಯುತ್ತಿರುವುದು. 'ಬಾಯಿ ಪಾಠ ಒಪ್ಪಿಸುವ' ಎಂದರೆ ಮಾತ್ರ ರಾಗವಾಗಿ, ಕಿವಿಗಿಂಪಾಗುವಂತೆ ಕೇಳುವವರ ಮನಸ್ಸು ಸೆರೆಯಾಗುವಂತೆ, ಜೇನು ಸುರಿದಂತೆ ಹೇಳುತ್ತಾನೆ. ಆದರೆ ಹೇಳ ಹೇಳುತ್ತಲೇ, ಬೀದಿಯಲ್ಲಿ ಹಸು ಕೂಗಿದರೆ, ದೇವಾಲಯದ ಎದುರಿನ ಅಶ್ವತ್ಥವೃಕ್ಷದ ಎಲೆಗಳು ಗಾಳಿಯಲ್ಲಿ ಗೆಜ್ಜೆಯಲುಗಿಸದಂತೆ ಸದ್ದು ಮಾಡಿದರೆ, ಯಾವುದಾದರೂ ಹಕ್ಕಿ ಕುಕಿಲಿದರೆ, ದೇವಾಲಯದ ಗಂಟೆ ಗಂಭೀರವಾಗಿ ಮೊಳಗಿದರೆ, ಆ ಸದ್ದು ಕೇಳಲೆಂದೇ ಕಿವಿದೆರೆದು ನಿಂತಿದ್ದಂತೆ, ಹೇಳುತ್ತಿದ್ದುದನ್ನೇ ಮರೆತು, ಹೊರಗಿನಿಂದ ಕೇಳಿಬಂದ ನಾದದಲ್ಲಿ ಲೀನನಾಗಿಬಿಡುತ್ತಿದ್ದ. ಉಪಾಧ್ಯಾಯರನ್ನು ನೋಡುತ್ತಿದ್ದ ಕಣ್ಣು ಹಾಗೇ ಅರೆಮುಚ್ಚಿ, ಎಲ್ಲೋ ನೋಡುವುದು. ಸುತ್ತಲ ಹುಡುಗರು, ಗಟ್ಟಿಯಾಗಿ ನಗಲಾರದೆ, ಉಬ್ಬಸಪಡುತ್ತಾ ಮುಸಿಮುಸಿ ನಗುವುದೂ, ಆಚಾರ್ಯರಕಣ್ಣು ಕರ್ಕಶವಾಗಿ, ಕೈ ಬರಲನ್ನು ತಡಕುವುದೂ ಒಂದೂ ತಿಳಿವುದಿಲ್ಲ".[೩]

"ಆದಿನ ಆಚಾರ್ಯರು ಹುಡಗರಿಗೆ ಸತ್ಯ ಕಾಮ-ಜಾಬಾಲಿಯ ಕಥೆ ಹೇಳುತ್ತಿದ್ದರು. ಪಾಠ ಹೇಳುವಾಗ ಹೇಳಹೇಳುತ್ತಲೇ ನಡುವೆ ನಿಲ್ಲಿಸಿ, ಹುಡುಗರನ್ನು ಪ್ರಶ್ನೆಮಾಡಿ, ಅವರು ಎಷ್ಟರಮಟ್ಟಿಗೆ ಮನಸ್ಸಿಟ್ಟು ಪಾಠ ಕೇಳುತ್ತಿದ್ದಾರೆಂದು. ಪರೀಕ್ಷಿಸುವುದು ಆಚಾರ್ಯರ ಪದ್ಧತಿ.

ಕಥೆ ಆರಂಭಿಸುವಾಗ, ಸುಟಿಯಾಗಿ ಕೇಳುತ್ತಾ ಕುಳಿತಿದ್ದ ವೆಂಕಟಸುಬ್ಬು, ಅವರು ಪ್ರಶ್ನೆ ಕೇಳಬೇಕೆಂದು ಅಂದುಕೊಳ್ಳುವ ಹೊತ್ತಿಗೆ, ಎಲ್ಲೋ ಪರವಶಚಿತ್ತನಾಗಿದ್ದ. ಅವನ ಕಣ್ಣು, ಅರಳಿಮರದ ಎಲೆಗಳ ನಡುವೆ ನಾಟಿತ್ತು. ಆಚಾರ್ಯರಾಡುತ್ತಿದ್ದ ಮಾತು, ಹೇಳುತ್ತಿದ್ದ ಕಥೆ ಕೋಣನ ಮೇಲೆ ಬಿದ್ದ ನೀರಿನಂತೆ, ಅವನ ಮನಸ್ಸನ್ನು ಸೋಕದೆ ಎಲ್ಲೋ ಹೋದಂತಿತ್ತು."[೪]

"ಎಲ್ಲಾದರೂ ಯಾರಾದರು ಸಂಗೀತ ಹೇಳ್ತಾ ಇದ್ರೆ ಕೇಳೋದಿರಲಿ ಜೇನು ಜುಂಯ್ ಅಂದರೆ ದುಂಬಿ ಹಾರ್ತಾ ಇದ್ರೆ ನೀರು ಸದ್ದು ಮಾಡುತ್ತಾ ಇದ್ರೆ ಅದನ್ನೇ ಕೇಳ್ತಾ ಮೈಮರ್ತು ಬಿಡ್ತಾ ಇದ್ನಂತೆ."[೫] ಈ ಮೇಲಿನ ವಿವರಗಳಲ್ಲಿ ಅವನಲ್ಲಿ ಯಾವ ರೀತಿ ಸಂಗೀತ ಕಲಿಯ ಬೇಕೆಂಬ ಆಸೆ ಆಕಾಂಕ್ಷೆಗಳು ಪ್ರಬಲವಾಗಿ ಅಡಗಿದ್ದವು ಎಂಬುದನ್ನು ಸೂಚಿಸುತ್ತಾರೆ.

ಸಾಹಿತ್ಯ, ಶಿಲ್ಪಕಲೆ ಚಿತ್ರಕಲೆಗಳಿಗಿರುವಂತೆ ಸಂಗೀತಕ್ಕೇ ಅನೇಕ ಪರಂಪರೆ ಇದೆ. ಆ ಪರಂಪರೆಯಲ್ಲಿ ಸಂಗೀತ ಸಾಂಸಕೃತಿಕ ಘಟಕವಾಗಿ ಕ್ರಿಯಾಶೀಲವಾಗಿದೆ ಭಾರತೀಯ ಶಾಸ್ತ್ರಗಳ ಪ್ರಕಾರ ೬೪ ಕಲೆಗಳಿವೆ ಅವುಗಳಲ್ಲಿ ಸಂಗೀತವೂ ಒಂದು, ಶಾಸ್ತ್ರವೂ, ಕಲೆಯೂ ಆಗಿರುವ 'ಸಂಗೀತ' ವಿಶೇಷ ಕಲೆ ಎನಿಸಿದೆ. ಗೀತ, ವಾದ್ಯ, ನೃತ್ಯ, ಈ ಮೂರು ಸಂಗೀತವಾಗುತ್ತದೆ ಎಂಬುದು ಪ್ರಾಚೀನರ ಅಭಿಪ್ರಾಯ. ಈಗ ಸಾಮಾನ್ಯವಾಗಿ ಗೀತ ವಾದ್ಯಗಳು ಮಾತ್ರ ಸಂಗೀತದ ಅಂಗಗಳಾಗಿವೆ. ಸಂಗೀತದಲ್ಲಿ ರಾಗ, ತಾಳ, ಸಾಹಿತ್ಯಗಳು ಪ್ರಧಾನ ಅಂಶಗಳು. ಭಾರತದಲ್ಲಿ ಕರ್ನಾಟಕ ಮತ್ತು ಹಿಂದೂಸ್ಥಾನಿ ಎಂಬ ಎರಡು ಸಂಗೀತ ಪದ್ಧತಿಗಳು ಬಳಕೆಯಲ್ಲಿವೆ. ಇವರೆಡೂ ಮೂಲತಃ ಸಂಪ್ರದಾಯ ನೆಲೆಯಿಂದ ರೂಪು ಪಡೆದ ಪದ್ಧತಿಗಳು ಮೊದ ಮೊದಲು ಸಂಗೀತ ಬಾಯಿಂದ ಬಾಯಿಗೆ ಕಲಿಸಲ್ಪಡುತ್ತಿತ್ತು. ಕ್ರಮೇಣ ಸ್ವರ, ಪ್ರಸ್ತಾರ, ತಾಳಗಳನ್ನು ಸೂಚಿಸಿ ಸಂಗೀತವನ್ನು ಬರೆಯುವ ಪದ್ಧತಿ ಪಾಶ್ಚಿಮಾತ್ಯ ಸಂಗೀತದಲ್ಲಿ ಮೊದಲು ರೂಢಿಗೆ ಬಂದಿತು. ಇನ್ನಿತರ ಸಂಗೀತ ಪದ್ಧತಿಗಳಲ್ಲೂ ಇದರ ಉಪಯೋಗ ಪಡೆದುಕೊಳ್ಳುವ ಪ್ರಯೋಗಗಳು ನಡೆದಿವೆ.

ದಕ್ಷಿಣ ಭಾರತದ ಸಂಗೀತ ಪದ್ಧತಿಯಿಂದ ಉತ್ತರ ಭಾರತದ ಸಂಗೀತ ಹೊರಗಿನ ಪ್ರಭಾವಕ್ಕೆ ಒಳಗಾಯಿತು. ಇವುಗಳಲ್ಲಿ ಪರ್ಷಿಯಾ ಮತ್ತು ಅರೇಬಿಯಾದ ಸಂಗೀತಗಳು ಪ್ರಮುಖವಾದವು. ಸಂಗೀತ ಶ್ರೋತೃಗಳಿಗೆ ಆನಂದ ಕೊಡುವುದಷ್ಟೇ ಅಲ್ಲದೆ ಇನ್ನೂಕೆಲವು

ಮಹತ್ವದ ಕೆಲಸಗಳನ್ನು ಸಂಗೀತದಿಂದ ಸಾಧಿಸಬಹುದಾದಗಿದೆ, ದೇಹ ಮತ್ತು ಮನಸ್ಸಿನ ಕೆಲ ರೋಗಗಳನ್ನು ಸೂಕ್ತ ಸಂಗೀತದಿಂದ ಗುಣ ಪಡಿಸಬಹುದೆಂದು ತಿಳಿದುಬರುತ್ತದೆ. "ಬೌದ್ಧ ಮತ ಪ್ರಚಾರ ಪ್ರಬಲವಾಗಿದ್ದ ಕಾಲದಲ್ಲಿ ಭಾರತೀಯ ಸಂಗೀತ, ಚೀನಾ, ಟಿಬೆಟ್, ಕೊರಿಯಾ, ಜಪಾನ್, ಮುಂತಾದ ರಾಷ್ಟ್ರಗಳಿಗೆ ಹರಡಿತು ಎಂದು ತಿಳಿದುಬರುತ್ತದೆ. ಸಂಗೀತ ಸಾಹಿತ್ಯವನ್ನವಲಂಬಿಸಯೇ ಬೆಳೆಯುವ, ಬೆಳೆಯುತ್ತಿರುವ ಒಂದು ಕಲೆ, ರಾಗ ತಾಳಗಳೇ ಪ್ರಧಾನ. ಸಾಹಿತ್ಯ ಸಂಗೀತಕ್ಕೆ ನಿಕಟ ಸಂಬಂಧ ಇದೆ."[೬] ಇಂತಹ ಸಾಂಸ್ಕೃತಿಕಪರಂಪರೆಯಲ್ಲಿ ಸಾಗಿಬಂದ ಸಂಗೀತ ನಾಗರೀಕತೆಯ ಪ್ರಭಾವದೊಂದಿಗೆ ತನ್ನ ಸ್ವರೂಪದಲ್ಲಿ ಬದಲಾವಣೆ ಕಂಡುಕೊಳ್ಳುತ್ತಾ ಸಾಗಿದೆ. ಜಗತ್ತಿನಲ್ಲಿ ವಿಜ್ಞಾನ ಬೆಳೆದಂತೆ ಕಲೆಗಳು ಸಹ ಪರಿಪೂರ್ಣತೆಗೆ ಮತ್ತು ಅವುಗಳ ಬೆಳವಣಿಗೆಗೆ ಸಾಧನವಾಗಿದೆ. ಸಂಗೀತ ಅನ್ನುವುದು ಆರಂಭಿಕ ದಿನಗಳಲ್ಲಿ ಶ್ರೇಷ್ಠ ಕುಲದವರಿಗೆ, ರಾಜರೋಲಗ, ದೇವಮಂದಿರ, ಕೆಲವೇ ನಿಮಿತ್ತ ವ್ಯಕ್ತಿಗಳ ಮತ್ತು ಸ್ಥಳಗಳಿಗೆ ಮೀಸಲಾಗಿತ್ತು. ಸಂಗೀತ ಕಲಿಕೆಗೆ ವಿಶೇಷ ಪ್ರೌಢಿಮೆಗಳಿರ ಬೇಕೆಂಬ ನಂಬಿಕೆಗಳು ಇತ್ತು. ಇತ್ತೀಚಿನ ಆಧುನಿಕ ಜಗತ್ತಿನಲ್ಲಿ ಈ ಎಲ್ಲಾ ನಿರ್ಬಂಧಗಳನ್ನು ಮೀರಿ ಸಂಗೀತ ಸಾರ್ವತ್ರಿಕತೆಯನ್ನು ಪಡೆದುಕೊಂಡಿದೆ ಜಾಗತಿಕ ವಲಯದಲ್ಲಿ ಸಂಗೀತಕ್ಕೆ ಮಣಿಹಾಕದ ಮನವಿಲ್ಲ.

ಮೇಲಿನಂತೆ ವಿಶಿಷ್ಟ ಪರಂಪರಯುಳ್ಳ ಸಂಗೀತದ ಕಥಾ ವಸ್ತುವುಳ್ಳ ಕಾದಂಬರಿಗಳು ಹೇಮಾವತಿ ಮತ್ತು ಹಂಸಗೀತೆ. ಜಾತಿಯಲ್ಲಿ ಕೀಳೆಂದು ಪರಿಗಣಿಸಲ್ಪಟ್ಟ ದಲಿತ ಹೆಣ್ಣು ಮಗಳು ಚೆನ್ನಿ ಮೇಲು ಜಾತಿಯ ಸಮುದಾಯದಿಂದ ದೂಷಣೆಗೆ ಒಳಗಾದರು ಇದನ್ನೆಲ್ಲ ಮೀರಿಕೊಂಡು ಉತ್ತಮಜಾತಿಯ ಆನಂದನ ಪ್ರೋತ್ಸಾಹದೊಂದಿಗೆ ಅಭಿನವ ಶಾರದೆಯಾಗಿ ರೂಪುಗೊಂಡು, ಸಾಧನೆಯತ್ತ ತನ್ನನ್ನು ರೂಢಿಸಿಕೊಂಡು ಒಂದು ಹಳ್ಳಿಗಾಡಿನ ಸಮುದಾಯದ ಬದಲಾಣೆಗೆ ಕಾರಣವಾಗುವುದು ಒಂದು ವ್ಯವಸ್ಥೆಯೊಳಗಿನ ಸಮಸ್ಯೆಗಳನ್ನು ಹೇಮಾವತಿ ಕೌಟುಂಬಿಕ ಜೀವನದಲ್ಲಿ ಅನುಭವಿಸುವ ಹಿಂಸೆಗಳ ಚಿತ್ರಣಗಳನ್ನ ಬಿತ್ತರಿಸುವ ಕಾರ್ಯ ಹೇಮಾವತಿ ಕಾದಂಬರಿಯಲ್ಲಿ ನಡೆದರೆ, ಹಂಸಗೀತೆಯಲ್ಲಿ ತರಾಸು ಆರಸಿಕೊಂಡಿದ್ದು ಆರಂಭಿಕ ದಿನಗಳ ಸಾಂಪ್ರಾದಾಯಿಕ ಮೌಲ್ಯದ ಚೌಕಟ್ಟಿಗೆ ಒಳಗೊಂಡ

ಸಂಗೀತ. ಸಾರ್ವತ್ರಿಕ ಸಂಗೀತ ಸಾಮಾಜಿಕ, ರಾಜಕೀಯ ಶಿಕ್ಷಣ ಮೊದಲಾದ ಕ್ಷೇತ್ರದಲ್ಲಿ ಜಾತಿ ಶ್ರೇಷ್ಠತೆ ಕಾರಣದಿಂದ ಮೇಲುವರ್ಗಕ್ಕೆ ಮೀಸಲಾದಂತೆ ಸಂಗೀತ ಕ್ಷೇತ್ರವು ಜಾತಿಯಲ್ಲಿ ಶ್ರೇಷ್ಠರೆನಿಸಿಕೊಂಡವರಿಗೆ ಮೀಸಲಾಗಿತ್ತು. ಅಂತಹ ಶ್ರೇಷ್ಠ ಕುಲದಲ್ಲಿ ಹುಟ್ಟಿದ ವೆಂಕಟಸುಬ್ಬಯ್ಯನ ಸಾಧನೆಯ ನಿರೂಪಣ ಕಥನ ಹಂಸಗೀತೆ. ಗೊರೂರು ಆಧುನಿಕತೆ ಒಗ್ಗಿಕೊಂಡ ಕುಲದಶ್ರೇಷ್ಠತೆ ಮೀರಿದ ಎಲ್ಲಾ ಮೌಲ್ಯಗಳನ್ನು ಮುರಿದುಕಟ್ಟುವ ಪ್ರಕ್ರಿಯೆ ಹೇಮಾವತಿ ಕಾದಂಬರಿಯಲ್ಲಿ ನಿರೂಪಿಸುತ್ತಾರೆ.

ಹೇಮಾವತಿ, ಹಂಸಗೀತೆಯಂತೆ ಕೇವಲ ಒಂದೇ ಪಾತ್ರ ಕಾದಂಬರಿಯನ್ನು ಆವರಿಸಿಕೊಂಡಿಲ್ಲ. ಇಲ್ಲಿಯೂ ಕೆಲವು ಇತಿಹಾಸದ ಘಟನೆಗಳು ಚರ್ಚೆಗೆ ಬಂದರು ನೇರವಾಗಿ ವಸ್ತುವಿನಲ್ಲಿ ಲೇಖಕರು ನಿರ್ವಹಿಸುವುದಿಲ್ಲ. ಅಂತಹ ಐತಿಹಾಸಿಕ ಅಂಶಗಳನ್ನ ಹೆಚ್ಚಾಗಿ ತರುವುದಿಲ್ಲ. ಆದರೂ ರಾಮಣ್ಣಪೆರುಮಾಳರ ಅಜ್ಜ ಶ್ರೀನಿವಾಸಪೆರುಮಾಳರ ಸಂಗೀತ ಸಾಧನೆ ಸಂದರ್ಭದಲ್ಲಿ ಐತಿಹಾಸಿಕತೆಯನ್ನ ಕುರಿತ ವಿವರಣೆ ಹಾಗೂ ಸ್ವತಂತ್ರಹೋರಾಟದ ಸಂದರ್ಭದ ಇತಿಹಾಸ ಪ್ರೇರಣೆಯನ್ನು ಗಾಂಧೀಧೋರಣೆಗಳನ್ನು ಕೆಲ ಪ್ರಸಂಗಗಲ್ಲಿ ಕಾಣಬಹುದು. ಕಾದಂಬರಿಯಲ್ಲಿ ಗೊರೂರರ ಮುಖ್ಯ ಉದ್ದೇಶ ಹೇಮಾವತಿ ಕುಟುಂಬ ಜಟಿಲತೆ, ಕಾವೇರಿ ಅಗ್ರಹಾರದ ವ್ಯವಸ್ಥೆಯಲ್ಲಿನ ಕುಟಿಲತೆ, ತಾರತಮ್ಯ, ಅನಿಷ್ಠತೆ, ಬಿತ್ತರಿಸುವುದೆಂಬಂತೆ ತೋರಿದರೂ, ಕಾದಂಬರಿಯಲ್ಲಿ ದಲಿತ ಬ್ರಾಹ್ಮಣಸಮುದಾಯದ ನಡುವಿನ ಘರ್ಷಣೆ ಇಂತಹ ವ್ಯವಸ್ಥೆಯಲ್ಲಿ ದಲಿತ ಹೆಣ್ಣೊಬ್ಬಳು ಅಭಿನವಶಾರದೆಯಾಗಿ ಮೇಲು ಮುಖ ಚಲನೆ, ಆಧುನಿಕ ಪರ ಚಿಂತನೆಗಳನ್ನು ವಸ್ತುನಿರ್ವಹಣೆಯಲ್ಲಿ ಕಾಣಬಹುದು. ಗೊರೂರು ಇಲ್ಲಿ ಮೂರ್‍ನಾಲ್ಕು ಅಧ್ಯಾಯಯಗಳಲ್ಲಿ ಹೊರತು ಪಡಿಸಿದರೆ ಚೆನ್ನಿಯ ಸಂಗೀತ ಸಾಧನೆಯ ವಿವರಗಳನ್ನು ಹೆಚ್ಚಾಗಿ ವಿವರಿಸುವುದಿಲ್ಲ. ಸಂಗೀತ ವಿಷಯ ವಸ್ತವಿನ ನಿರ್ವಹಣೆ ಹೇಮಾವತಿಯಲ್ಲಿ ಗಾಢವಾಗಿ ಚರ್ಚಿತವಾಗದೆ ಗೌಣವಾಗಿ ಬಿಡುತ್ತದೆ.

ಕಾದಂಬರಿ ಪ್ರಾರಂಭದಲ್ಲಿ ತ.ರಾ.ಸು ಅವರಂತೆ ಗೊರೂರು ತಮ್ಮ ಕಾದಂಬರಿಯಲ್ಲಿ ಸುಮಾರ ಇನ್ನೂರು ವರ್ಷಗಳಿಂದಲೂ ಸಂಗೀತ ಸಾಹಿತ್ಯ ಪ್ರಾಬಲ್ಯ ಹೊಂದಿದಸಂಗೀತ ಪಾಂಡಿತ್ಯದಿಂದ ಮಹರಾಜರಿಂದ ತಲೆ ತೂಗಿಸಿಕೊಂಡ ರಾಮಣ್ಣಪೆರುಮಾಳುರವರ ಅಜ್ಜ

ಶ್ರೀನಿವಾಸಪೆರುಮಾಳು ಇಂತಹ ಶ್ರೇಷ್ಟ ಮರ್ಯಾದೆಗೆ ಪಾತ್ರವಾದ ಕುಟುಂಬ ಚಿತ್ರಣ ಕೊಡುತ್ತಾರೆ. ತಮ್ಮ ಆತ್ಮ ತೃಪ್ತಿಗೆ ರಾಜಾಶ್ರಯ ಬಯಸದೆ ಕುಳಿತಲ್ಲಿ ದೇವಸ್ಥಾನದಲ್ಲಿ ಹಾಡುವುದು ಭಜನೆ ಈ ತರಹದ ಸಾಂಪ್ರದಾಯಿಕ ಕುಟುಂಬವನ್ನು ಗೊರೂರು ತಮ್ಮ ಹೇಮಾವತಿ ಕಾದಂಬರಿಯಲ್ಲಿ ತರುತ್ತಾರೆ. ಪಾರಂಪರಿಕತೆಯನ್ನ ಕಥೆವಸ್ತುವಿನಲ್ಲಿ ತ.ರಾ.ಸು ರವರ ಹಂಸಗೀತೆಯಲ್ಲಿನ ಕಥಾವಸ್ತುವಿನಲ್ಲಿಯಂತೆ ಪರಿಚಯಿಸಿಸುತ್ತಾರೆ. ಈ ಕುಟುಂಬದ ಮುಖ್ಯವಾಹಿನಿಯಲ್ಲಿ ರಾಮಣ್ಣ ಪರೆಮಾಳರನ್ನು ಲೇಖಕರು ಕೊಂಡೊಯ್ಯುತ್ತಾರೆ. ರಾಮಣ್ಣ ಸಂಗೀತ ಬಲ್ಲವನಾದರೂ ರೈತನಾಗಿ ಉಳಿಯ ಬಯಸಿದವನು, ಇವನ ಮಗಳು ಹೇಮಾವತಿ ಈಕೆಯು ಒಳ್ಳೆ ಹಾಡುಗಾರ್ತಿಯಾದರೂ ಗೊರೂರು. ತ.ರಾಸು ರವರ ವೆಂಕಟಸುಬ್ಬಯ್ಯನಂತೆ ಇವಳನ್ನು ಸಂಗೀತ ಸಾಧನೆಯತ್ತ ಕೊಂಡೊಯ್ಯದೆ ಕೌಟುಬಿಕ ಜೀವನದತ್ತ ಮುಖಮಾಡಿಸಿ ಇವಳು ಕೌಟುಂಬಿಕ ವ್ಯವಸ್ಥೆಯಲ್ಲಿ ಅನುಭವಿಸುವ ಕಷ್ಟಕಾರ್ಪಣ್ಯಗಳ, ಬದುಕಿನ ಜಂಜಾಟಗಳ ಬಿತ್ತರಿಸುತ್ತಾ ಹೋಗುತ್ತಾರೆ.

ಹಂಸಗೀತೆಯಲ್ಲಿ ಚಿತ್ರದುರ್ಗದ ನಾಯಕರ ಕಾಲಕ್ಕೆ ಸೇರಿದ ಸಂಗೀತಗಾರ ವೆಂಕಟಸುಬ್ಬಯ್ಯ ದುರಂತ ಕಥೆ ನಿರೂಪಿಸಲ್ಪಟ್ಟಿದೆ. ವೆಂಕಟಸುಬ್ಬಯ್ಯನೆ ಕಥೆಯ ಕೇಂದ್ರ, ಅವನದುರಂತ ಕಥೆಯನ್ನು ರಸ ಪೂರ್ಣವಾಗಿ ನಿರ್ವಹಿಸಲಾಗಿದೆ. ತ.ರಾ.ಸು ಕಾದಂಬರಿಯ ಆರಂಭದಲ್ಲಿ ತಾವೇ ಹೇಳಿರುವಂತೆ “ಸಂಗೀತಗಾರನೊಬ್ಬನ ಬಾಳಿನ ಹಂದರ ಮೇಲೆ ಹಿಂದಿನ ಮತ್ತು ಇಂದಿನ ಸಂಸ್ಕೃತಿಯನ್ನು ನಾನಿಲ್ಲಿ ಚಿತ್ರಸಲೆಳೆಸಿದ್ದೇನೆ. ಕಾದಂಬರಿಯ ಲೇಖನದಲ್ಲಿ ಬಳಸಿರುವ ತಂತ್ರಕ್ಕೆ ಅದು ಕಾರಣ. ಇದರಲ್ಲಿ ಬರುವ ಎಲ್ಲಾ ಪಾತ್ರಗಳೂ ಕಲ್ಪನಾ ಸೃಷ್ಟಿ ಯಾವ ಜೀವಂತ ವ್ಯಕ್ತಿಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ರಚಿತವಾದುವಲ್ಲ. ರಾಗ ಸಾಕ್ಷತ್ಕಾರ, ರಾಗ ಒತ್ತೆ ಇಡುವುದು ಹೂವಿನಿಂದ ಪಾಠ ಕಲಿಯುವುದು–ಇವು ನಾನು ಕೇಳಿದ ಹಿರಿಯರ ಕಥೆಗಳಿಂದ ಪ್ರೇರೇಪಿತ.”[2] ಈ ಹಿನ್ನೆಲೆಯಲ್ಲಿ ಚಿತ್ರದುರ್ಗದ ನೆಲೆಗಟ್ಟಿನ ಆವರಣದೊಳಗೆ ಹಲವು ಸಂಗತಿಗಳ ಆಧಾರಗಳೊಂದಿಗೆ ಲಿಂಗಾಜೋಯಿಸರು, ಮುರುಗೇಂದ್ರಪ್ಪ, ಗೋಪಾಲಚಾರ್ರು, ಚಿನ್ನಪ್ಪ, ಪುಟ್ಟತಾಯಮ್ಮ ಗೋವಿಂದಯ್ಯ ಇವರೆಲ್ಲರು ಹೇಳುವ ‘ದಂಥಕತೆ’ ಯೊಂದಿಗೆ ಕಾಲ್ಪನಿಕ ಸಂಗೀತಗಾರನ ಸುತ್ತ ಅಪೂರ್ವ ಕಲಾವಂತಿಕೆ ಕಥೆಯನ್ನು

ಹೆಣಯಲಾಗಿದೆ. 'ಹಂಸಗೀತೆ' ಉದಕ್ಕೂ ಪ್ರಸುತ್ತ ಮತ್ತು ಭೂತದ ಮದ್ಯೆ ಅರ್ಗಪೂರ್ಣ ಐತಿಹಾಸಿಕ ಲೋಕವೊಂದನ್ನು ಸೃಷ್ಟಿಸಿ ವಸ್ತು ನಿರ್ವಹಣೆಗೆ ತೊಡುತ್ತಾರೆ.

ಹಂಸಗೀತೆ ಐತಿಹಾಸಿಕ ಕಾದಂಬರಿಯೆಂದು ಗುರುತಿಸಲ್ಪಟ್ಟರು ಐತಿಹಾಸಿಕ ಘಟನಾವಳಿಗಳು ಕೊಂಚ ಗೌಣ ಚಿತ್ರದುರ್ಗ ಕೊನೆಯ ಪಾಳೆಗಾರನ, ಹೈದರಾಲಿ, ಟಿಪ್ಪು ಪ್ರಸಂಗಗಳನ್ನು ಚಿತ್ರದುರ್ಗದಲ್ಲಿನ ದೇವಾಲಯಗಳ ಬಗೆಗಿನ ವಿವರಣೆಗಳನ್ನು ಬಿಟ್ಟರೆ ಹೆಚ್ಚಾಗಿ ಇತಿಹಾಸದ ಚರ್ಚೆಗಳು ಕಾದಂಬರಿಯಲ್ಲಿ ಕಂಡುಬರುವುದಿಲ್ಲ. ಕಾದಂಬರಿ ಪೂರ್ಣವೆಂಕಟಸುಬ್ಬಯನೇ ಆವರಸಿಕೊಂಡಿದ್ದಾನೆ. ಕಾಲ್ಪನಿಕ ಪಾತ್ರವಾದ ವೆಂಕಟಸುಬ್ಬಯನ ಮೂಲಕ ಐತಿಹಾಸಿಕ ಸಂಗಗತಿಗಳ ಹಿನ್ನೆಲೆಯಲ್ಲಿ ವಸ್ತು ನಿರ್ವಹಿಸುವಕಾರ್ಯ ನಡೆದಿದೆ. ಲೇಖಕರೆ ಕಥಾವಸ್ತುವನ್ನು ನಿರೂಪಿಸುವ ಕ್ರಿಯೆ ಕಾದಂಬರಿಯೊಳಗೆ ಕಾಣಬಹುದು.

ಗೊರುರು ಹೇಮಾವತಿಯ ಒಂದು ಪ್ರಾದೇಶಿಕ ಪರಿಸರದಲ್ಲಿ ನಿಂತು ವಸ್ತು ನಿರ್ವಹಣೆಗೆ ತೊಡಗುತ್ತಾರೆ. ಹಂಸಗೀತೆಯಲ್ಲಿ ತ.ರಾಸು ಅವರೆ ನಿರೂಪಕನ ಸ್ಥಾನದಲ್ಲಿ ಕಥಾ ವಸ್ತುವಿನ ನಿರ್ವಹಣೆಗೆ ತೊಡಗುತ್ತಾರೆ. ಇಬ್ಬರು ಲೇಖಕರ ಮನಸ್ಥಿತಿಗಳು ಸಂಪ್ರದಾಯಸ್ಥ ಮನಸ್ಥಿತಿಗಳಾದರೂ ಇವರೀರ್ವರು ತಳೆದ ನಿಲುವುಗಳು ವಸ್ತು ನಿರ್ವಹಣೆಯಲ್ಲಿ ಭಿನ್ನತೆ ಪಡೆದಿವೆ. ಗೊರುರು ನವೋದಯ ಕಾಲಗಘಟ್ಟದಲ್ಲಿ ಚಿಂತನಾಪರರಾದರು ಸಮಾಜವನ್ನು ಕೇಂದ್ರಿಕರಿಸಿಕೊಂಡು ಸಮಾಜಮುಖಿ ಕಾಳಜಿ ಹೊತ್ತ ವಸ್ತು ನಿರ್ವಹಣೆಗೆ ತೊಡುಗುತ್ತಾರೆ. ಆಧುನಿಕತೆಗೆ ಸಂಗೀತದ ಮೌಲ್ಯಗಳನ್ನು ಪ್ರತಿಸ್ಪರ್ಧಿಯಾಗಿ ಒಡ್ಡುತ್ತಾರೆ. ಪ್ರಗತಿಶೀಲ ಸಾಹಿತ್ಯ ಪಂಥ ಆದರ್ಶ, ಭಾವುಕತೆಗಳನ್ನೆಲ್ಲ ಮೀರಿ ಸಮಾಜಮುಖಿ ಪರ ಕಾರ್ಯನಿರ್ವಹಣೆಗೆ ತೊಡಗಿಸಿಕೊಂಡ ಕಾಲಘಟ್ಟವದು. ಅಂತಹ ಕಾಲಘಟ್ಟದ ಚಿಂತನಾಪರ ತ.ರಾ.ಸು ಹಂಸಗೀತೆಯಲ್ಲಿ ವೆಂಕಟಸುಬ್ಬಯ್ಯನ ಮೂಲಕ ಸಂಪ್ರದಾಯ ಆದರ್ಶ ಬಾವುಕತೆಯನ್ನ ಪ್ರತಿಪಾದಿಸುತ್ತಾರೆ. ಶ್ರೇಣಿಕೃತ ಸಂಪ್ರದಾಯವನ್ನೆ ಕೇಂದ್ರಿಕರಿಸಿ ಕೊಂಡು ಪಾರಂಪರಿಕ ಮೌಲ್ಯದೊಂದಿಗೆ ವಸ್ತು ನಿರ್ವಹಿಸುತ್ತಾರೆ. ಈ ಇಬ್ಬರು ಲೇಖಕರು ತಮ್ಮ ಉದ್ದೇಶಕ್ಕೆ ಪೂರಕವಾಗಿ ನಿರ್ವಹಿಸುತ್ತಾ ಹೋಗುತ್ತಾರೆ. ಗೊರೂರು ಸಂಗೀತ ಕಲಿಕೆ ಬಗೆ ಅಷ್ಟೊಂದು ಸಂಪೂರ್ಣವಿವರಣೆಗೆ ತೊಡಗುವುದಿಲ್ಲ. ವೇಗವಾಗಿ ಸಂಗೀತದ ವಸ್ತುವನ್ನು

ಕೊಂಡೊಯ್ಯುತ್ತಾರೆ. ತ.ರಾ.ಸು ಸಂಗೀತ ಕಲಿಕೆ ವಿವರಣೆಗಳನ್ನು, ಲಯಬದ್ಧವಾಗಿ ರಾಗ-ತಾಳಗಳ ಒಲಿಸಿಕೊಳ್ಳುವ ಬಗೆಗೆ ನಿಯಮಾತೀತವಾಗಿ ಸಂಗೀತ ಕಲಿಕೆ ಹೇಗೆ ಸಾಧ್ಯ ಎಂಬುದನ್ನು ಸಂಯಮ ಶೀಲ ಚಿತ್ತದಿಂದ ನಿರ್ವಹಿಸುತ್ತಾರೆ.

ಗೊರುರು ತ.ರಾ.ಸು ಅವರ ಹಾಗೆ ಸಾಂಪ್ರಾದಾಯಿಕವಾಗಿ ಅಲ್ಲದಿದ್ದರು ಸಂಗೀತದ ಶ್ರೇಷ್ಟತೆ ಕಲಿಕೆ ಬಗೆಗೆ ಮಾತನಾಡುತ್ತಾರೆ. "ಪುಸ್ತಕಗಳನ್ನೇ ಓದದೆ ವಿಮರ್ಶೆ ಮಾಡುವ ಆಧುನಿಕ ತರುಣ ವಿಮರ್ಶಕರಂತೆ, ಸಂಗೀತ ವಿಮರ್ಶಕರು ಸಂಗೀತ ಕೇಳದೆ ವಿಮರ್ಶೆ ಮಾಡುವುದಿಲ್ಲ. ಹಾಗೆ ಮಾಡಿದರೆ ಸಂಗೀತಗಾರರು ಅವರಿಗೆ ತಕ್ಕ ಶಾಸ್ತಿ ಮಾಡುವರು. ಆದರೆ ಬರೆದವನ ಪುಸ್ತಕವನ್ನು; ಬರೆವುದಕ್ಕೆ ಬರದವನ್ನು ವಿಮರ್ಶೆ ಮಾಡಬಹುದು. ವಿಷಯಗಳಿಲ್ಲದ ಪ್ರತಿಕಾರ್ಕರ್ತರು ತಮ್ಮ ಹಾಳೆಗಳನ್ನು ತುಂಬಲು ಅದನ್ನು ಅಚ್ಚು ಮಾಡಿಯೂ ಮಾಡುತ್ತಾರೆ. ಇರಲ್ಲಿ."[೮] ಬೆಂಗಳೂರಿನ ನಗರ ಭವನಕ್ಕೆ ಹಾಡಲು ಅಭಿನವ ಶಾರದೆ ಬರುತ್ತಾಳೆಂದಾಗ ಸಾಧನೆಯ ಹಂತವನ್ನೇರಿದ ಮೇಲೆ ಯಾವ ಜಾತಿಯಾದರೇನು ಸಮಾಜದಲ್ಲಿ ಗೌರವ ತನಗೆ ತಾನೇ ದೊರೆಯುತ್ತದೆ ಎನ್ನುವುದು ಕಾದಂಬರಿಯಲ್ಲಿ ಲೇಖಕರ ಆಶಯ "ಅಭಿನವ ಗಾನಶಾರದೆ ಮಾಟಗಾತಿಯಾಗಿ ತೋರಿದಳು. ಆಕೆ ಜನರ ಹೃದಯದ ತಂತಿಯನ್ನು ಮಿಡಿಯುತ್ತಿರುವಂತೆ ತೋರಿತು. ಶಂಕರಾಭರಣ, ತೋಡಿ, ಆನಂದ ಬೈರವಿ, ನಾಟಕುರಂಜಿ, ಆ ಗಾನವಾಃಇನಿ ಜನರನ್ನು ಯಾವ ಯಾವ ಜಗತ್ತಿಗೇ ಕೊಂಡು ಹೋಯಿತ್ತೊ! ಶ್ರೋತೃಗಳಿಗೆ ಅಪೂರ್ವವಾದ ಆನಂದವೂ ಸುಖವೂ ಉಂಟಾಯಿತು. ಆ ಗಾನ ಕೊಟ್ಟ ಸುಖ ಲೌಕಿಕವಾದುದಾಗಿ ಕಂಡಿತು. ಶ್ರೋತೃಗಳು ಕೇಳಿ ಕೇಳಿ ಮತ್ತಿನಿಂದ ಒಂದು ವಿಧವಾಗಿ ಸುಸ್ತಾದರು. "ಇದು ಗಾನಾವತಾರ. ಬರಿ ಗಂಟಲು ಮೂಳೆ ಮುರಿಯುವವರಗೆ 'ಸರಿಗಮ ಪದನಿಸ' ಕೂಗಿದ ಅಭ್ಯಾಸ ಮಾತ್ರವಲ್ಲ. ಈ ಕಂಠ, ಶಾರೀರ, ನೀರಿನ ಹರಿಯುವಿಕೆಯಂತೆ, ಗಾಳಿಯ ಚಲನದಂತೆ ಸ್ವಾಭಾವಿಕವಾದುದು. ಇದು ಕಲಿತ ಸಂಗೀತವಲ್ಲ, ಜೀರ್ಣಿಸಿಕೊಂಡಗಾನ ಎಂದು ಶ್ರೋತೃಗಳಿಗೆ ಅನುಭವಾಯಿತ್ತು. ಅಭಿನವ ಗಾನ ಶಾರದೆಗೆ ಅಷ್ಟು ಹಾಡಿದ ಮೇಲೂ ಆಯಾಸವಾದಂತೆ ತೋರಲಿಲ್ಲ. ಅವಳು ಬಾಡದ ಹೂವಿನಂತೆ

ಗೆಲ್ಲುವಾಗಿಯೇ ಇದ್ದಳು."[೯] ಇಲ್ಲೆಲ್ಲಾ ಗೊರೂರು ಚೆನ್ನಿಯ ಸಂಗೀತ ಸಾಧನೆ ಬಗೆಗೆ ಮಾತನಾಡುತ್ತಾರೆ.

ತ.ರಾ.ಸು ಕತೆಗೆ ಪೋಷಕವಾಗುವಂತೆ ಲಿಂಗಾಜೋಯಿಸರು, ಮುರುಗೇಂದ್ರಪ್ಪ, ಗೋಪಾಲಚಾರ್ಯರು, ಚಿನ್ನಪ್ಪ ಪುಟ್ಟತಾಯಮ್ಮ, ಗೋವಿದಯ್ಯ ಹೇಳುವ ಕಥೆಗಳನ್ನು ಬಳಸಿಕೊಂಡು ಅಂದು ಸಂಗೀತಕ್ಕಿದ್ದ ಮೌಲ್ಯಗಳನ್ನು ಸಂಗೀತ ಕೇಳುತ್ತಿದ್ದ, ಹಾಡುತ್ತಿದ್ದ ವ್ಯಕ್ತಿಗಳ ಶ್ರದ್ಧೆ ಸಂಪನ್ನಗಳೊಂದಿಗೆ ಪುಷ್ಟಿಕರಿಸುತ್ತಾ ಹೋಗುತ್ತಾರೆ. ವೆಂಕಟಸುಬ್ಬಯ್ಯನ ಹಾಡಿನ ಬಗೆಗೆ ಜನರಲ್ಲಿದ್ದ ಅಭಿಪ್ರಾಯಗಳನ್ನು ಇವರ ಮೂಲಕ ಹೇಳಿಸುವ ಕ್ರಿಯೆ ನಡೆಯುತ್ತದೆ. ಇಲ್ಲಿ ಲಿಂಗಾಜೋಯಿಸರು ಹೇಳುವ ಮಾತುಗಳನ್ನು ಗಮನಿಸಬಹುದು. "ನಮ್ಮ ಕಾಲಕ್ಕೆ ವೆಂಕಟಸುಬ್ಬಯ್ಯನವರು ಹಾಗೆ ಹಾಡುತ್ತಾ ಇದ್ದರು, ಹೀಗೆ ಹಾಡುತ್ತಾ ಇದ್ದರು ಅಂತ ಹೋಗೊಳೋದನ್ನು ಹಳೆ ತಲೆಗಳ ಬಾಯಲ್ಲಿ ಕೇಳುತ್ತಾ ಇದ್ದೆ ಅವರು ದೇವಿ ಉಪಾಸಕರಂತೆ. ಸರಸ್ವತಿಯೇ ಅವರ ನಾಲಿಗೆಯಲ್ಲಿ ಕೂತು ನುಡೀತಾ ಇದ್ದಳಂತೆ. ಅವರು ದೇವರ ಕೋಣೇಲಿ ಒಬ್ಬನೇ ಹಾಡುತ್ತಾಇದ್ದರೆ ತಾಯಿ ಕೂತು ಕೇಳ್ತಾ ಇದ್ದಳಂತೆ"[೧೦]

" ಈಗ ವೆಂಕಟಸುಬ್ಬಯ್ಯನವರನ್ನು ನೆನಸುವ ಜನಕ್ಕಿಂತ ಮರೆತ ಜನವೇ ಹೆಚ್ಚು; ಎಲ್ಲೋ ನೂರಕ್ಕೊಬ್ಬರೋ ಸಾವಿರಕ್ಕೊಬ್ಬರೊ ನೆನಸುತ್ತಾರೆ. ಆದರೆ ವೆಂಕಟಸುಬ್ಬಯ್ಯ ನವರಂಥ ಜನ ಹುಟ್ಟುವುದು ಎಷ್ಟು ಸಾವಿರ ವರ್ಷಕ್ಕೊಂದು ಬಾರಿಯೋ. ದೇಶದ ಪುಣ್ಯ ಫಲಿಸಿದಾಗ, ಅವತಾರಮಾಡುವ ಮಹಾತ್ಮರು ಅವರು. ಸಂಗೀತಗಾರರು ಈ ಕಾಲಕ್ಕೂ ಇದ್ದಾರೆ, ಆಗಲೂ ಇದ್ದರು. ಆದರೆ ಎಲ್ಲಿಗೆಲ್ಲಿಗೆ ಸಂಬಧ? ನೆಟ್ಟಗೆ ಸಾ–ಪಾ–ಸಾ ಹೇಳೋಕೆ ಬರದೋರೂ, ಮೂರು ಬೆಟ್ಟಂಚಿನ ಜರತಾರಿ ಶಲ್ಯ ಹೆಗಲ ಮೇಲೆ ಹಾಕಿಕೊಂಡು, ಆಸ್ಥಾನ ವಿದ್ವಾಂಸರೊಂತ ಮೆರಿತಾರೆ. ಹೊಲೆಯರ ಹಂದಿ ಹಾಗೆ ಕಿರಚೋ ಹಾರ್ಮೋನೀಮು ಕುಟ್ಟೋರೊ ಸಂಗೀತಗಾರರೇ... ಪಾಪ! ಅವರುತಾನೇ ಏನು ಮಾಡುತ್ತಾರೆ– ಹಾಡೋರಿದ್ರೂ ಕೇಳೋರಿಲ್ಲದ ಕಾಲ ಇದು. ಹೊಟ್ಟೆ ಪಾಡಿಗೆ ಹಾಡೋರಿಗೂ, ದೇವರನ್ನು ಕಾಣೋ ಯೋಗ ಅಂತ ಸಂಗೀತ ಕಲಿಯೋರಿಗೂ ಎಲ್ಲಿ ಹೋಲಿಕೆ..."[೧೧] ಹೀಗೆ ಮುರುಗೇಂದ್ರಪ್ಪನವರ ಬಾಯಲ್ಲಿ ವೆಂಕಟಸುಬ್ಬಯ್ಯನ ಸಂಗೀತ ಸಾಧನೆ ಶ್ರೇಷ್ಟತೆಯ ಬಗೆಗೆ ಹೇಳಿಸಿ ಸಂಗೀತದ ಗಂಧ

ಅರಿಯದವರು ತಾವು ಸಂಗೀತ ವಿದ್ವಾನರೆಂದು ಓಡಾಡುವವರ ಕುರಿತು ವ್ಯಂಗ್ಯ ಮಾಡುತ್ತಾರೆ. ಒಟ್ಟಿನಲ್ಲಿ ಈ ಇಬ್ಬರು ಲೇಖಕರದು ಜೀವನ ಮೌಲ್ಯಗಳ, ಸಂಗೀತ ಸಾಧನೆಗಳ ಅನ್ವೇಷಣೆಯಲ್ಲಿ ತೊಡುಗುತ್ತಾರೆ. ಎಂದೇ ಹೇಳಬಹುದು. ಕಥಾವಸ್ತು ನಿರ್ವಹಣಾ ವಿಧಾನ ಏಕ ಸೂತ್ರದಲ್ಲಿ ಚಲಿಸಿ ಸಂಕೀರ್ಣ ವ್ಯಾಪ್ತಿ ಪಡೆದು ಮುಕ್ತಾಯವಾಗುತ್ತದೆ. ಎಲ್ಲವೂ ಒಟ್ಟುಗೂಡಿ ಈ ಎರಡು ಕಾದಂಬರಿಗಳ ಯಶಸ್ವಿಗೆ ಕಾರಣವಾಗಿವೆ.

೫.೨ ಸನ್ನಿವೇಶ ನಿರ್ಮಾಣ:

ಒಂದು ಕೃತಿ ಕೇವಲ ಅನುಭವದ ಅಭಿವ್ಯೆಕ್ತಿಯಿಂದ ಆರಿಸಿಕೊಂಡ ವಸ್ತುವಿನಿಂದಷ್ಟೇ ಮಹತ್ವದ ದಾಗಲಾರದು. ಅನುಭವಕ್ಕೆ ವಸ್ತುವಿಗೆ ತಕ್ಕಂತೆ ಸನ್ನಿವೇಶ ನಿರ್ಮಾಣ ಬಹುಮುಖ್ಯವಾಗಿ ನಾಟಕ, ಕಾದಂಬರಿಗಳಲ್ಲಿ ಪ್ರಮುಖ ಸ್ಥಾನ ವಹಿಸುತ್ತದೆ. ಸನ್ನಿವೇಶ ನಿರ್ಮಾಣ ಕೃತಿಗೆ ಗಟ್ಟಿತನವನ್ನು ತಂದು ಕೊಡುತ್ತದೆ. ಕಥೆಗೆ ಪೂರಕವಾಗಿ ಸನ್ನಿವೇಶ ನಿರ್ಮಾಣಗೊಂಡಲ್ಲಿ ಮಾತ್ರ ಒಂದು ಕೃತಿ ಪರಿಪೂರ್ಣತೆಯನ್ನು ಹೊಂದಿ ಪಕ್ವವಾಗುವುದು ಕಾದಂಬರಿಗೆ ಬಂಧವನ್ನು ತಂದುಕೊಡುತ್ತದೆ. ಕೃತಿಗೆ ಅಗತ್ಯವಾದ ಸನ್ನಿವೇಶಗಳನ್ನು ಕಲ್ಪಿಸಿಕೊಂಡು, ಸನ್ನಿವೇಶಕ್ಕೆ ಕಾರಣವಾದ ವಿಶೇಷಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವಸ್ತುವನ್ನು ಬೆಳೆಸುತ್ತಾರೆ. ಸನ್ನಿವೇಶ ನಿರ್ಮಾಣದಲ್ಲಿ ವಸ್ತು, ಪಾತ್ರ, ಭಾಷೆ ಮತ್ತು ಅದಕ್ಕನುಗುಣವಾಗಿ ಬಳಸಿಕೊಂಡ ತಂತ್ರ ಪ್ರಮುಖ ಪಾತ್ರವಹಿಸುತ್ತವೆ. ಪ್ರತಿಯೊಂದು ಸನ್ನಿವೇಶದಲ್ಲೂ ಓದುಗಗನ ಆಕರ್ಷಿಸೋ ನಿರ್ಮಾಣ ಪ್ರಗೋಗಶೀಲತೆಯನ್ನು ಕಾಣಬಹುದು ಹಲವಾರು ವಿಷಯಗಳನ್ನು ಹೊತ್ತ ಕಾದಂಬರಿಗೆ ಕಾಲೈಕ್ಯತೆ ಮತ್ತು ಸ್ಥಳೈಕ್ಯತೆ ಸಾಲದೆ ಕತೆಯ ನಡಿಗೆಗೆ ಪೂರಕವಾಗಿ ಸನ್ನಿವೇಶ ನಿರ್ಮಾಣ ಕಾರ್ಯ ನಿರ್ವಹಿಸುತ್ತದೆ.

ಹೇಮಾವತಿ ಮತ್ತು ಹಂಸಗೀತೆ ಕಾದಂಬರಿಗಳಲ್ಲಿ ವಸ್ತುವಿಗೆ ತಕ್ಕ ಸನ್ನಿವೇಶ ನಿರ್ಮಾಣಗಳ ಕಾಣಬಹುದು ಎಲ್ಲಿಯೂ ಜಾಳು ಜಾಳಾದ ಸನ್ನಿವೇಶಗಳು ಕಂಡುಬರುವುದಿಲ್ಲ, ಓದುಗನ ಕಣ್ಣಿಗೆ ಕಟ್ಟುವಂತೆ ಸನ್ನಿವೇಶಗಳನ್ನು ಹೆಣೆಯಲಾಗಿದೆ. ಸಹಜತೆಯೊಂದಿಗೆ ಓದುಗನ ಸ್ಮೃತಿಪಟಲದ ಮೇಲೆ ಉಳಿವಂತೆ ಸನ್ನಿವೇಶಗಳು ಚಿತ್ರಣಗೊಂಡಿವೆ. ಹೇಮಾವತಿಯಲ್ಲಿ ವಾಸ್ತವಿಕ ಸನ್ನಿವೇಶಗಳನ್ನು ಪ್ರಾಸಂಗಿಕವಾಗಿ ಹೆಣಯಲಾಗಿದೆ. ಹಂಸಗೀತೆಯಲ್ಲಿ ಬಾವುಕತೆ,

ಆದರ್ಶಮಯ ಸನ್ನಿವೇಶ ಚಿತ್ರಣ ಹೆಚ್ಚಾಗಿ ಕಂಡುಬರುತ್ತದೆ. ಹೇಮಾವತಿಯಲ್ಲಿ ನಮ್ಮದೇ ಸಾಚಾ ಸಂಗತಿಗಳೆಂದೆನಿಸುವ ಸನ್ನಿವೇಶ ಸೃಷ್ಟಿಸಿದರೆ, ಹಂಸಗೀತೆಯಲ್ಲಿ ತ.ರಾ.ಸು ಕಟ್ಟುಕತೆ ಮಾದರಿಯ ನಮ್ಮದಲ್ಲದ ಅನುಭವಗಳ ಸನ್ನಿವೇಶಗಳನ್ನು ಸೃಷ್ಟಿಸುತ್ತಾರೆ. ಹೇಮಾವತಿ ಒಂದು ಪ್ರಾದೇಶಿಕ ಹಿನ್ನೆಲೆಯಲ್ಲಿ ವ್ಯವಸ್ಥೆಯ ಸುತ್ತ ಹಾಗೂ ಕೌಟುಂಬಿಕ ಆವರಣದೊಳಗೆ ನಿರ್ಮಿತಗೊಂಡ ಸನ್ನಿವೇಶ ಚಿತ್ರಣಗೊಂಡಿದೆ. ಹಂಸಗೀತೆಯಲ್ಲಿ ಏಕ ವ್ಯಕ್ತಿ ಕೇಂದ್ರಿ ಕರಿಸಿಕೊಂಡಂತೆ ಅವನ ಸುತ್ತಲೂ ಹೆಣಯಲಾದ ಸನ್ನಿವೇಶಗಳೇ ಹೆಚ್ಚು ನಿರುಪಿತವಾಗಿದೆ. ಎರಡು ಕಾದಬರಿಗಳು ಲೇಖಕರ ಚಿಂತನೆ ಮನಸ್ಥಿತಿಗೆ ತಕ್ಕಂತ ವಸ್ತುವಿಗೆ ಅನುಗುಣವಾಗಿ ಸನ್ನಿವೇಶಗಳ ನಿರ್ಮಾಣಕಾರ್ಯ ನಡೆದಿದೆ.

ಹೇಮಾವತಿಯಲ್ಲಿ ಪಾತ್ರಗಳೇ ಸನ್ನಿವೇಶಗಳ ಸೃಷ್ಟಿಸುತ್ತವೆ, ಆದರೆ ಹಂಸಗೀತೆಯಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಪಾತ್ರ ಸೃಷ್ಟಿಯಾಗಿವೆ. ಹೇಮಾವತಿ ಸಾಮಾಜಿಕ ಕಾದಂಬರಿಯಾದ್ದರಿಂದ ಸರಳತೆಯಲ್ಲಿ ತೆರದು ಕೊಂಡು ಸಾರ್ವಕಾಲಿಕವಾಗಿ ನಿಲ್ಲುತ್ತದೆ. ಹಂಸಗೀತೆ ಐತಿಹಾಸಿಕ ರೂಪವುಳ್ಳ ಕಾದಂಬರಿಯಾದ್ದರಿಂದ ಅತಿರೋಚಕತೆ ಕಂಡುಬರುತ್ತದೆ. ಹೇಮಾವತಿ ಓದುಗನನ್ನು ಚಿಂತನೆಗೆ ಒಳಗು ಮಾಡೋ ಸನ್ನಿವೇಶಗಳೇ ಹೆಚ್ಚು ಕಂಡು ಬಂದರೆ, ಓದುಗರ ಮನ ಬೆರಗುಗೊಳಿಸುವಂತಹ ಸನ್ನಿವೇಶಗಳನ್ನ ಹಂಸಗೀತೆಯಲ್ಲಿ ತ.ರಾ.ಸು ಸೃಷ್ಟಿಸುತ್ತಾರೆ. ತ.ರಾ.ಸು ನಾಲ್ಕೈದು ಸನ್ನಿವೇಶಗಳನ್ನು ಮಹತ್ವದ್ದಾಗಿ ಸೃಷ್ಟಿಸಿದರೆ ಗೊರೂರು ಹಲವು ಸನ್ನಿವೇಶಗಳನ್ನು ಕಾದಂಬರಿಯೊಳಗೆ ನಿರ್ಮಿಸುತ್ತಾರೆ.

ಗೊರೂರು ಹೇಮಾವತಿ ಕಾದಂಬರಿಯಲ್ಲಿ ಸಾಮಾಜಿಕ ಸ್ಥಿತಿಗಳಿಗೆ ಹೊಂದಿಕೊಳ್ಳೊ ಕುಟುಂಬ ಮತ್ತು ಗ್ರಾಮದ ವ್ಯವಸ್ಥೆಯೊಳಗಡೆ ನಡೆಯೋ ಘಟನೆಗಳನ್ನಾಧರಿಸಿದ ಸನ್ನಿವೇಶಗಳ ನಿರ್ಮಾಣ ಕಾರ್ಯ ನಡೆಸಿದ್ದಾರೆ. ಕಾದಂಬರಿ ಪ್ರಾರಂಭದಲ್ಲಿಯೇ ಶ್ರೀನಿವಾಸ ಪೆರುಮಾಳರು ಮತ್ತು ಸಹಕಾರ್ ಶಠಾರಿಯವರ ನಡುವೆ ಉತ್ತಮ ಸನ್ನಿವೇಶ ನಿರ್ಮಿಸುತ್ತಾರೆ. ಊರ ತೋಟವೆಲ್ಲ ತನ್ನದಾಗಬೇಕೆಂಬ ಶಠಾರಿಯ ಅತಿ ಆಸೆಗೆ ಶ್ರೀನಿವಾಸ ಪೆರುಮಾಳರು ತಮ್ಮ ತೋಟ ಕೊಡಲು ನಿರಾಕರಿಸಿದಾಗ ಈ ಸಂಧರ್ಭದಲ್ಲಿ ಶಠಾರಿ ಕ್ರೌರ್ಯ, ದರ್ಪ, ಅಟ್ಟಹಾಸಗಳ ಜೊತೆಗೆ ಕೊನೆಯಲ್ಲಿ ಅವರ ಅಸಹಾಕತೆಯ ಚಿತ್ರಣವು ಆಗಿದೆ.

ಸ್ವಾಮಿ ಸಾಹುಕಾರರೇ ಈಗ ಘಳಿಗೆಯಲ್ಲಿ ನನ್ನ ವಿದ್ಯಕ್ಕೆ ತಿಂಗಳಿಗೆ ಸಾವಿರ ರೂಪಾಯಿ ಮರ್ಯಾದೆ ಬರುವುದೆಂದು ಹೇಳಿದಿರಿ, ಈಗ ನನ್ನ ವಿದ್ಯೆಗೆ ಮೂರು ಕಾಸೂ ಬೆಲೆಯಿಲ್ಲವೆನುತ್ತೀರಿ. ನನಗೆ ಸಹಾಯ ಮಾಡುವವರು ಈ ಊರಿನಲ್ಲಿ ಯಾರೂ ಇಲ್ಲವೆನ್ನುತ್ತೀರಿ. ಹಾಗಾದರೆ ಪರೀಕ್ಷೆಮಾಡಿ ನೋಡೋಣವೆ." ಎಂದರು. ಸಾಹುಕಾರರು "ಪರೀಕ್ಷೆ ಮಾಡುವುದೇನನ್ನು ನಿಮ್ಮ ತಲೆ? ಆಗಲಿ, ನಾಡದ್ದು ನಿಮ್ಮ ಮನೆಯ ಮುಂದೆ ನಿಮ್ಮ ಹಾಡುಗಾರಿಕೆ ಇದೆ ಎನ್ನಿ. ನನ್ನ ಮನೆಯ ಮುಂದೆ ನಾನು ಬಂದವರಿಗೆಲ್ಲ ಒಂದು ರೂಪಾಯಿ ಕೊಡುತ್ತೇನೆ ಎನ್ನುತ್ತೇನೆ, ನೋಡೋಣ. ಜನ ಯಾರ ಮನೆಯ ಮುಂದೆ ಹೆಚ್ಚಾಗಿ ಸೇರುತ್ತದೆ? ಆಗಲ್ಲಾದರು ನಿಮಗೆ ಗೊತ್ತಾಗಲಿ ನನ್ನಲ್ಲಿ ಜನಾನುರಾಗ ಹೇಗಿದೆ ಎಂದು."[೧೨] ಇಲ್ಲಿ ಸಾಹುಕಾರ ಶಠಾರಿ ಮತ್ತು ಶ್ರೀನಿವಾಸ ಪೆರುಮಾಳರ ನಡುವೆ ಹಣ ಮತ್ತು ವಿದ್ಯೆ ಎರಡರಲ್ಲಿ ಯಾವುದು ಮೇಲು ಎಂಬ ಚರ್ಚೆ ನಡಯುತ್ತದೆ. ಹಣವಿದ್ದರೆ ಜನ ಬರುತ್ತಾರೆ ಎಂಬ ನಿಲುವು ಶಠಾರಿಯದು ಹಣ ಶಾಶ್ವತವಲ್ಲ ವಿದ್ಯೆಯೇ ಶಾಶ್ವತ ಶ್ರೇಷ್ಠ ಕೂಡ ಎಂಬುದು ಪೆರುಮಾಳರದು ಜನರು ಕೂಡ ಒಂದು ರೂಪಾಯಿ ಹಣಕ್ಕಾಗಿ ಶಠಾರಿಯವರ ಮನೆಗೆ ಹೋದಾಗ ಅಷ್ಟು ಜನಗಳಿಗೆ ಹಂಚಲು ಶಠಾರಿಯರಲ್ಲಿ ಹಣವಿರಲ್ಲಿಲ್ಲ ಆದರೆ ಶ್ರೀನಿವಾಸ ಪೆರುಮಾಳರಲ್ಲಿ ಆ ಜನಗಳಿಗೆ ಅಲ್ಲದೆ ಇನ್ನೂ ಮಿಗಿಲಾದ ಜನಕ್ಕೆ ಹಂಚಿ ಸಂತೋಷ ನೀಡಬಹುದಾದ ಸಂಗೀತ ವಿದ್ಯಾ ಸಂಪತ್ತು ಇತ್ತು. ಇಲ್ಲಿ ಹಣ ವಿದ್ಯೆಯೆರಡನ್ನು ತುಲನೆ ಮಾಡಿ ನೋಡಲಾಗಿದೆ. ಗೊರುರು, ತ.ರಾ.ಸು ರವರ ಹಂಸಗೀತೆಯಲ್ಲಿಯಂತೆ ಸಂಗೀತ ಮೌಲ್ಯ ಕುರಿತ ಚರ್ಚೆಯನ್ನು ಈ ಸನ್ನಿವೇಶದಲ್ಲಿ ಅನಾವರಣಗೊಳಿಸುತ್ತಾರೆ. ಸಂಗೀತಕ್ಕೆ ಇರಬಹುದಾದ ಶಕ್ತಿಯನ್ನು ವಿವರಿಸುತ್ತಾರೆ. ಸಂಗೀತವೇ ಗೆಲ್ಲುವ ಸನ್ನಿವೇಶ ಇಲ್ಲಿ ಸಂಗೀತ ವಿದ್ಯೆಗೆ ವಿಶೇಷ ಮನ್ನಣೆ ಮಣೆಹಾಕಲಾಗಿದೆ.

ಮುಂದೆ ಮುಕ್ಕಾಲು ಭಾಗ ಕಾದಂಬರಿ ಸಂಗಿತ ಕುರಿತಾದ ವಿಷಯ ಪ್ರಸ್ತಾಪದ ಸನ್ನಿವೇಶದಲ್ಲಿ ಗೌಣವಾಗಿ ರಾಮಣ್ಣ ಪೆರುಮಾಳ ಮತ್ತು ಶಠಾರಿಯವರ ಕೌಟುಂಬಿಕ ಆವರಣದ ಸನ್ನಿವೇಶದತ್ತ ಸಂಚರಿಸುತ್ತದೆ. ಇಲ್ಲೆಲ್ಲಾ ಎರಡು ಕುಟುಂಬದೊಳಗಿನ ಸಾಮರಸ್ಯ ವೈಶಮ್ಯ ರಾಮಣ್ಣಪೆರುಮಾಳ ಕುಟುಂಬದೊಳಗಿನ ಎರಡನೇ ಮಡದಿ ರಂಗನಾಯಕಿ

ಹೇಮಾವತಿಯಲ್ಲಿ ತೋರುವ ಮಲತಾಯಿ ದೋರಣೆ ರಂಗನಾಯಕಿ ಅಕ್ಕ ಈಳಿಗೆ ಮಣೆ ವರ್ತನೆಗಳ ಸನ್ನಿವೇಶ ಶಠಾರಿ ಕುಟುಂಬದ ಸಣ್ಣತನಗಳು ಮದುವೆಯಾಗಿ ಬಂದ ಸೊಸೆ ಹೇಮಾವತಿಯಲ್ಲಿ ತೋರುವ ದುರ್ನಡತೆಗಳ, ಶೋಷಣೆಗಳ ಸನ್ನಿವೇಶ ಪೋಲಿ ಸುಂದರನ ಗಂಡನಾಗಿ ಪಡೆದು ಹೇಮಾವತಿ ಸಂಸಾರದಲ್ಲಿ ಅನುಭವಿಸಿದ ನೋವಿನ ಸನ್ನಿವೇಶಗಳ ಚಿತ್ರಣ ಓದುಗನ ಮನಕರಗುವಂತೆ ಚಿತ್ರಿಸಲಾಗಿದೆ. ಶಠಾರಿಯವರ ಬಾಯಿಯಿಂದ ನಾಗರೀಕತೆಯ ವಿಕೋಪಗಳ ತಿಳಿಸುವ, ಸುಂದರ ನಗರ ಉದ್ಯಮದಲ್ಲಿ ತೋಡಗುವುದು ನಂತರ ಆಧುನಿಕ ಯಂತ್ರ ಸಲಕರಣೆಗಳೊಂದಿಗೆ ಕೃಷಿಗೆ ತೊಡಗಿ ನಷ್ಟ ಅನುಭವಿಸೋ ಸನ್ನಿವೇಶಗಳಲ್ಲಿ ಆಧುನಿಕತೆ ವಿಕೃತಿಗಳನ್ನು ಸಹಜವಾಗಿ ಬಿಡಿಸಿಡಲಾಗಿದೆ.

ಮುಂದೊಂದು ಸನ್ನಿವೇಶ ತ.ರಾ.ಸು ಹಂಸಗೀತೆಯಲ್ಲಿನ ಸಂಗೀತ ಮೌಲ್ಯ ಕುರಿತ ವಿಷಯವಸ್ತುವಿಗೆ ಗೊರೂರು ಹೇಮಾವತಿಯಲ್ಲೂ ಸಮಾನವಾಗಿ ನಿಲ್ಲುವುದು, ದಲಿತ ಹೆಣ್ಣು ಚೆನ್ನಿ ಅಭಿನವ ಶಾರದೆಯಾಗಿ ರೂಪುಗೊಂಡು ರಂಗ ಮಂದಿರಗಳಲ್ಲಿ ಪ್ರದರ್ಶನ ನೀಡುವ ಸನ್ನಿವೇಶಗಳು ಇಲ್ಲಿ ಗೊರೂರು ತ.ರಾ.ಸುರಂತೆ ಹಳೆಯ ಮೌಲ್ಯದೊಂದಿಗೆ ಕಲೆಯನ್ನು ಪ್ರತಿಪಾದಿಸುವುದಿಲ್ಲ, ಆಧುನಿಕ ಜಗತ್ತಿಗೆ ಒಡ್ಡಿದ ಹೊಸ ಚಿಂತನೆಯಲ್ಲಿ ಸಂಗೀತ ಕಲೆಯ ಮೌಲ್ಯವನ್ನು ಪ್ರತಿನಿಧಿಸುತ್ತಾರೆ. ವಿದ್ಯೆಯಲ್ಲಿ ಜಾತಿಯನ್ನು ಮೀರಿ ಬೆಳೆದ ಪ್ರಗತಿಪರ ಕ್ರಿಯೆ ಇಲ್ಲಿ ಕಾಣಸಿಗುತ್ತದೆ. ಸುಬ್ಬಾಭಟ್ಟರು ಶಠಾರಿಯವರೊಂದಿಗೆ ಹೇಮಾವತಿ ಮದುವೆ ಪ್ರಸ್ತಾಪ ಮುಗಿಸಿ ಹೊರಟಾಗ "ಅಂದು ಬೆಂಗಳೂರಿಗೆ ಅಭಿನವ ಶಾರದೆ ಎಂಬ ಸಂಗೀತಗಾರಳು ಬಂದು ನಗರ ಭವನದಲ್ಲಿ ಹಾಡುತ್ತಾಳೆಂದು ಗೊತ್ತಿದ್ದುದ್ದರಿಂದ ಸುಂದರನು ಭಟ್ಟರನ್ನು ಆ ಸಂಗೀತವನ್ನು ಕೇಳಿಕೊಂಡು ಹೋಗಿ ಎಂದು ನಿಲ್ಲಿಸಿದನು. ಅಭಿನವ ಶಾರದೆ ಹೆಸರು ಎಲ್ಲೆಲ್ಲಿಯೂ ಪ್ರಸಿದ್ಧವಾಗಿತ್ತು. ಗ್ರಾಮಫೋನುಗಳಲ್ಲಿ ಆಕೆಯ ಗಾನ ತಟ್ಟೆಗಳು ಲಕ್ಷಸಂಖ್ಯೆಯಲ್ಲಿ ಖರ್ಚಾಗಿದ್ದವು . ಆಕೆ ಆಗಾಗ್ಗೆ ರೇಡಿಯೋದಲ್ಲಿಯೂ ಹಾಡುತ್ತಿದ್ದಳು. ಆ ದಿವಸ ಎಲ್ಲಿ ನೋಡಲಿ, ರೇಡಿಯೋ ಸುತ್ತ ಜನಗಳ ಗುಂಪು ಅದರಲ್ಲಿಯೂ ವಿದ್ಯಾರ್ಥಿಗಳು ಯುವಕರು ಅಭಿನವ ಶಾರದೆ ಎಂದರೆ ಸಂಭ್ರಮದಿಂದ ಪುಲಕಿತರಾಗಿರುತ್ತಿದ್ದರು"[೧೩]

“ನಾನು ಹಳೆಯ ಚೆನ್ನೆ ಆಗಿರಲೇ ಇಲ್ಲ. ನನ್ನ ಸಾಮಾನ್ಯ ಅಭ್ಯಾಸಗಳು ಗುರುಜಿಗೆ ತೃಪ್ತಿಯುಂಟುಮಾಡಿದವು. ಅವರು ಸಂತೋಷವುಳ್ಳದವರಾದಾಗ ‘ನಿನ್ನಲ್ಲಿದ ನಿಜವಾದ ವ್ಯಕ್ತಿತ್ವ ಇದು’ ಎಂದು ನನ್ನ ಕಡೆ ಕೈ ತೋರಿಸುತ್ತಿದ್ದರು. ಇಂಗ್ಲೀಷ್ ಕನ್ನಡ ತಮಿಳು ಹಿಂದಿ ಉಪಾದ್ಯಯರನ್ನು ಹೊರತು ಉಳಿದವರೆನ್ನೆಲ್ಲಾ ತೆಗದು ಹಾಕಿದರು. ಆದರೆ ಸಂಗೀತದಲ್ಲಿ ಮಾತ್ರ ನನ್ನನ್ನು ಅರೆಯುವುದು ಇನ್ನೂ ತಪ್ಪಿರಲಿಲ್ಲ. ಹೀಗೆ ಹತ್ತು ವರ್ಷಕಾಲ ಗುರುಜಿ ತಮ್ಮ ಆಯಸ್ಸನ್ನೇ ನನ್ನ ಸಂಗೀತಕ್ಕಾ ಧಾರೆಯೆರೆದರು.ನನಗೆ ಮಧ್ಯೆ ಮಧ್ಯೆ ‘ಸಾಕು ನಾನು ಎಲ್ಲದರಲ್ಲಿಯೂ ಪೂರ್ಣವಾಗಿ ತಯಾರಾದೆ’ ಎಂಬ ಭಾವ ಉಕ್ಕಿ ಬರುತ್ತಿದ್ದಿತು. ಆದರೆ ಇದ್ದಕ್ಕಿದ್ದಂತೆ ಗುರುಜಿ ಒಂದು ಹೊಸ ಬಗೆಯಲ್ಲಿ ಹಾಡುತ್ತಿದ್ದರು. ಅದು ಹೊಸದಾಗಿದ್ದುದರಿಂದ ನಾನು ಏನೂ ಅರಿಯದದವಳಂತೆ ಕಣ್ಣು ಬಿಡುತ್ತಿದ್ದೆ. ಗುರುಜಿ ಅದನ್ನು ಹಾಡುತ್ತಿದ್ದದು ‘ ನಿನಗೆ ಇನ್ನೂ ಪಾಠವಾಗಬೇಕು’ ಎಂದು ಸೂಚಿಸುವುದಕ್ಕೆ.”[೧೪]

ಇಲ್ಲಿನ ಸನ್ನಿವೇಶಗಳಲ್ಲಿ ಸಂಗೀತ ಮೌಲ್ಯ ಶ್ರೇಷ್ಠತೆ ಹಾಗೆಯೇ ತ.ರಾ.ಸು ರಂತೆ ವೆಂಕಟಸುಬ್ಬಯ್ಯನಲ್ಲಿನ ಸಂಗೀತ ಸಾಧನೆಯಲ್ಲಿ ಎದುರಾದ ತೊಡರುಗಳನ್ನು ಇಲ್ಲಿ ಕಾಣಬಹುದು ಅಲ್ಲಿಯ ವೆಂಕಟಸುಬ್ಬಯ್ಯ ನಡುವಿನ ಗುರುಶಿಷ್ಯ ಸಂಬಂಧಗಳನ್ನು ಇಲ್ಲಿ ಚೆನ್ನಿ ಆನಂದರ ಸಂಬಧದಲ್ಲಿ ಕಾಣಬಹುದು. ಅಪೂರ್ಣನಾದ ವೆಂಕಟಸುಬ್ಬಯ್ಯನನ್ನು ಪೂರ್ಣಸಾಧಕನಾಗಿ ಸಾಧನೆಯತ್ತ ಕೊಂಡೊಯ್ಯಲು ಬುವಾ ಪಟ್ಟ ಶ್ರಮವನ್ನು ಇಲ್ಲಿ ಆನಂದನಲ್ಲಿ ಕಾಣಬಹುದು. ಭೈರವಿ ವೆಂಕಟಸುಬ್ಬಯ್ಯನಾದ ಹಾಗೆ ಚೆನ್ನಿ ಅಭಿನವ ಶಾರದೆಯಾಗುವಲ್ಲಿ ಆನಂದ ಜೀವಮಾನ ಪೂರ್ತಿ ಶ್ರಮಿಸುತ್ತಾನೆ. ವೆಂಕಟಸುಬ್ಬಯ್ಯನಂತೆ ಚೆನ್ನಿಯು ಕೂಡ ಗುರುವಿನಲ್ಲಿ ನಮ್ರಳಾಗಿರುತ್ತಾಳೆ. ಕಡೆತನಕ ಗುರುವಿನ ಮಾರ್ಗದರ್ಶನದಲ್ಲಿಯೇ ನಡೆಯುತ್ತಾಳೆ.

ಹಂಸಗೀತೆ ಕತೆಯ ಓಟಕ್ಕೆ ಮತ್ತು ಕಥಾನಾಯಕ ವೆಂಣಕಟಸುಬ್ಬಯ್ಯ ಪಾತ್ರಕ್ಕೆ ಪೋಷಕವಾಗಿ ವೀರಣ್ಣಜ್ಜನ ಕಥಾ ಸನ್ನಿವೇಶ ಬರುತ್ತದೆ. ದೈವವನ್ನು ಸಾಕ್ಷತ್ಕರಿಸಿಕೊಂಡು ನಿರ್ಮಾಣಗೊಂಡಿದೆ. ವೀರಣ್ಣಜ್ಜ ಪಾಳೆಯಗಾರರಲ್ಲಿ ತಪ್ಪಿನಡೆದ ತಪ್ಪಿಗೆ ತಲೆಯನ್ನು ಬಲಿಕೊಡುವ ಸನ್ನಿವೇಶ ನಾಟಕೀಯ ಸ್ವರೂಪ ಪಡೆದುಕೊಳ್ಳುತ್ತದೆ. ದೈವತ್ವದ ಶ್ರೇಷ್ಠತೆ

ಮೌಲ್ಯತ್ವದ ನೆಲೆಯೊಳಗೆ ಪ್ರಾಮಾಣಿಕತೆಯನ್ನು ಸಾಕ್ಷಾತ್ಕರಿಸುತ್ತದೆ. ಇಲ್ಲಿ ಸಾಂಪ್ರದಾಯಿಕ ಮೌಲ್ಯಗಳನ್ನು ನಾಟಕೀಯ ದೃಶ್ಯಗಳನ್ನು ಸತ್ಯವೇ ಜೀವನ ಎಂದು ನಂಬಿದ ವೀರಣ್ಣಜ್ಜನ ಕಥನ ಸನ್ನಿವೇಶ ಭಾವುಕ ಪೂರ್ಣವಾಗಿದೆ. ವೆಂಕಟಸುಬ್ಬಯ್ಯ ಮತ್ತು ಗುರು ತಿರುಮಲಯ್ಯ ಇಬ್ಬರ ನಡುವಿನ ಸಂಗೀತ ಸ್ಪರ್ಧೆ ಸನ್ನಿವೇಶದಲ್ಲಿ ತ.ರಾ.ಸು ಕಲಾತ್ಮಕವಾಗಿ ಸನ್ನಿವೇಶ ಸೃಷ್ಟಿಸುತ್ತಾರೆ. ಈ ಸ್ಪರ್ಧೆ ಇಬ್ಬರ ನಡುವಿನ ಪ್ರತಿಷ್ಠೆ ಸ್ಪರ್ಧೆಯಾಗಿತ್ತು. ಗುರು ತಿರುಮಲಯ್ಯರಿಗೆ ಮಾತ್ರ ವ್ಯಕ್ತಿತ್ವ ಶ್ರೇಷ್ಠತೆ ಪ್ರಶ್ನೆ ಬಹುಮುಖ್ಯವಾಗಿ ಈ ಸನ್ನಿವೇಶ ಸೂಚಿತವಾಗಿದೆ. ಗರ್ವಿ ತಿರುಮಲಯ್ಯ ತನ್ನ ಶಿಷ್ಯನಿಂದಲೇ ಸೋಲನ್ನನುಭವಿಸಿದಾಗ, ತನಗರಿವಿಲ್ಲದೆ ಪವಾಡದಂತೆ ಹಾಡುವ ವೆಂಕಟಸುಬ್ಬಯ್ಯ ಇದೊಂದು ಕಲ್ಪನಾ ಜಗತ್ತನ್ನೆ ಸೃಷ್ಟಿಸುತ್ತದೆ. ಸೋಲಿನ ಅವಮಾನಕ್ಕೆ ಆತ್ಮಹತ್ಯೆ ಮಾಡಿಕೊಳ್ಳುವ ತಿರುಮಲ್ಲಯ್ಯನ ಆ ಸಾವಿನ ಸನ್ನಿವೇಶ ಹೃದಯ ಕರುಗುವಂತೆ ನಿರ್ಮಾಣಗೊಂಡಿದೆ. ಇದೇ ರೀತಿಯ ವೆಂಕಟಸುಬ್ಬಯ್ಯನ ಅಹಂ ಇಳಿಸಲು ಅವನ ವ್ಯಕ್ತಿತ್ವ ರೂಪಿಸಲು ತ.ರಾ.ಸು ಕಾದಂಬರಿಯಲ್ಲಿ ಸ್ವಾಮಿಯ ಶಿಷ್ಯನೊಂದಿಗೆ ಮೃದಂಗಕ್ಕೆ ಶೃತಿಗೂಡಿಸಲಾಗದೆ ಸೋಲುತ್ತಾರೆ. ಇಲ್ಲಿಯು ಸ್ವಾಮಿಗಳ ಶಿಷ್ಯನಲ್ಲಿ ಅಗೋಚರ ಶಕ್ತಿ ಕೆಲಸ ಮಾಡುತ್ತದೆ. ತಿರುಮಲ್ಲಯ್ಯನಂತೆ ವೆಂಕಟಸುಬ್ಬಯ್ಯ ಆತ್ಮಹತ್ಯೆಗೆ ಪ್ರಯತ್ನಿಸುತ್ತಾನೆ. ಇಲ್ಲೆಲ್ಲಾ ತ.ರಾ.ಸು ಅತಿಯಾದ ಮೌಲ್ಯ ಪ್ರತಿಪಾದನೆಯಲ್ಲಿ ಭಾವುಕತೆಗೆ ಹೆಚ್ಚು ಎಡೆ ಮಾಡಿಕೊಟ್ಟಂತೆ ಕಾಣುತ್ತದೆ. ಸಂಪೂರ್ಣ ಈ ಸನ್ನಿವೇಶಗಳಲ್ಲಿ ವಿಸ್ಮಯತೆ ಎದ್ದು ಕಾಣುತ್ತದೆ.

ಮುಂದೆ ಶಿಷ್ಯನೊಂದಿಗಿನ ಸೋಲಿನಿಂದ ತಿರುಮಲ್ಲಯ್ಯ ಆತ್ಮಹತ್ಯೆ ಮಾಡಿಕೊಂಡಾಗಿನಿಂದ ವೆಂಕಟಸುಬ್ಬಯ್ಯ ಸಂಗೀತ ಕಲಿಕೆಗೆ ಗುರುವಿಲ್ಲದಂತಾದಾಗ ವೆಂಕಟಸುಬ್ಬಯ್ಯ ಪಾಲಿಗೆ ದೊರಕುವವನು ಬೈರಾಗಿ ವಿಲಕ್ಷಣ ಗುಣಗಳ ಸದಾನಂದ ಬುವಾ ಇವನ್ನೊಂದಿಗಿನ ಸನ್ನಿವೇಶದಲ್ಲಿ ವೆಂಕಟಸುಬ್ಬಯ್ಯ ಬುವಾಗೆ ಶಿಷ್ಯನಾಗಲು ಪಡಬಾರದ ನೋವು ಕಷ್ಟಗಳನ್ನೆಲ್ಲ ಸಹಿಸಿಕೊಂಡು ಬುವಾನ ಪ್ರೀತಿಗಳಿಸಿಕೊಳ್ಳುತ್ತಾನೆ. ಇವರಿಬ್ಬರಿನ ಸನ್ನಿವೇಶ ಆತ್ಮೀಯವಾಗಿ ಪರಿಣಮಿಸಿ ಸಾಧನೆಗೆ ಪೋಷಕವಾಗುವಲ್ಲಿ ತಿರುವು ಪಡೆದುಕೊಳ್ಳುತ್ತದೆ. ನಂತರದಲ್ಲಿ ಚಂದ್ರಸಾನಿ ವೆಂಕಟಸುಬ್ಬಯ್ಯನ ಸಂಬಂಧಕೊಡುವ ಸನ್ನಿವೇಶ

ಇಡೀ ಕಾದಂಬರಿಯಲ್ಲಿ ರಮ್ಯವಾಗಿದೆ. ಈ ಸಂದರ್ಭದ ಸನ್ನಿವೇಶದಲ್ಲಿ ವೆಂಕಟಸುಬ್ಬಯ್ಯನ ಪ್ರೇಮ ಕಾಮದ ಪರಕಾಷ್ಟತೆಗೆ ಇಲ್ಲಿ ಕಾವ್ಯಾತ್ಮಕವಾಗಿ ಸನ್ನಿವೇಶ ನಿರ್ಮಾಣ ಮಾಡುತ್ತಾರೆ ಸ್ವಾಮಿಗಳ ಶಿಷ್ಯನಿಂದ ಪರಾಭವ ಹೊದಿ ಕಣ್ಣು ತೆರೆದು ರಾಗ ಸಾಧಿಸಲು ಹೊರಟ ವೆಂಕಸುಬ್ಬಯ್ಯ ಯಾವುದಾದರೂ ರಾಗ ಒಲಿಸಿಕೊಳ್ಳಲೇ ಬೇಕೆಂದು ಶಪಥಮಾಡಿ ಭೈರವಿ ರಾಗಧ್ಯಾನಕ್ಕೆ ಊರ ಹೊರಗಿನ ಕೇಶವ ದೇವಸ್ಥಾನಕ್ಕೆ ಹೋಗಿ ಮುಂಜಾನೆ ರಾಗಭ್ಯಾಸ್ಯಕ್ಕೆ ತೊಡಗಿದಾಗ ಯಾರೋ ಹೆಂಗಸರು ಕಾಲು ಜಾರಿ ಬಿದ್ದಾಗ ಅವಳನ್ನು ಎತ್ತಿ ಬದುಕಿಸುತ್ತಾನೆ ಅವಳೆ ಚಂದ್ರಾಸಾನಿ ಅವಳ ಸೌಂದರ್ಯಕ್ಕೆ ಮನಸೋತು ಪ್ರೇಮ ಮೋಹಗಳು ಒಡಮೂಡಿ ವೆಂಕಟಸುಬ್ಬಯ್ಯ ಅವಳಲ್ಲಿ ಅನುರಕ್ತನಾಗೋದು ಇದೊಂದು ರಮ್ಯ ಸನ್ನಿವೇಶವನ್ನು ತ.ರಾ.ಸು ಕಟ್ಟಿಕೊಡುತ್ತಾರೆ. ಅವಳಿಗಾಗಿ ರಾಗ ಒತ್ತೆ ಇಟ್ಟು ಅವಳನ್ನೆ ಹಪಹಪಿಸುವ ವೆಂಕಟಸುಬಯ್ಯ ಚಂದ್ರಸಾನಿಯಲ್ಲೂ ವೆಂಕಟಸುಬ್ಬಯ್ಯನ ಬಗೆಗೆ ಒಲವು ಮೂಡಿ ಅವರಿಬ್ಬರ ದಾಂಪತ್ಯ ಸರಸ ಸಂಭ್ರಮ ರಸಪೂರ್ಣವಾಗಿ ಕಟ್ಟಿಕೊಡುತ್ತಾರೆ. ವೆಂಕಟಸುಬ್ಬಯ್ಯನ ಸಾಧನೆಗೆ ತಾನು ಅಡ್ಡಿಯಾಗುತ್ತಿದ್ದೇನೆಂದು ಅನಂತಯ್ಯನಿಂದ ತಿಳಿದಾಗ ತನ್ನ ಪ್ರಿಯನ ಶ್ರೇಯಸ್ಸಿಗಾಗಿ ಚಂದ್ರಸಾನಿ ವಿಷ ಕುಡಿದು ಸಾಯುತ್ತಾಳೆ. ಇದು ದುರಂತತೆಯ ಸನ್ನಿವೇಶವಾಗಿದೆ. ವೆಂಕಟಸುಬ್ಬಯ್ಯನ ಆಸೆ ಹಣ್ಣಾಗುವ ಸಮಯದಲ್ಲಿ ಚಂದ್ರಳಲ್ಲಿಗೆ ಕೂಡಲು ಹೋದ ಸಂದರ್ಭದಲ್ಲಿ ತ.ರಾ.ಸುರವರ ಕಲಾವಂತಿಕೆಗೆ ಹಿಡಿದ ಕನ್ನಡ ಈ ಸನ್ನಿವೇಶ " ಕೊಳದ ತಡಿಯಲ್ಲಿ ವೆಂಕಟಸುಬ್ಬಯ್ಯ ಚಂದ್ರಸಾನಿಯ ಸಹಜಸೌಂದರ್ಯವನ್ನು ಕಂಡೇ ಮಾರುಹೋಗಿದ್ದರು. ಇಂದದು, ಶೃಂಗಾರಾಭರಣಪೋಷಿತವಾಗಿ, ಮದನನ ಮಸೆದ ಕರವಾಳವಾಗಿದೆ. ಅವರು ಕನಸುಮನಸಿನಲ್ಲಿಯೂ ಊಹಿಸದ ಲಾವಣ್ಯ ಪ್ರಕಾಶದ ಅವರ ಕಣ್ಣನ್ನು ವಿದ್ಯುಲ್ಲತಾಪ್ರಕಾಶದಿಂದ ಕೋರೈಸಿತು. ಅದನ್ನು ನೋಡಿದ ವೆಂಕಟಸುಬ್ಬಯ್ಯ ನವರ ಉಸಿರು ಬಿಗಿದಂತಾಯಿತು. "ಚಂದ್ರಾ..." ಎಂದು ಕೂಗಿ ಆಕೆಯ ಬಳಿಗೆ ಸಾರಿ ಬಯಕೆಯ ಭಾರ ತಾಳಲಾರದವರಂತೆ ಆಕೆಯ ಕಾಲ ಬಳಿ ಕುಸಿದರು. 'ಅವರ ಭಾವೋದ್ರೇಕವನ್ನು ಕಂಡು ಚಂದ್ರಸಾನಿ ಚಕಿತಳಾದಳು. ಕೆದರಿದ ತಲೆ , ಮಾಸಿದ ಬಟ್ಟೆ, ರಾಗವೇಶದಿಂದ ಬಿಗಿದ ಮೊರೆಯನ್ನು ಕಂಡು ಕನಿಕರವಾಯಿತು ಅವಳಿಗೆ ಕೆಳಗೆ ಕುಸಿದ ಅವರನ್ನು ಮೃದವಾಗಿ

ಮೇಲೆತ್ತಿ ನಿಲ್ಲಿಸದಳು. ಮಾತಾಡುವ ಶಕ್ತಿಯೂ ಉಡುಗಿದಂತ್ತಿತ್ತು. ಅವರ ಕೆದರಿದ ತಲೆಗೂದಲನ್ನು ಮೃದವಾಗಿ ನೇವರಿಸುತ್ತಾ ಕೇಳಿದಳು ಚಂದ್ರಾಸಾನಿ–"ದಾಸಿಯ ಮನೆಗೆ ದೊರೆ ಹೀಗೆ ಬರುವುದೇ?"

"ಆಂ!"–ಆಕೆಯ ಮಾತು ತಿಳಿಯದವರಂತೆ ಕೇಳಿದರು ವೆಂಕಟಸುಬ್ಬಯ್ಯ.

"ಇದೇನು ವೇಷ?"

"ಬಟ್ಟೆಯೇ?"

"ಬಟ್ಟೆಯೊಂದೇ ಅಲ್ಲ, ಮುಖ ನೋಡಿಕೊಳ್ಳಿ. ಈ ಕೆದರಿದ ತಲೆಯೇನು? ಇದೇನು ಉದ್ರೇಕ?"

"ನನಗೇನೂ ತಿಳಿಯಲಿಲ್ಲ. ಮೂರು ದಿನದಿಂದ ನಿನ್ನನ್ನು ನೋಡುವ ಹುಚ್ಚಿನಲ್ಲಿ ಇದಾವೂದೂ ಗೊತ್ತಾಗಲಿಲ್ಲ" ಎಂದು ಎಳೆಯ ಮಗುವಿನಂತೆ ಹೇಳಿ "ನಾನು ಹೀಗೆ ಬರಬಾರದಾಗಿತ್ತೇ?" ಎಂದು ಕೇಳಿದರು. ಆ ಮಾತು, ಅದನ್ನು ಆಡಿದ ಮುಗ್ಧರೀತಿ ಅವಳ ಹೃದಯವನ್ನು ಮಿಡಿಯಿತು.

"ಹಾಗೆಂದನೇ ನಾನು? ನನ್ನ ದೊರೆ ಹೇಗೆ ಬಂದರೂ ಚಂದವೇ. ಆದರೂ ಇಷ್ಟು ಹುಚ್ಚೆ?"

"ನೀನರಿಯೇ ಚಂದ್ರಾ!– ನಿನ್ನನ್ನು ನೋಡಿದಾಗಿನಿಂದ ನನಗೇನೋ ಆಗಿಹೋಗಿದೆ. ನಾನು ಮನುಷ್ಯನಲ್ಲ."

"ಹಾಗಾದರೆ ಮತ್ತೇನು?"

"ನಿನ್ನ ಸೌಂದರ್ಯದ ಬಂದಿ, ಲಾವಣ್ಯದ ಗುಲಾಮ! ನನ್ನನ್ನು ಸ್ವೀಕರಿಸುತ್ತೀಯಾ ಚಂದ್ರಾ?"

"ವೇಶ್ಯೆಯಾದ ಚಂದ್ರಸಾನಿಯನ್ನು ಹಣಕೊಟ್ಟು ಬಂದವರಾರೂ ಈ ರೀತಿ ಕೇಳಿರಲಿಲ್ಲ.ವೆಂಕಟಸುಬ್ಬಯ್ಯನವರ ಹೃದಯದಾಳದಿಂದ ಸಹಜವಾಗಿ ಮೂಡಿಬಂದ ಪ್ರಣಯಾರ್ತಧ್ವನಿ ಅವಳ ಹೃದಯವನ್ನು ಹಿಂಡಿತು. ಕಣ್ಣಲ್ಲಿ ಕಂಬನಿ ಒಡೆಯಿತು. ಹಿಂದೆಂದೂ ಅವಳು ಅನುಭವಿಸದ ಹೊಸ ಭಾವನೆಯೊಂದು ಭೂಂಕಾರ ಮಾಡಿತು."[೧೫]

ಇವರಿಬ್ಬರ ನಡುವಿನ ಪ್ರೇಮ– ಮೋಹದ ಚಿತ್ರಣ ಕಾವ್ಯಮಯವಾಗಿ ಭಾವನೆಗಳ ಪೂರ ಹರಿಸುತ್ತಾರೆ. ಮಧುರ ಮಾತುಗಳ ಮೇಲೆ ರಸಮಯವಾಗಿ ಚಿತ್ರಿಸುತ್ತಾರೆ.

ಹಂಸಗೀತೆಯಲ್ಲಿ ವೆಂಕಟಸುಬ್ಬಯ್ಯ–ಟಿಪ್ಪು ಸನ್ನಿವೇಶ ಇದು ಕಾದಂಬರಿಯ ಜೀವನಾಡಿ ಭಾಗವಾಗಿದೆ. ವೆಂಕಟಸುಬ್ಬಯ್ಯ ಚಂದ್ರಸಾನಿಯ ನೋವಿನ ಸಂಗತಿಯಿಂದ ಹೊರಬಂದು ರಾಗವನ್ನು ಒಲಿಸಿ ಕೊಂಡಹೊತ್ತಿಗೆ ಚಿತ್ರದುರ್ಗವನ್ನು ಟಿಪ್ಪು ವಶಪಡಿಸಿಕೊಳ್ಳುತ್ತಾನೆ. ಮಡದಿ ಬಯಕೆಯಂತೆ ಆಸ್ಥಾನದಲ್ಲಿ ಹಾಡಲು ಹೇಳಿದಾಗ. ದೇವಸ್ಥಾನದ ಹೊರೆತು ಬೇರೆಲ್ಲಿಯೂ ಹಾಡುವುದಿಲ್ಲ. ಎಂದು ವೆಂಕಟಸುಬ್ಬಯ್ಯ ಹೇಳುತ್ತಾನೆ. ಹಾಡದಿದ್ದಲ್ಲಿ ಶಿಕ್ಷಿಸುವುದಾಗಿ ಟಿಪ್ಪು ಹೇಳುತ್ತಾನೆ. ಕೊನೆಗೆ ವೆಂಕಟಸುಬ್ಬಯ್ಯ ನಾಲಿಗೆ ಕತ್ತರಿಸಕೊಂಡು ಪ್ರಾಣ ಬಿಡುತ್ತಾನೆ ದುರಂತತೆಯಲ್ಲಿ ಕಾದಂಬರಿ ಕೊನೆಯಾಗುತ್ತದೆ.

ಆ ದೃಶ್ಯಯವನ್ನು ನೋಡಿ ನೂರಾರು ಯುದ್ಧ ರಕ್ತಪಾತವನ್ನು ನೋಡಿದ್ದ ಟೀಪ್ಪುವೂ ಹೆದರಿ ಗಡಗಡ ನಡುಗಿದ."[೧೬]

"ವೈದ್ಯರು ಬಂದು ರಕ್ತ ಹರಿವ ವೆಂಕಸುಬ್ಬಯ್ಯನವರ ಬಾಯಿಗೆ ಪೂಜೆಯ ಕುಂಕುಮ ಒತ್ತಿ ರಕ್ತ ನಿಲ್ಲಿಸಿ ದೇವರ ಮನೆಯಿಂದ ಹೊರಗೆ ತಂದರು"[೧೭]

ಈ ವಿವರಣೆಗಳಲ್ಲಿ ವೆಂಟಕಸುಬ್ಬಯ್ಯನವರ ನಿಷ್ಠೆ ತನ್ನ ಇಚ್ಚೆಗೆ ವಿರುದ್ಧವಾಗಿ ಹಾಡಲು ನಿರಾಕರಿಸಿ ತಮ್ಮ ನಾಲಿಗೆ ಕತ್ತರಿಸಕೊಂಡ ದೃಶ್ಯನೋಡಿ ಟಿಪ್ಪುನಂತಹವನು ಹೆದರೋ ಪರಿ ಇಲ್ಲೆಲ್ಲಾ ಘೋರ, ಭಯ ಹುಟ್ಟಿಸೋ ಹೃದಯವಿದ್ರಾವಕ ಸನ್ನಿವೇಶ ನಿರ್ಮಾಣಗೊಂಡಿದೆ. ತ.ರಾಸು. ತಮ್ಮ ಕಾದಂಬರಿ ಕಥೆಗೆ ಸಂದರ್ಭೋಚಿತವಾಗಿ ಸನ್ನಿವೇಶಗಳನ್ನು ದುಡಿಸಿಕೊಳ್ಳುತ್ತಾರೆ.

ಹೇಮಾವತಿಯಲ್ಲಿ ಆನಂದ ಹೆಣ್ಣು ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದ ಹಾಡುಗಳನ್ನ ಚೆನ್ನಿ ಕೆಲಸಕ್ಕೆ ಹೋಗುವಾಗ, ಸಗಣಿ ಹೊತ್ತುಕೊಂಡು ಹೋಗುವಾಗ ಕೇಳಿಕೊಂಡು ತನ್ನೊಳಗೆ ಹೇಳಿಕೊಳ್ಳುತ್ತಾ ಸಂಗೀತದ ಬಗೆಗೆ ಆಸಕ್ತಿ ಪ್ರಕಟಿಸುತ್ತಾಳೆ. ಹಂಸಗೀತೆಯಲ್ಲಿ ವೆಂಕಟಸುಬ್ಬಯ್ಯ ಹಕ್ಕಿಗಳ ಹಾಡು, ನೀರಿನಕಲರವ, ಮರದಎಲೆಗಳು ಅದರವುದರಲ್ಲಿ ತಲ್ಲೀನನಾಗಿ ಸಂಗೀತದ ಬಗೆಗೆ ತನ್ನ ಒಲವು ತೋರಿಸುತ್ತಾನೆ. ಹೇಮಾವತಿ ಕಾದಂಬರಿಗಳಲ್ಲಿ ಪ್ರತಿಯೊಂದು

ಸನ್ನಿವೇಶಗಳಲ್ಲೂ ವಾಸ್ತವಿಕತೆ ಎದ್ದುಕಾಣುತ್ತದೆ. ಹಂಸಗೀತೆಯಲ್ಲಿ ವಿಸ್ಮಯ ಸನ್ನಿವೇಶಗಳು ಹೆಚ್ಚು ಕಾಣಸಿಗುತ್ತವೆ. ಇಬ್ಬರು ಲೇಖಕರ ಅಭೀವ್ಯಕ್ತಿ ಬೇರೆಯಾದರೂ ಸಂಗೀತ ಕಲೆಯಲ್ಲಿ, ಸಂಗೀತ ವಿದ್ಯೆಯಲ್ಲಿನ ಮೌಲ್ಯಗಳನ್ನ ಸಮಾನವಾಗಿ ಹಲವು ಸನ್ನಿವೇಶಗಳಲ್ಲಿ ಪೋಣಿಸುತ್ತ ಹೋಗುತ್ತಾರೆ. ಇಬ್ಬರು ಲೇಖಕರ ಅಪಾರ ಅನುಭವದ ಪ್ರೌಢಿಮೆಯೆ ಸನ್ನಿವೇಶ ನಿರ್ಮಾಣದಲ್ಲಿ ಪೂರಕವಾಗಿ ರೂಪುಗೊಳ್ಳುತ್ತವೆ. ಇಂತಹ ಅದ್ಭುತಪೂರ್ಣ ಸನ್ನಿವೇಶಗಳು ಈ ಕಾದಂಬರಿಗಳ ಯಶಸ್ಸಿಗೆ ದುಡಿದಿವೆ.

೫.೩ ಭಾಷೆ ಮತ್ತು ತಂತ್ರ

ಸಾಹಿತ್ಯ ಮಂದಿರಕ್ಕೆ ಪದಗಳೇ ಇಟ್ಟಿಗೆ ಕಲ್ಲು, ಪದಗಳೇ ತೊಲೆಕಂಬ, ಪದಗಳೇ ಭಾವಣಿ ಹೆಂಚು. ಸಹೃದಯರಿಗೆ ಆದರಲ್ಲಿಯೂ ಆಧುನಿಕರಿಗೆ ಲೇಖಕನ ಭಾಷೆ ಹಿತವಾದರೂ ಅದರ ಸ್ಪಷ್ಟತೆ ಒಂದು ಪ್ರಮುಖ ಕಾರಣ ಅವನ ನುಡಿ ಅವನ ಕವಿತ್ವಕ್ಕೆ ಸ್ವಚ್ಛಕನ್ನಡಿ ಆಲೋಚನೆ ಭಾವ ಅರ್ಥಪುಷ್ಟಿ ಧ್ವನಿಗಾಂಭೀರ್ಯ ಚಿತ್ರಚಮತ್ಕಾರ ಗುಣಾಧಿಕ್ಯ ದನಿಯಇಂಪು ಎಲ್ಲವೂ ಓದಿದ ತಕ್ಷಣವೇ ವಿಶಧವಾಗುವಂತಿರಬೇಕು. ಭಾಷೆ ಸಾಹಿತಿಯ ಭಾವನೆ ಕಲ್ಪನೆಗಳನ್ನು ಅಭಿವ್ಯಕ್ತಿಸುವ ಸಾಧನ ಲೇಖಕ ಕೃತಿಯನ್ನು ಕಟ್ಟಿದ ಬಗೆ, ಬಳಸಿದ ರೀತಿಗಳನ್ನು ಎತ್ತಿತೋರಿಸುತ್ತದೆ. ಭಾಷೆ ಸಂಕ್ಷಿಪ್ತವಾಗಿ ಅತಿ ವ್ಯಾಪ್ತ ವಿವರಗಳನ್ನು ಒಳಗೊಂಡ ಮಾಧ್ಯಮ.

"ಮಾನವನ ಆಶೋತ್ತರಗಳ ಅಭಿವ್ಯಕ್ತಿ ಅವ ಭಾಷೆಯಾದಂತೆ ಸಾಹಿತಿ ತನ್ನ ಪ್ರತಿಭೆ, ಪಾಂಡಿತ್ಯಗಳ, ಚಿಂತನ, ಮನನಗಳನ್ನು ಪ್ರತಿಫಲಿಸಲು ಭಾಷೆ ಸಾಧನಾವಗುತ್ತದೆ".[೧೮] ಸರೋಜಿಚವಲಾರ ಮಾತಿನಂತೆ ಸಾಹಿತಿ ಮನಸಿನಲ್ಲಿ ಮೂಡಿದ ಕಲ್ಪನೆ, ಚಿಂತನೆಗಳು ಶಬ್ದದ ಒಳಹೊಕ್ಕು ಅಮೂರ್ತರೂಪವು, ಮೂರ್ತರೂಪವಾಗಿ ಹೊರಹೊಮ್ಮುತ್ತದೆ. ಸಾಹಿತ್ಯವನ್ನು ಜನಜೀವನದ ಪಡಿನೆಳಲು ಎನ್ನುವಾಗ ಅದನ್ನು ಅಭಿವ್ಯಕ್ತಿಸುವ ಸಾಹಿತಿಯ ಭಾಷೆಯೂ ಕೂಡ ಅವನ ಜನಾಂಗ, ಜನಜೀವನಗಳಿಂದಲೇ ಬಂದುದು. ಅವನ ಸಮಕಾಲೀನ ಸಮಾಜದ ಮೌಲ್ಯಗಳು ನೀತಿ, ಧರ್ಮ, ಆಚಾರ-ವಿಚಾರಗಳು, ನಿಷ್ಠೆ-ನಂಬುಗೆಗಳು, ದ್ವೇಷ-ಅಸೂಯೆಗಳು, ಕ್ರೌರ್ಯ-ದೌರ್ಬಲ್ಯಗಳು, ಅನೀತಿ-ಅಸತ್ಯಗಳೆಲ್ಲದರ ಪ್ರಭಾವ ಪರಿಣಾಮಗಳು

ಸಾಹಿತಿಯ ಮೇಲಾಗುತ್ತವೆ. ಆದ್ದರಿಂದ ಅವನ ಅನುಭವಗಳು ರೂಪಿತಗೊಂಡು ಭಾಷೆಯಲ್ಲಿ ಮೈತಳೆದು ನಿಲ್ಲುತ್ತವೆ.

ಭಾಷೆ ಎನ್ನುವುದು ಅನುಭವದ ವ್ಯಾವಹಾರಿಕ ಮಾಧ್ಯಮ, ನಮ್ಮ ಅನೇಕ ಅಭಿಪ್ರಾಯಗಳನ್ನು ಇತರರಿಗೆ ಅರ್ಥವಾಗುವಂತೆ ತಿಳಿಸುವಲ್ಲಿ ಭಾಷೆ ಪ್ರಮುಖ ಪಾತ್ರ ವಹಿಸುತ್ತದೆ. ಹೀಗಾಗಿ ಬರಹಗಾರ ತಮ್ಮ ಅನುಭವವನ್ನು ಓದುಗರಿಗೆ ಮುಟ್ಟಿಸಬೇಕಾದರೆ ಅರ್ಥಪೂರ್ಣವಾದ ಭಾಷೆಯನ್ನು ಬಳಸಬೇಕಾಗುತ್ತದೆ. ಭಾಷೆಯನ್ನು ಪ್ರಜ್ಞಾಪೂರ್ವಕವಾಗಿ ಬಳಸುವಾಗ ಅದು ಶಿಷ್ಟವಾಗುತ್ತದೆ. ಹಾಗಲ್ಲದೆ ಸಾಮ್ಯಾನವಾಗಿ ಬಳಸಿದಾಗ ಅದು ಆಡುಭಾಷೆಯಾಗುತ್ತದೆ. ಕಾದಂಬರಿಗಳಲ್ಲಿ ಕಾದಂಬರಿಕಾರರು ತಮ್ಮ ಮನೋಧರ್ಮಕ್ಕೆ ಅನುಗುಣವಾಗಿ ಭಾಷೆಯನ್ನು ಬಳಸುವುದನ್ನು ಕಾಣಬಹುದಾಗಿದೆ. ಭಾಷೆಯಲ್ಲಿ ನವಿರತೆ ಆದಷ್ಟು ಸರಳತೆಯನ್ನು ಬಳಸಿ ಓದುಗನ ಮನಸೆಳೆಯುವ ಭಾಷ ಪ್ರಯೋಗಕ್ಕೆ ಕಾದಂಬರಿಕಾರ ತೊಡಗುತ್ತಾನೆ. ಭಾಷೆಯು ಭಾವವನ್ನು ಅಭಿವ್ಯಕ್ತಗೊಳಿಸುವ ಒಂದು ಮಾಧ್ಯಮ, ಈ ನಿಲುವಿನ ಗೆಲವು ಬಳಸಿದ ಭಾಷೆಯ ಸಾಮರ್ಥ್ಯವನ್ನು ಅವಲಂಬಿಸುತ್ತದೆ. ಭಾಷೆ ಸತ್ವಹೀನವಾದರೆ ಅಭಿವ್ಯಕ್ತಿ ಕುಂಠಿತಗೊಳ್ಳುತ್ತದೆ. ಅದರ ಬದಲು ಅದು ಸಾರ್ಥಕ ಪದಗಳ ಬಳಕೆಯಿಂದ ಸತ್ವಯುತವಾಗಿದ್ದರೆ. ಅಭಿವ್ಯಕ್ತಿ ಉತ್ತಮಗೊಳ್ಳುತ್ತದೆ.

ಈ ಬಗೆಯ ಭಾಷಾ ಪ್ರಯೋಗ ಮೆಚ್ಚುಗೆಗೆ ಗೊರೂರು ಮತ್ತು ತ.ರಾಸು ಇಬ್ಬರು ಪಾತ್ರರಾಗುತ್ತಾರೆ. ಚೆನ್ನಾಗಿ ನಿರ್ವಹಣೆಗೊಂಡ ಸಂಭಾಷಣೆ ಹೇಮಾವತಿ ಮತ್ತು ಹಂಸಗೀತೆ ಕಾದಂಬರಿಗಳ ಅತ್ಯಂತ ಆನಂದದಾಯಕ ಅಂಶಗಳಲ್ಲೊಂದು ಸಂಭಾಷಣೆ ಮೂಲಕ ಕೃತಿಯ ಓದಿಗೆ ವಾಚಕನ ಗಮನ ಹಚ್ಚುವಂತೆ ಮಾಡುವುದೇ ಈ ಕಾದಂಬರಿಗಳ ಯಶಸ್ಸು. ಈ ಎರಡು ಕಾದಂಬರಿಗಳಲ್ಲಿ ಭಾಷೆಯನ್ನು ಒಂದು ಸಾವಯವ ಅಂಶವಾಗಿ ಬಳಸಿದ್ದಾರೆ. ಪಾತ್ರಗಳ ವ್ಯಕ್ತಿತ್ವಕ್ಕನುಗುಣವಾಗಿ ಸಂದರ್ಭೋಚಿತವಾಗಿ ಸಂಭಾಷಣೆಗಳು ಸಾಗುತ್ತವೆ.

"ಗೊರೂರರ ಬರವಣಿಗೆಯಲ್ಲಿ ಕಲೆಯ ಪ್ರಯತ್ನ ಕಾಣವುದಿಲ್ಲ"[೧೯] ಎಂಬ ಸಿ.ಪಿ.ಕೆ ಯವರ ಮಾತು ಉಲ್ಲೇಖನಾರ್ಹ. ಯಾವುದೇ ತಂತ್ರ ಪ್ರಯೋಗ, ಸಂಕೇತ ಪ್ರತಿಮೆಗಳ ನಿರ್ಮಾಣಗಳು ಅವರ ಕೃತಿಗಳಲ್ಲಿ ಗೋಚರಿಸುವುದಿಲ್ಲ. ಯಾವುವನ್ನು ಅಸ್ಪಷ್ಟವಾಗಿ

ಚಿತ್ರಿಸುವುದಿಲ್ಲ, ತಾವು ಕಂಡದ್ದನ್ನು ಸಹಜವಾಗಿ ಸರಳವಾಗಿ ನಿರಾಳವಾಗಿ ಹೇಳಿಕೊಂಡು ಹೋಗುತ್ತಾರೆ. ತಮ್ಮ ಬರವಣಿಗೆಗೆಯಲ್ಲಿ ಈಗ ಸಂಪೂರ್ಣವಾಗಿ ಕಣ್ಮರೆಯಾಗುತ್ತಿರುವ ನಮ್ಮ ಗ್ರಾಮೀಣ ಜೀವನದ ವಿವಿಧ ಮುಖಗಳ ನಿರ್ಮಲ ವರ್ಣನೆ ಜೀವನದ ಸ್ವಾರಸ್ಯಕರ ಅಂಶಗಳನ್ನು ತೋರಿಸಿ ಅವುಗಳನ್ನು ತಮ್ಮ ಭಾಷೆಯಲ್ಲಿ ಸೆರೆಹಿಡಿದು ಅಮರಗೊಳಿಸುತ್ತಾರೆ. ಜನಸಮ್ಯಾನರ ಭಾಷೆಯನ್ನು ಬಳಸುತ್ತಾರೆ.

ತ.ರಾಸು ಯಾವುದೇ ಕಾಂದಬರಿಯಿರಲಿ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ವಿಷಯ ವಸ್ತುಗಳನ್ನು ನಿರೂಪಿಸುವುದರಲ್ಲಿ ಆಯಾ ವಸ್ತುಗಳಿಗೆ ಅನುಸಾರವಾಗಿ ಅವರಿಂದ ಭಾಷೆ ಒಡಮೂಡುತ್ತದೆ. ಕಥಾ ವಸ್ತು ಗಂಭೀರವಾಗಿದ್ದರೆ, ಪಾಂಡಿತ್ಯಮಾನ್ಯವಾದ ಶಿಷ್ಟಭಾಷೆಯಾಗಿ ರೂಪುಗೊಳ್ಳುತ್ತದೆ. ವಸ್ತು ವೀರ ಪ್ರದರ್ಶನವಾದರೆ ಭಾಷೆ ವೀರ ಅಥವಾ ಗಂಡು ಭಾಷೆಯಾಗಿ ರೂಪುಗೊಳ್ಳುತ್ತದೆ. ಇದು ತ.ರಾ.ಸು ಭಾಷೆ ಪ್ರಮುಖ ಲಕ್ಷಣ. ಈ ಮೇಲಿನ ದೃಷ್ಟಿಕೋನಗಳಿಂದ ಹೇಮಾವತಿ ಮತ್ತು ಹಂಸಗೀತೆ ಕಾದಂಬರಿಗಳ ಭಾಷಾ ಬಳಕೆಯನ್ನು ಗ್ರಹಿಸಬಹುದು.

ಗೊರೂರರು ಹೇಮಾವತಿಯಲ್ಲಿ ಆಡುಮಾತಿನ ಸರಳ ಭಾಷೆಯಲ್ಲಿ ಗ್ರಾಮೀಣ ಸೊಡಗಿನ ಭಾಷೆ ಗಾದೆಗಳು ಕೆಲವು ಸಂಸ್ಕೃತ ಪದಗಳನ್ನು ಆಧುನಿಕತೆ ಶ್ರೇಷ್ಠತೆಯ ಭಾಷೆಯಾದ ಇಂಗ್ಲೀಷ್ ಪದಗಳ ಬಳಕೆಯನ್ನು ಕಾದಂಬರಿಯಲ್ಲಿ ಬಳಸುತ್ತಾರೆ. ಇಲ್ಲಿ ಕೂಡ ಸಂದರ್ಭಾನುಸಾರವಾಗಿ ಕಥೆಯ ವಸ್ತುವಿಗೆ ಹೊಂದಿಕೊಂಡ ಭಾಷಾ ಪ್ರಯೋಗ ಕಾಣಬಹುದಾಗಿದೆ.

"ಒಳ್ಳೆಯವರ ಮಾನ ಹಳ್ಳಿಯಲ್ಲಿ ಹೋಯಿತು"[೨೦]

"ಕಾಮದೇನುವನ್ನು ಕೈಯಲ್ಲಿಟ್ಟುಕೊಂಡು ಹಾಲಿಗೆ ತಿರುಪ್ಪೆ ಹೋದಂತೆ"[೨೧]

"ಅರಿಸಿನದ ಕೂಳನ್ನು ನೆಚ್ಚಿಕೊಂಡು ವರ್ಷದ ಕೂಳನ್ನು ತೊರೆದಂತೆಯೇ"[೨೨] ಇಂತಹ ಗ್ರಾಮ ಸೊಗಡುಳ್ಳ ಗಾದೆ ಮಾತುಗಳನ್ನು ಬಳಸಿಕೊಳ್ಳುತಾರೆ. ಇವುಗಳನ್ನು ಆಡುಮಾತಿನೊಂದಿಗೆ ಬೇರೆ ಪಾತ್ರಗಳ ಮೂಲಕ ಆಡಿಸುತ್ತಾರೆ.

"ಓಪುರಾಣ ಕವಿವಚಃ ಪ್ರಭಾವ ಲಲಿತೆ, ನವಕಾವ್ಯೋದ್ಯಮ ಯೌವನನಲಸಿತೆ."[೨೩] ಸಂಸ್ಕೃತದ ಬಹಳಷ್ಟು ಕಾವ್ಯಮಯ ಭಾಷೆಯನ್ನು ಗೊರೂರು ಹೇಮಾವತಿಯಲ್ಲಿ ತ.ರಾ.ಸು ರಂತೆ ಸಂದರ್ಭಕ್ಕೆ ತಕ್ಕಂತೆ ಪ್ರಯೋಗಿಸುತ್ತಾರೆ.

ಕಾದಂಬರಿಯಲ್ಲಿ ಗ್ರಾಮೀಣ ಬದುಕಿನ ಜನರ ಆಡುಭಾಷೆಯನ್ನು ದಲಿತರು ಮಾತನಾಡೋ ಭಾಷೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ಮಾತನಾಡೋ ಮೂದಲಿಕೆ ನುಡಿಗಳನ್ನು ಬಳಸುತ್ತಾರೆ. ಹಾಗೇಯೆ ಆಡುಮಾತಿನೊಂದಿಗೆ ಕೆಲವು ಇಂಗ್ಲೀಷ್ ಪದಗಳ ಬಳಕೆ ಸೇರಿಸಿ ಕಂಲ್ಲೀಷ್ ಭಾಷಾ ಪ್ರಯೋಗವನ್ನು ನಾವು ಈ ಉದಾಹರಣೆಗಳೊಂದಿಗೆ ಕಾಣಬಹುದು. "ಹಾಸನ ಹೈಸ್ಕೂಲಿನಲ್ಲಿ ಎರಡನೇಯವರುಷ ಅವನಿಗೆ ಎಸ್.ಎಸ್.ಎಲ್.ಸಿ (ಶಠಾರಿರವರು ಈ ಪರೀಕ್ಷೆಗೆ ಎಸಾಸ್ಸಿ ಎನ್ನುತ್ತಿದ್ದರು) ಪರೀಕ್ಷೆ "ಫೇಲ್" ಆದನಂತರ ಅವನು "ಪಾಸ್" ಅಯಿತೆಂದು ಹೇಳಿಕೊಂಡು"[೨೪]

"ಕಾಫಿ ಆಗುತ್ತೆ ಇರಲಿ ನಿಮ್ಮ ಮೇಲೆ ಕೊಳಕು ಆಹಾರ ಸಪ್ಲೆಗಾಗಿ ಕೇಸು ಮಾಡಬೇಕಾಗುತ್ತೆ"[೨೫]

"ಜಾರ್ಜೆಟ್ ರೇಶಿಮೆಗಳ ಮರಮರ ಶಬ್ಧ ಗಳೇನು"

ಗ್ರಾಮ ಭಾಷೆಯೊಂದಿಗೆ ಇಂಗ್ಲೀಷ್ ಪದಗಳು ಸಂಯೋಗಗೊಂಡು ಕಲವೆಡೆ ಹಾಸ್ಯ ಮಿಶ್ರಿತ ಭಾಷೆಯಾಗಿ ಕಂಗೊಳಿಸುತ್ತವೆ. ಹೊಲೆಯನಾದವನು ಮೇಲು ಜಾತಿಯ ವ್ಯಕ್ತಿಯೊಡೆನೆ ಮಾತಾಡುವಾಗ ತನ್ನ ಜಾಯಮಾನಕ್ಕೆ ಅನುಗುಣವಾಗಿಯೇ ಮಾತನಾಡುತ್ತಾನೆ, ಗ್ರಾಮದಲ್ಲಿದ್ದುಕೊಂಡು ನಾಗರೀಕತೆಯ ಅನನ್ಯತೆಯೊಂದಿಗೆ ಸ್ವಾರಸ್ಯಕರ ಭಾಷೆ ಬಳಕೆಗಳನ್ನು ಕಾಣಬಹುದಾಗಿದೆ.

ತ.ರಾಸು ಹಂಸಗೀತೆಯಲ್ಲಿ ತಮ್ಮ ಉಳಿದ ಕಾದಂಬರಿಗಳಂತೆ ಜೋರುತ್ತನವನ್ನು ತರದೆ ಇಡೀಯಾಗಿ ಕಾದಂಬರಿ ವಸ್ತುವನ್ನು ಕಣ್ಸೆಳೆಯುವಂತೆ ಹದವಾದ ಮೆದು ಭಾಷೆ ಬಳಕೆಯನ್ನು ಕಾಣಬಹುದು. ಆದರೆ ಕೆಲವು ಸನ್ನಿವೇಶಗಳಲ್ಲಿ ಪ್ರಸ್ತಾಪವಾಗಿರುವ ಉತ್ಕಟತೆ ಅಲ್ಲಿ ಗೋಚರಿಸುವುದರಿಂದ ಪಾತ್ರಗಳ ಹೊಯ್ದಾಟ, ತಾಕಲಾಟಗಳಿಲ್ಲಿ ಭಾಷೆ ಜೀವಂತಿಕೆಯನ್ನು ತುಂಬಿ ಓದುಗನನ್ನು ನಿರಾಂತಕವಾಗಿ ಓದಿಸಿಕೊಂಡು ಹೋಗುತ್ತದೆ.

ಉದಾಹರಣೆಗೆ "ಕಾಲ ಹೆಂಗಾಗೋಯ್ತು ಬಿರಗಾಳಿಗೆ ದೊಡ್ಡ ಮರ ಕೊಚ್ಚಿಹೋಗಿ ಮೋಟು ಪೊದೆ ಉಳಿದಂಗಾಯ್ತು"[೨೬]

"ಕುದರೆಗಿಂತ ಲದ್ದಿ ಬಿರುಸಾಯಿತು ಎನ್ನುವ ಹಾಗಾಯಿತು ನನ್ನ ಕಥೆ"[೨೭]

"ನಮಾಜು ಮಾಡೋಕೆ ಹೋದ ಮುಲ್ಲಾ ಮಸೀದಿ ಕೊರಳಿಗೆ ಹಾಕಿಕೊಂಡು ಬಂದ ಹಾಗೆ ಮಾಡಿದಿರಿ ನನ್ನ ಕಥೇನ"[೨೮]

"ಆರಂಭ ಶೂರಾಃ ಬಲು ದಾಷಿಣಾತ್ಯಃ :[೨೯]

ತ.ರಾಸು ಹಂಸಗೀತೆ ಕಾದಂಬರಿಯಲ್ಲಿ ಶಿಷ್ಟ ಭಾಷೆಯಲ್ಲಿ ಚಲಿಸಿದರು ಗೊರುರರಂತೆ ದೇಸಿಯ ಎನ್ನಬಹುದಾದ ನಾಣ್ನುಡಿ, ಜಾಣ್ನುಡಿಗಳು, ಗಾದೆಮಾತುಗಳು., ಸಂಸ್ಕೃತ ಬೂಯಿಷ್ಟ ಪದಗಳು, ಸಂಸ್ಕೃತ ಗಾದೆಗಳ ಪ್ರಯೋಗವನ್ನು ಕಾಣಬಹುದಾಗಿದೆ. ಇವೆಲ್ಲವು ಸಂದರ್ಭಕ್ಕೆತಕ್ಕಂತೆ ಬರುತ್ತವೆ ಕಥೆ ಬಂದಕ್ಕೆ ಮೆರಗು ನೀಡುತ್ತವೆ.

ಇಂತಹ ಸಂದರ್ಭಗಳಲ್ಲಿ ವರ್ಣಮಯ ರಮಣೀಯ ಕಾವ್ಯಮಯ ಭಾಷೆಯನ್ನು ಬಳಸುತ್ತಾರೆ. ಕೆಲವೊಂದೆಡೆಗಳಲ್ಲಿ ಸಂದರ್ಭಕ್ಕನುಸಾರಿಯಾಗಿ ಗ್ರಾಮ ಜನಪದೀಯ ಭಾಷೆ ಬಳಸಿದರು ಅದು ಈ ಕಾದಂಬರಿಯಲ್ಲಿ ಗೌಣವೇ ಆಗಿದೆ. ಮೇಲಿನಂತೆ ಹಂಸಗೀತೆ ಭಾಷ ಪ್ರಯೋಗಕ್ಕೆ ತ.ರಾಸು ತೊಡಗುತ್ತಾರೆ. ಈ ಎರಡು ಕಾದಂಬರಿಗಳಲ್ಲಿ ಭಾಷೆ ಜೀವಂತ, ನಿತ್ಯನೂತನ ಚಿರಯೌವ್ವನ ಭಾಷೆಯಾಗಿ ಸೊಬಗು ಮೂಡಿಸುತ್ತವೆ. ಆ ಮೂಲಕ ಕಥಾವಸ್ತು ಅಭಿವ್ಯಕ್ತಿಗೆ ಜೀವಂತಿಕೆಯನ್ನು ನೀಡುತ್ತವೆ.

ಒಂದು ಕಾದಂಬರಿಯ ಕಥೆಯನ್ನು ಹೇಳುವ ರೀತಯನ್ನು ತಂತ್ರ ಎಂದು ಅರ್ಥೈಸಬಹುದು. ಕಾದಂಬರಿಕಾರ ಸಾಮಾನ್ಯವಾಗಿ ತನ್ನ ಕೃತಿಯಲ್ಲಿ ಕಥೆ ಹೇಳುವ ಗುರಿಯನ್ನು ಮಾತ್ರ ಇಟ್ಟು ಕೊಂಡಿರುವುದಿಲ್ಲ. ಜೊತೆಗೆ ಯಾವುದೋ ಒಂದು ವಿಷಯವನ್ನು ಹೇಳುವ ಉದ್ದೇಶವನ್ನಿಟ್ಟುಕೊಂಡಿರುತ್ತಾನೆ. ಉದ್ದೇಶ ಹಾಗೂ ಪರಿಣಾಮಕಾರಿಯಾಗಿ ಕಥೆ ಹೇಳುವುದಕ್ಕಾಗಿ ಬಳಸುವಂತಹ ವಿಧಾನವನ್ನು ತಂತ್ರ ಎಂದು ಹೇಳುಬಹುದು. ತಂತ್ರ ಎಂಬ ಪದ ಇತ್ತೀಚಿಗಷ್ಟೇ ಬಳಕೆಗೆ ಬಂದಿರುವಂತಹದ್ದು "ತಂತ್ರ ಎಂದರೆ ಸಾಮಾನ್ಯವಾಗಿ ಕಾದಂಬರಿಯ ವಸ್ತುವನ್ನು ಸಂಘಟಿಸುವ ವಿಧಾನ ಕುತೂಹಲ ಕೆರಳುವಂತೆ ಕಥೆ ಹೇಳುವ

ರೀತಿ ಪಾತ್ರಗಳ ಪರಸ್ಪರ ಸಂಬಂಧ ಬೆಳವಣಿಗೆ ಉದ್ದೇಶಗಳನ್ನು ಚಿತ್ರಸುವ ಕೌಶಲ್ಯ ಘಟನೆಗಳನ್ನು ಆಕರ್ಷಕವಾಗಿ ನಿರೂಪಿಸುವ ಬುದ್ಧವಂತಿಕೆ."[೩೦] ಎಂಬುದಾಗಿ ಗಿರಡ್ಡಿ ಗೋವಿಂದರಾಜರು ತಂತ್ರದ ಬಗೆಗೆ ಹೇಳುತ್ತಾರೆ.

ತಂತ್ರದಿಂದ ಇಡೀ ಕಾದಂಬರಿಯ ಕತೆ ಸುರಳಿ ಸುರಳಿಯಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಇದು ಓದುಗನ ಕುತೂಹಲವನ್ನು ಹುಟ್ಟಿಸಲು ಸಹಾಯಕವಾಗುತ್ತದೆ. ಕಾದಂಬರಿಕಾರ ಜೀವನವನ್ನು ಸುತ್ತಮುತ್ತಲಿನ ಸಮಾಜವನ್ನು ಜನರನ್ನು ತನ್ನ ಅನುಭವದಲ್ಲಿ ಪುನರ್ ಸೃಷ್ಟಿಸಿಕೊಂಡ ರೀತಿಯನ್ನು ಪಾತ್ರಗಳು ಘಟನೆಗಳ ಮೂಲಕ ನಮ್ಮ ಅನುಭವಕ್ಕೆ ತಂದು ಕೊಡುವಲ್ಲಿ ತಂತ್ರದ ಪಾತ್ರ ಬಹುಮುಖ್ಯ. ಕಥೆ ಹೇಳಲು ಎರಡು ಮಾರ್ಗಗಳುಂಟು ಒಂದು ಕಾದಂಬರಿಕಾರನೆ ನೇರವಾಗಿ ಕಥೆಯನ್ನು ಹೊರಗಿನಿಂದ ಹೇಳುವುದು ಮತ್ತೊಂದು ಕಾದಂಬರಿಕಾರ ಯಾವುದಾರೂ ಒಂದು ಪಾತ್ರದ ದೃಷ್ಟಿಕೋನದ ಮೂಲಕ ಒಳಗಿನಿಂದ ನಿರೂಪಿಸುವುದು ಮೊದಲನೇ ತಂತ್ರವನ್ನು ತ.ರಾ.ಸು ಬಳಸಿಕೊಂಡರೆ ಎರಡನೇ ತಂತ್ರವನ್ನು ಗೊರೂರರು ತಮ್ಮ ಕಾದಂಬರಿಯಲ್ಲಿ ಬಳಸಿಕೊಳ್ಳುತ್ತಾರೆ. ಗೊರೂರು ಸಂಪ್ರದಾಯಸ್ಥ ಮೌಲ್ಯ ನಂಬಿರುವ ವ್ಯವಸ್ಥೆಯಲ್ಲಿ ಚೆನ್ನಿ ಎಂಬ ದಲಿತಳಿಗೆ ಸಂಗೀತ ವಿದ್ಯೆ ದಕ್ಕಲು ಸಾದ್ಯವಿಲ್ಲ ಎಂದು ಆನಂದ ಚೆನ್ನಿಯೊಂದಿಗೆ ಪಟ್ಟಣಕ್ಕೆ ಕಣ್ಮರೆಯಾಗುವ ನಂತರ ಅಭಿವನಶಾರದೆಯಾಗಿ ಕಂಗೋಳಿಸುವ ತಂತ್ರ ಸಹಜವಾಗಿ ಬಳಸಲಾಗಿದೆ.

ಹಂಸಗೀತೆಯಲ್ಲಿ ಲಿಂಗಾಜೋಯಿಸರು ಮುರುಗೇಂದ್ರಪ್ಪ ಮೊದಲಾದವರಿಂದ ತಮ್ಮ ಹಿಂದಿನ ವೃತ್ತಾಂತದ ಮೂಲಕವೇ ಕಥೆ ಹೇಳಿಸುವ ತಂತ್ರ ಮಾಡಲಾಗಿದೆ. ವೆಂಕಟಸುಬ್ಬಯ್ಯನ ಸಾಧನೆ ಹಂತಕ್ಕೆ ಕೊಡೊಯ್ಯಲು ಚಂದ್ರಸಾನಿಯನ್ನ ಆತ್ಮಹತ್ಯೆ ಮಾಡಿಸೋ ತ್ಯಾಗದ ಉತ್ತುಂಗದ ತಂತ್ರಗಾರಿಕೆ ಅಭಿವ್ಯಕ್ತವಾಗಿದೆ.

ವೀರಣ್ಣಜ್ಜನ ದುರಂತ ಕಥೆ ಹೆಣೆಯುವುದರೊದಿಂಗೆ ವೆಂಕಟಸುಬ್ಬಯ್ಯ ತಾನು ಇನ್ನು ಮುಂದೆ ಹಾಡುವುದಿಲ್ಲ ವೆಂದು ಪ್ರಮಾಣ ಮಾಡಿಸುವ ತ್ರಂತ ಕಥೆಗೆ ಪೂರಕವಾಗಿದೆ.

ಮೇಲಿನಂತೆ ತಮ್ಮ ವಸ್ತುಗಳ ತಾತ್ವಿಕತೆಗೆ ತಕ್ಕಂತೆ ತಂತ್ರಗಳನ್ನು ಬಳಸಿ ಇಬ್ಬರು ಕಥೆ ಬೆಳಸಿದ್ದಾರೆ.

೫.೪ ಪಾತ್ರ ವಿಶ್ಲೇಷಣೆ.

ಯಾವುದೇ ಒಂದು ಸಾಹಿತ್ಯ ಕೃತಿಯಲ್ಲಿ ಆದರಲ್ಲೂ ಮುಖ್ಯವಾಗಿ ಕಾದಂಬರಿಗಳ ಯಶಸ್ಸಿನಲ್ಲಿ ಪಾತ್ರಗಳದ್ದು ಅಗ್ರಸ್ಥಾನ. ಕಥೆಯ ಬೆಳವಣಿಗೆ ಪಾತ್ರಗಳ ಸೃಷ್ಟಿ ಪ್ರಧಾನವಾದದ್ದು ಇಂತಹ ಪಾತ್ರಗಳ ಸೃಷ್ಟಿಸುವಲ್ಲಿ ಗೊರೂರು ಮತ್ತು ತ.ರಾ.ಸು ಇಬ್ಬರು ನೈಪುಣ್ಯತೆ ಪಡೆದವರು. ಗೊರೂರು ಕಾದಂಬರಿ ರಚನಾ ಸಂಖ್ಯೆ ಕಡಿಮೆಯಿದ್ದು ತಮ್ಮ ಜೀವನದ ಅನುಭವ ಜಗತ್ತನ್ನು ತಮ್ಮ ಕಾದಂಬರಿಗಳ ನೂರಾರು ಪಾತ್ರಗಳಲ್ಲಿ ತುಂಬಿದ್ದಾರೆ. ಜನಪ್ರಿಯ ಕಾದಂಬರಿಕಾರಲ್ಲಿ ಒಬ್ಬರಾದ ತ.ರಾ.ಸು ಸುಮಾರು ಎಪ್ಪತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿ ಅವುಗಳಲ್ಲಿ ವಿವಿಧತೆಯ ಸಾವಿರಾರೂ ಪಾತ್ರಗಳಿಗೆ ಜೀವತುಂಬಿದ್ದಾರೆ. ಬದುಕ್ಕನ್ನು ಎಷ್ಟು ವ್ಯಾಪಕವಾಗಿ ನೋಡಿದ್ದಾರೆ ಎನ್ನುವುದಕ್ಕೇ ಅವರ ಪಾತ್ರ ಚಿತ್ರಣಗಳೇ ಸಾಕ್ಷಿ. ತ.ರಾ.ಸು ಮತ್ತು ಗೊರೂರರಿಬ್ಬರು ತಮ್ಮ ಕಾದಂಬರಿಗಳ ಪಾತ್ರಗಳ ಮೂಲಕ ಒಂದು ವಿಶಿಷ್ಟ ಬದುಕನ್ನೆ ಚಿತ್ರಿಸುತ್ತಾರೆ. ಇವರಿಬ್ಬರು ಬದುಕನ್ನು ಗ್ರಹಿಸುವ ಕ್ರಮದಲ್ಲಿ ಪಾತ್ರಗಳನ್ನು ಕಡೆದು ನಿಲ್ಲಿಸುತ್ತಾರೆ. ಪ್ರತಿಯೊಂದು ಪಾತ್ರಗಳು ಕಾದಂಬರಿಗಳ ಒಂದು ಅಂಶವೇ ಆಗಿಬಿಡುತ್ತವೆ.

ಹೇಮಾವತಿಯಲ್ಲಿ ಎಲ್ಲಾ ಪಾತ್ರಗಳು ಮಹತ್ವ ಸ್ಥಾನವಹಿಸಿವೆ ಆದರೂ ಲೇಖಕರ ಲಕ್ಷ್ಯ ಹೆಚ್ಚು ಕಾದಂಬರಿ ಶೀರ್ಷಿಕೆಯಂತೆ ಕಥಾನಾಯಕಿ ಹೇಮಾವತಿ ಪಾತ್ರದ ಮೇಲೆಯ ಈ ಪಾತ್ರದ ಮೂಲಕವೇ ಕಾವೇರಿ ಅಗ್ರಹಾರದ ವ್ಯೆವಸ್ಥೆ ತೆರದು ಕೊಳ್ಳುತ್ತದೆ. ಇಲ್ಲಿ ಬರುವ ಪ್ರತಿಯೊಂದು ಪಾತ್ರಗಳು ಸಾಚ, ಸಾರ್ವಕಾಲಿಕ ಪಾತ್ರಗಳೇ ಆಗಿವೆ ಈ ಕಾದಂಬರಿಯಲ್ಲಿ ಕಂಡು ಬರುವ ಪ್ರಮುಖ ಪಾತ್ರಗಳೆಂದರೆ ರಾಮಣ್ಣ ಪೆರುಮಾಳ, ಸಾಹುಕಾರ ಶಠಾರಿ, ಸುಬ್ಬಭಟ್ಟ, ಸುಂದರ, ಆನಂದ, ಹೇಮಾವತಿ, ರಂಗನಾಯಕಿ, ವಾಸು, ಕಾಳ, ಚೆನ್ನಿ, ಮುಂತಾದವುಗಳು ಬ್ರಾಹ್ಮಣ ದಲಿತರ ಒಟ್ಟು ಜೀವನವನ್ನು ತತ್ಕಾಲೀನ ವಾಸ್ತವಿಕತೆ ಜೊತೆಗಿಟ್ಟು ನೋಡಿ ಪಾತ್ರಗಳನ್ನು ಸೃಷ್ಟಿಸಲಾಗಿದೆ. ಹೇಮಾವತಿಯ ಪ್ರತಿಯೊಂದು ಪಾತ್ರಗಳು ಮಾನವನ ವರ್ತನೆ ಮತ್ತು ಸ್ವಭಾವದ ವೈಚಿತ್ರ್ಯವನ್ನು ಸಂದರ್ಭಾನುಸಾರಿಯಾಗಿ ಚಿತ್ರಿಸಲಾಗಿದೆ. ಎಲ್ಲಾಪ್ರತಗಳು ಜೀವನದ ವಿವಿಧ ಆಯಾಮಗಳನ್ನು ಬಿಂಬಿಸುತ್ತವೆ. ಪಾತ್ರಗಳ ಮೂಲಕವೇ ಸಮಾಜ ವಿಮರ್ಶೆಗೆ ಗೊರೂರು ತೊಡಗುತ್ತಾರೆ. ಹಂಸಗೀತೆಯಲ್ಲಿ ಹತ್ತಾರು ಪಾತ್ರಗಳು

ಕಂಡು ಬಂದರು ವೆಂಕಟಸುಬ್ಬಯ್ಯನ ಪಾತ್ರ ಇಡೀ ಕಾದಂಬರಿಯನ್ನೇ ಆವರಿಸಿ ಬಿಟ್ಟಿದೆ ಇನ್ನುಳಿದ ಪಾತ್ರಗಳು ವೆಂಕಟಸುಬ್ಬಯ್ಯನ ಪಾತ್ರಕ್ಕೆ ಪೋಷಕವಾಗಿ ಬರುತ್ತವೆ.ಇದರಲ್ಲಿ ಲಿಂಗಾಜೋಯಿಸರು, ಮುರುಗೇಂದ್ರಪ್ಪ, ಗೋಪಾಲಚಾರ್ರು, ಟಿಪ್ಪು ಮೊದಲಾದ ಪಾತ್ರಗಳು ಪ್ರಮುಖವಾಗುತ್ತವೆ. ಈ ಎಲ್ಲಾ ಪಾತ್ರಗಳು ತಮ್ಮ ಮನೋಧರ್ಮಕ್ಕನುಸಾರವಾಗಿ ಕಾದಂಬರಿಯಲ್ಲಿ ವರ್ತಿಸುತ್ತವೆ. ವೆಂಕಟಸುಬ್ಬಯ್ಯನ ಪಾತ್ರದ ಸುತ್ತ ಹೆಣೆಯಲಾದ ಪಾತ್ರಗಳೆಂದರೆ ಸೋಧರ ಮಾವ ಅನಂತಯ್ಯ, ಸದಾನಂದಬುವಾ, ಚಂದ್ರಸಾನಿ ಪಾತ್ರಗಳು.

ಹೇಮಾವತಿ ಮತ್ತು ಹಂಸಗೀತೆಯಲ್ಲಿ ಕೆಲ ಪಾತ್ರಗಳ ಮನೋಧರ್ಮದಲ್ಲಿ ಸಾಮ್ಯ-ವೈಶಮ್ಯಗಳ ಮುಖಾಮುಖಿಯಾಗುತ್ತದೆ. ಈ ಎರಡು ಕಾದಂಬರಿಗಳಲ್ಲಿ ಸಂಗೀತ ಸಾಧನೆಯ ಹಾದಿಯಲ್ಲಿ ಹೊರಟ ಪಾತ್ರಗಳು ವೆಂಕಟಸುಬ್ಬಯ್ಯ ಮತ್ತು ಚೆನ್ನಿ. ವೆಂಕಟಸುಬ್ಬಯ್ಯ ಜಾತಿಯಲ್ಲಿ ಬ್ರಾಹ್ಮಣ ಕುಲದವನು. ಚೆನ್ನಿ ಕೀಳು ಜಾತಿಯ ಹೊಲೆಯರ ಹೆಣ್ಣುಮಗಳು ಈ ಎರಡು ಪಾತ್ರಗಳು ಹಲವು ಅಡೆತಡೆಗಳನ್ನು ಮೀರಿ ಸಾಧನೆಯಹಂತವನ್ನೇರೀ ನಿಲ್ಲುತ್ತವೆ. ಗೊರೂರು ಚೆನ್ನಿ ಸಂಗೀತಕಲಿಕೆಯಲ್ಲಿ ಮೇಲು ಸಮುದಾಯದ ವಿರೋಧವನ್ನು ಬಿಟ್ಟರೆ ಮತ್ತು ಕೀಳು ಜಾತಿಯ ಹೆಣ್ಣನ್ನು ಆ ಸ್ಥಾನದಲ್ಲಿ ಕಾಣಲು ಅಸಹ್ಯಪಟ್ಟುಕೊಳ್ಳೋ ಮೇಲು ವರ್ಗದ ನೀಚ ಮನಸ್ಥಿತಿ ವ್ಯಕ್ತಿಗಳ ತೊಂದರೆಗಳನ್ನು ಮಾತ್ರ ಚಿತ್ರಿಸಿ ಕಾದಂಬರಿಯಲ್ಲಿ ಚೆನ್ನಿ ಬಗೆಗಿನ ಹೆಚ್ಚಿನ ವಿವರಗಳಿಗೋಗದೆ ಅವಳ ಸಾಧನೆಯ ನಂತರ ಬದುಕಿನಲ್ಲಿ ಅವಳಿಗೆ ಲಭಿಸೋ ಮನ್ನಣೆಗಳ ಅವಳ ಜೀವನ ಸುಖಾಂತವಾಗುವುದನ್ನು ಚಿತ್ರಿಸುತ್ತಾ ಹೋಗುತ್ತಾರೆ. ಆದರೆ ವೆಂಕಟಸುಬ್ಬಯ್ಯ ಪಾತ್ರ ಪ್ರಾರಂಭದಿಂದಲೂ ಹಲವೂ ಅಡೆತಡೆಗಳ ಮಧ್ಯೆ ತೊಳಲಾಡುತ್ತಲೇ ಚಿತ್ರಸುತ್ತಾ ಹೋಗುತ್ತಾರೆ. ವೆಂಕಟಸುಬ್ಬಯ್ಯನ ಪಾತ್ರ ಸಂಗೀತದ ಹಸಿವಿನ ಜೊತೆಗೆ ಪ್ರೇಮ-ಕಾಮದ ಹಸಿವಿನ ಗೋಜಿಗೆ ಸಿಲುಕಿಕ್ಕೊಳ್ಳುತ್ತದೆ. ಕೊನೆಗೆ ಎಲ್ಲವ ಮಿರಿ ಸಾಧನೆ ಹಂತ ತಲುಪಿದರೂ ತನ್ನ ಸಂಗೀತ ವಿಧ್ಯೆಗೆ ಚ್ಯುತಿ ಬರುತ್ತದೆ ಎಂದು ಹೆದರಿ ನಾಲಿಗೆ ಕತ್ತರಿಸಿಕೊಂಡು ಮರಣದ ಹಾದಿಹಿಡಿದು ದುರಂತ ಪಾತ್ರವಾಗುತ್ತದೆ. ಇಬ್ಬರು ಲೇಖಕರು ವೆಂಕಟಸುಬ್ಬಯ್ಯ ಮತ್ತು ಚೆನ್ನಿಯರಲ್ಲಿ ಅಡಗಿರುವ ಸುಪ್ತ ಸಂಗೀತ ವಿದ್ಯೆಯನ್ನು ಗುರುತಿಸುತ್ತಾರೆ. ಸಂಗೀತ ಕಲಿಕೆಯ

ಬಗೆಗೆ ಆಸಕ್ತಿಗಳನ್ನು ಪ್ರತಿಪಾದಿಸುತ್ತಾರೆ. ಗೊರುರು ಸಾಮಾಜಿಕ ವಲಯದ ರಂಗಮಂದಿರ, ಸಿನಿಮಾ ಮಂದಿರಗಳಲ್ಲಿ ಬಿತ್ತರಿಸಿದರೆ, ತ.ರಾ.ಸು ವೆಂಕಟಸುಬ್ಬಯ್ಯನ ಸಂಗೀತ ಕಲೆಯ ಬೆರಗನ್ನು ದೇವಾಲಯಗಳಲ್ಲಿ ಬಿತ್ತರಿಸುತ್ತಾರೆ.

ಹೇಮಾವತಿಯಲ್ಲಿ ಕೆಳವರ್ಗದ ಚೆನ್ನಿ ಅಭಿನವ ಶಾರದೆಯಾಗುತ್ತಾಳೆ. ಪಂಚಮರ ಉದ್ಧಾರ ಕ್ರಿಯೆ ಚೆನ್ನಿ ಪಾತ್ರದ ಮೂಲಕ ನಡೆಯುತ್ತದೆ. ಹಂಸಗೀತೆಯಲ್ಲಿ ಮೇಲು ವರ್ಗದ ವೆಂಕಟಸುಬ್ಬಯ್ಯನೇ ಬೈರವಿ ವೆಂಕಟಸುಬ್ಬಯ್ಯನಾಗಿ ವಿದ್ವಾನ್ ಆಗುತ್ತಾನೆ. ಇನ್ನೂ ಈ ಎರಡು ಪಾತ್ರಗಳು ಈ ಸಾಧನೆಯ ಹಂತ ತಲುಪಲು ಉತ್ತೇಜಕವಾಗಿ ನಿಂತ ಪಾತ್ರಗಳೆಂದರೆ, ಚೆನ್ನಿಗೆ ಆನಂದನೊಬ್ಬನೆ ಆಧಾರವಾಗಿ ನಿಂತರೆ, ವೆಂಕಟಸುಬ್ಬಯ್ಯನಿಗೆ ಬುವಾ, ಅನಂತಯ್ಯ, ಚಂದ್ರಸಾನಿ, ಪಾತ್ರಗಳು ಆಧಾರವಾಗಿ ನಿಲ್ಲುತ್ತವೆ. ಆನಂದ ಚೆನ್ನಿಗೆ ಸಂಗೀತ ಕಲಿಕೆಯಲ್ಲಿ ಯಾವ ತರಹದ ನೊವುಗಳನ್ನು ನೀಡುವುದಿಲ್ಲ. ಗೊರೂರು ಆನಂದ ಚೆನ್ನಿಗೆ ಸಂಗೀತ ಹೇಳಿಕೊಡುವ ಪ್ರಸಗವನ್ನು ಗೌಣವಾಗಿಸಿ ಬಿಡುತ್ತಾರೆ. ಗೊರೂರು ಆನಂದನನ್ನ ಕೊನೆವರೆಗೂ ಚೆನ್ನಿಯ ಜೀವನಸಾಧನೆಯಲ್ಲಿ ಮಾರ್ಗದರ್ಶಕನಾಗಿ ಉಳಿಸುತ್ತಾರೆ. ತ.ರಾ.ಸು ರವರಂತೆ ಮರಣದಡೆಗೆ ಆನಂದನ ಪಾತ್ರವನ್ನು ಕೊಂಡೊಯ್ಯುವುದಿಲ್ಲ.

ವೆಂಕಟಸುಬ್ಬಯ ಚಂದ್ರಸಾನಿಯಲ್ಲಿ ಮೋಹಕ್ಕೊಳಗಾಗಿ ರಾಗಗಳನ್ನು ಒತ್ತೆ ಇಟ್ಟು, ಸಾಧನೆಯ ಗುರಿಯನ್ನು ಮರೆತಾಗ ಅನಂತಯ್ಯ ಚಂದ್ರಸಾನಿಯಲ್ಲಿ ಬೇಡಿದಾಗ ಅವನ್ನನ್ನು ತೊರೆಯುವುದಾಗಿ ಕೇಳಿಕೊಂಡು ನಂತರ ಚಂದ್ರಸಾನಿ ವೆಂಕಟಸುಬ್ಬಯ್ಯನ ತೊರೆದು ಸಾವನ್ನಪ್ಪುತ್ತಾಳೆ ಅವಳ ಸಾವಿನ ನೋವಿನಲ್ಲಿ ತೊಳಲುತ್ತಿರುವ ಅವನಿಗೆ ಮತ್ತೆ ಸಾಧನೆಯ ಹಾದಿ ತೋರಿಸುವ ಅನಂತಯ್ಯನದು ಆದರ್ಶ ವ್ಯಕ್ತಿತ್ವದ ಪಾತ್ರ. ಅನಂತಯ್ಯನಂತೆ ವೃತ್ತಿಯಲ್ಲಿ ವೇಶ್ಯೆಯಾದರೂ ವೆಂಕಟಸುಬ್ಬಯ್ಯನಲ್ಲಿ ದಾಂಪತ್ಯ ಪ್ರೀತಿ ತುಂಬಿದ ಚಂದ್ರಸಾನಿ ತನ್ನಿಂದ ತನ್ನ ಪ್ರಿಯತಮನ ಸಾಧನೆಗೆ ಅಡ್ಡಿಯಾಗುತ್ತಿದೆ ಎಂದು ಅನಂತಯ್ಯನವರಿಂದ ತಿಳಿದು ವೆಂಕಟಸುಬ್ಬಯ್ಯ ಸಾಧನೆಗೆ ತನ್ನ ಪ್ರಾಣವನ್ನೇ ಅರ್ಪಿಸಿದ ಉದಾತ ಪ್ರೇಮಮಯಿ ಪಾತ್ರ ಚಂದ್ರಸಾನಿಯದು.

ಬಹುಮುಖ್ಯವಾಗಿ ವೆಂಕಟಸುಬ್ಬಯ್ಯ ಮತ್ತು ಚೆನ್ನಿಯಲ್ಲಿ ಅಡಗಿರುವ ಚೈತನ್ಯಕ್ಕೆ ಮೆರಗುನೀಡಿದರು. ಸದಾನಂದ ಬುವಾ ಮತ್ತು ಆನಂದ ಈ ಎರಡು ಪಾತ್ರಗಳು ಹಂಸಗೀತೆ ಮತ್ತು ಹೇಮಾವತಿ ಕಾದಂಬರಿಗಳಲ್ಲಿ ಬೈರಾಗಿ ಪಾತ್ರಗಳೆ, ಬುವಾ ಸಂಸಾರ ಸವಿಯ ಉಂಡು ತನ್ನ ಹೆಂಡತಿ ಓಡಿ ಹೋದಾಗಿನಿಂದ ಸಂಸಾರ ತ್ಯಜಿಸಿ ಬೈರಾಗಿಯಾದರೆ ಆನಂದ ಮದುವೆಯೆ ಆಗದೆ ಚೆನ್ನಿಯ ಸಾಧನೆಗೆ ಕೊನೆವರೆಗೂ ಹಾಗೆಯೇ ಉಳಿದ ಬೈರಾಗಿ ಬುವಾ ಸಿಡುಕ ವಿಚಿತ್ರ ಮನೋವೃತ್ತಿ ಉಳ್ಳವ ನಿಷ್ಠೂರವಾದಿ ಸಂಸಾರ ತ್ಯೆಜಿಸಿದ ಮೇಲೆ ಎಲ್ಲಂದರಲ್ಲಿ ಹೇಗೆಂದರೆ ಹಾಗೆ ನಡೆಯುವ ಆನಂದ ವಿಚಿತ್ರ ಮನಸ್ಥಿತಿಯವನಾದರೂ ಸಂಸಾರ ಹೊಂದಿದವನ್ನಲ್ಲ ಊರಿನಲ್ಲಿ ಹೆಣ್ಣು ಮಕ್ಕಳಿಗೆ ಸಂಗೀತ ಪಾಠ ಹೇಳಿಕೊಂಡು ಊರ ದೇವಾಸ್ಥಾನ ಕಟ್ಟೆಗಳಲ್ಲಿ ಹೇಗೆಂದರೆ ಹಾಗೆ ಯಾವ ಆಸೆ ಆಮಿಶಗಳಿಗೆ ಒಳಗಾಗದೆ ಜೀವನ ನಡೆಸುವವ ತ.ರಾ.ಸು ಬುವನನ್ನು ದುರಂತತೆಯಡೆಗೆ ಕೊಂಡುಯ್ಯುತ್ತಾರೆ. ಬುವಾ ವೆಂಕಟಸುಬ್ಬಯ್ಯನಿಗೆ ತಿರುಪೆ ಎತ್ತಿಸಿ ಹಲವು ಸಂಕಷ್ಟಗಳ ನೀಡಿ ನಿಷ್ಠೂರ ನುಡಿಗಳಿಂದ ನುಡಿದು ಸಂಗೀತವನ್ನು ಹೇಳಿಕೊಡುತ್ತಾನೆ. ಆನಂದ ಮತ್ತು ಬುವಾ ಎರಡು ಪಾತ್ರಗಳು ಅದಮ್ಯ ಶಕ್ತಿಯುಳ್ಳವು ಸದುದ್ದೇಶ ಭಾವನೆಯ ಗುರುಸ್ಥಾನವನ್ನು ನಿರ್ವಹಿಸಿದವು ಎರಡು ಕೃತಿಗಳಲ್ಲಿಯೂ ಪಾತ್ರಗಳ ಆದರ್ಶವನ್ನು ವೈಭವೀಕರಿಸಿದ ಅಂಶಗಳು ಕಾಣಸಿಗುತ್ತವೆ. ಮಧ್ಯಮವರ್ಗದ ಜೀವನ ಕುರಿತು ಅವುಗಳ ಕೌಟುಂಬಿಕ ಜೀವನದ ಸುಖ ದುಃಖಗಳು, ಬಾಂದವ್ಯ ಸಮಸ್ಯೆಗಳ ಚಿತ್ರಿಸಿದರೆ ತ.ರಾ.ಸು ಉದ್ದಾತ್ತ ವ್ಯಕ್ತಿ ವೆಂಕಟಸುಬ್ಬಯ್ಯ ಅತೀ ಭಾವುಕತೆಯಿಂದ ಪರಿಪಕ್ವವಾಗುವ ಪ್ರಕ್ರಿಯೆಯನ್ನು ಪಾತ್ರಗಳ ಮೂಲಕ ಚಿತ್ರಿಸುತ್ತಾರೆ. ಗೊಗೂರು ಸಮುದಾಯದ ನಡುವೆ ಅರ್ಥಪೂರ್ಣ ಬಾಂದವ್ಯಗಳನ್ನು ಪಾತ್ರಗಳ ಮೂಲಕ ಹೆಣೆಯುತ್ತಾರೆ. ತ.ರಾ.ಸು ಸಂಪ್ರಾದಯ, ಪದ್ಧತಿ, ಮೌಲ್ಯ ನಿರ್ಣಯಗಳನ್ನು ಪಾತ್ರಗಳಲ್ಲಿ ಚಿತ್ರಿಸುತ್ತಾರೆ. ಒಟ್ಟಿನಲ್ಲಿ ಇಬ್ಬರೂ ಕಾದಂಬರಿಕಾರರು ಸಹಜತೆಗೆ ಭಂಗಬಾರದಂತೆ ಪಾತ್ರಗಳನ್ನು ಪಡಿಮೂಡಿಸಿದ್ದಾರೆ.

ಅಡ್ಡಿಟಿಪ್ಪಣಿಗಳು:

೧. 'ಗೊರೂರು ಗೌರವ ಗ್ರಂಥ', ಹಾ.ಮಾ.ನಾಯಕ.ಪುಟ-೧೦೩.

೨. 'ಹೇಮಾವತಿ', ೫ನೇ ಮುದ್ರಣ ೨೦೦೪, ಗೊರೂರು ರಾಮಸ್ವಾಮಿ ಅಯ್ಯಂಗಾರ, ಪುಟ-೨೫.

೩. 'ಹಂಸಗೀತೆ', ೧೫ನೇ ಮುದ್ರಣ ೨೦೦೧, ತ.ರಾ.ಸು, ಪುಟ-೪೬.

೪. ಅದೇ, ಪುಟ-೪೭.

೫. ಅದೇ, ಪುಟ-೨೬.

೬. 'ಕನ್ನಡ ಸಾಹಿತ್ಯ ಕೋಶ', ೭ನೇ ಮುದ್ರಣ, ೨೦೦೬, ಸಂ.ರಾಜಪ್ಪದಳವಾಯಿ, ಪುಟ-೩೨೨.

೭. 'ಹಂಸಗೀತೆ', ೧೫ನೇ ಮುದ್ರಣ ೨೦೦೧, ತ.ರಾ.ಸು, (ಎರಡು ಮಾತು).

೮. 'ಹೇಮಾವತಿ', ೫ನೇ ಮುದ್ರಣ ೨೦೦೪, ಗೊರೂರು ರಾಮಸ್ವಾಮಿ ಅಯ್ಯಂಗಾರ, ಪುಟ-೮೯.

೯. ಅದೇ, ಪುಟ-೯೨.

೧೦. 'ಹಂಸಗೀತೆ', ೧೫ನೇ ಮುದ್ರಣ ೨೦೦೧, ತ.ರಾ.ಸು, ಪುಟ-೧೬.

೧೧. ಅದೇ, ಪುಟ-೨೬.

೧೨. 'ಹೇಮಾವತಿ', ೫ನೇ ಮುದ್ರಣ ೨೦೦೪, ಗೊರೂರು ರಾಮಸ್ವಾಮಿ ಅಯ್ಯಂಗಾರ, ಪುಟ-೦೯.

೧೩. ಅದೇ, ಪುಟ-೮೮

೧೪. ಅದೇ, ಪುಟ-೨೨೫.

೧೫. 'ಹಂಸಗೀತೆ', ೧೫ನೇ ಮುದ್ರಣ ೨೦೦೧, ತ.ರಾ.ಸು, ಪುಟ-೧೨೯.

೧೬. ಅದೇ, ಪುಟ-೧೬೬.

೧೭. ಅದೇ, ಪುಟ-೧೬೭.

೧೮. 'ಪಾಶ್ಚಾತ್ಯ ಸಾಹಿತ್ಯ ಮಾರ್ಗ', ಡಾ. ಸರೋಜಿನಿ ಚವಲಾರ, ಮೊದಲ

ಮುದ್ರಣ, ೧೯೯೧, ಪುಟ-೯೦.

೧೯. 'ಸಾಲುದೀಪಗಳು' , ಸಂ.ಜಿ.ಎಸ್. ಸಿದ್ದಲಿಂಗಯ್ಯ, ಪುಟ-೧೯೦.

೨೦. 'ಹೇಮಾವತಿ', ೫ನೇ ಮುದ್ರಣ ೨೦೦೪, ಗೊರೂರು ರಾಮಸ್ವಾಮಿ ಅಯ್ಯಂಗಾರ, ಪು-೦೭.

೨೧. ಅದೇ, ಪುಟ-೦೭.

೨೨. ಅದೇ, ಪುಟ-೧೨.

೨೩. ಅದೇ, ಪುಟ-೨೬.

೨೪. ಅದೇ, ಪುಟ-೭೬

೨೫. ಅದೇ, ಪುಟ-೧೨೯

೨೬. 'ಹಂಸಗೀತೆ', ೧೫ನೇ ಮುದ್ರಣ ೨೦೦೧, ತ.ರಾ.ಸು, ಪುಟ-೨೪.

೨೭. ಅದೇ, ಪುಟ-೪೪

೨೮. ಅದೇ, ಪುಟ-೪೫

೨೯. ಅದೇ, ಪುಟ-೭೨

೩೦. 'ಕಾದಂಬರಿ ವಸ್ತು ಮತ್ತು ತಂತ್ರ', ಗಿರಡ್ಡಿ ಗೋವಿಂದರಾಜು, ಪುಟ-೨.

ಅಧ್ಯಾಯ-೬

ಸಮಾರೋಪ

ಆಧುನಿಕ ಕನ್ನಡ ಕಾದಂಬರಿಗಳ ಸಂಖ್ಯೆ ಈಗ ಗಮನಾರ್ಹ ಮಟ್ಟದಲ್ಲಿ ಬೆಳೆದಿದೆ ಅವುಗಳ ವಸ್ತು ಮತ್ತು ತಂತ್ರಗಳಲ್ಲಿಯೂ ಹೊಸವಿಚಾರ ವಿನ್ಯಾಸಗಳು ಮೈತಾಳಿವೆ ಈ ನಿಟ್ಟಿನಲ್ಲಿ ಗೊರೂರರ ಮತ್ತು ತ.ರಾ.ಸು ಪ್ರತಿಭೆ ಬಹುಮುಖ್ಯವಾದುದು. ವಿಶೇಷವೆಂದರೆ ಇವರೀರ್ವರು ಒಂದೇ ತಲೆಮಾರಿನವರಲ್ಲ ನವೋದಯ ಮತ್ತು ಪ್ರಗತಿಶೀಲ ಕಾಲಘಟ್ಟದಲ್ಲಿ ಗುರುತಿಸಿಕೊಂಡವರು. ಗೊರೂರು ಮತ್ತು ತ.ರಾ.ಸು ರವರ ಹೇಮಾವತಿ ಮತ್ತು ಹಂಸಗೀತೆ ಕಾದಂಬರಿಗಳನ್ನು ಹಲವು ನೆಲೆಗಳ ಅಧ್ಯಯನಕ್ಕೆ ಒಳಗು ಮಾಡಿ ಒರೆಹಚ್ಚಿ ನೋಡುವ ಪ್ರಯತ್ನವನ್ನು ಇದುವರೆಗೆ ಮಾಡಲಾಯಿತು. ಬ್ರಾಹ್ಮಣ ಸಂಪ್ರಾದಯಸ್ತ ಕೌಟುಂಬಿಕ ನೆಲೆಯಿಂದ ಬಂದಂತಹ ಗೊರೂರು ಮತ್ತು ತ.ರಾ.ಸು ಹೇಮಾವತಿ ಮತ್ತು ಹಂಸಗೀತೆಯಲ್ಲಿ ಸಂಗೀತದ ಕುರಿತಾದ ಒಲವು, ನಿಲವು ಹಾಗೂ ಚಿಂತನೆಗಳನ್ನು ಕುರಿತು ತೌಲನಿಕ ವಿಶ್ಲೇಷಣೆಗೆ ತೊಡಗಿಸಲಾಗಿದೆ. ಯಾವುದೇ ಒಬ್ಬ ಕಾದಂಬರಿಕಾರ ಅಥವಾ ಲೇಖಕ ತಾನು ಸಾಹಿತ್ಯ ರಚನೆಗೆ ತೊಡಗಿಸಿಕೊಳ್ಳುವಾಗ. ಅವನಿಗೆ ತನ್ನದೇ ಆದ ಪರಿಸರ ಪ್ರೇರಣೆ ಹಾಗೂ ಪ್ರಭಾವಳಿರುತ್ತವೆ. ಇಂತಹ ಪ್ರೇರೆಣೆಯಿಂದಲೇ ಸ್ಫೂರ್ತಿಗೊಂಡು ತನ್ನ ಅನುಭವನ್ನು ಅಭಿವ್ಯಕ್ತಗೊಳಿಸುತ್ತಾನೆ. ಅದೇ ರೀತಿಯಲ್ಲಿ ಗೊರೂರು ಮತ್ತು ತ.ರಾ.ಸು ರವರಿಗೂ ತಮ್ಮ ಸುತ್ತಮುತ್ತಲಿನ ಪರಿಸರ ಸ್ವಾತಂತ್ರ್ಯ ಚಳುವಳಿ ಗಾಂಧೀಪ್ರಭಾವ ಪ್ರೇರಣೆಗಳನ್ನು ಕಾಣಬಹುದು ಈ ಹಿನ್ನೆಲೆಯಲ್ಲಿ ಇವರ ಕೃತಿಗಳ ತೌಲನಿಕ ಅಧ್ಯಯನ ಮಾಡಲಾಗಿದೆ.

ಕನ್ನಡ ಸಾಹಿತ್ಯ ವಾಹಿನಿಗೆ ಒಂದು ಹೊಸ ಹೊಳಹು ನೀಡಿದ್ದು ಕಾದಂಬರಿ ಪ್ರಕಾರ. ಅನ್ಯಭಾಷ ಪ್ರೇರಣೆಯಿಂದ ತನ್ನದೇ ಆದ ಸಂಸ್ಕೃತಿಯ ವಿಚಾರಗಳನ್ನು ತುಂಬಿಕೊಂಡು ರಚನೆಗೊಂಡ ವಿಶಿಷ್ಟ ಪ್ರಕಾರ. ಈ ವಿಶಿಷ್ಟ ಪ್ರಕಾರದಲ್ಲಿ ಕಾದಂಬರಿ ರಚನೆಗೆ ತೊಡಗಿಸಿಕೊಂಡ ಗೊರೂರು ಮತ್ತು ತ.ರಾ.ಸು ರವರ ಹೇಮಾವತಿ ಮತ್ತು ಹಂಸಗೀತೆ ಯಲ್ಲಿನ ವಸ್ತುನಿರ್ವಹಣೆ, ಸನ್ನಿವೇಶನಿರ್ಮಾಣ, ಭಾಷೆ ಮತ್ತು ತಂತ್ರ, ಪಾತ್ರವಿಶ್ಲೇಷಣೆ ಈ ನಿಟ್ಟಿನಲ್ಲಿ ಈ ಎರಡು ಕೃತಿಗಳ ತೌಲನಿಕ ಸಮೀಕ್ಷೆ ನಡೆಸಲಾಗಿದೆ.

ಗೊರೂರು ನವೋದಯ ಸಾಂಪ್ರದಾಯಿಕ ಕಾಲಘಟ್ಟದಲ್ಲಿ ಸಾಹಿತ್ಯಕೃಷಿಗೆ ತೊಡಗಿಸಿಕೊಂಡರು ಹೇಮಾವತಿಯಲ್ಲಿ ಸಾಂಪ್ರದಾಯ ಮೀರಿ ನಿಂತು ಕೆಳಜಾತಿ ಹೆಣ್ಣು ಮಗಳು ಸಂಗೀತ ಸಾಧನೆಗೆ ಏರುವ ಚಿಂತನೆಗಳಿಗೆ ತೊಡಗಿಸುವ, ಪ್ರಗತಿಶೀಲ ಕಲಾಘಟ್ಟದಲ್ಲಿ ಸಾಹಿತ್ಯ ಕೃಷಿಗೆ ತೊಡಗಿಸಿಕೊಂಡರು ಹಂಸಗೀತೆಯಲ್ಲಿ ಸಾಂಪ್ರದಾಯಿಕ ಮನಸ್ಥಿತಿಯಲ್ಲಿ ಸಂಗೀತವನ್ನು ಗ್ರಹಿಸುವ ತ.ರಾ.ಸು ಇವರೀರ್ವರ ಈ ಎರಡು ಕಾದಂಬರಿಗಳಲ್ಲಿ ಸೌಮ್ಯ–ವೈಶಮ್ಯಗಳ ಕುರಿತ ತೌಲನಿಕ ಅಧ್ಯಯನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯಲ್ಲಿ ಪ್ರಸ್ತಾಪಿಸಿದಂತೆ ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಈ ಎರಡು ಕೃತಿಗಳು ಇನ್ನು ಹಲವು ಚರ್ಚೆಗಳಿಗೆ ಅವಕಾಶ ಕಲ್ಪಿಸಿಕೊಡುತ್ತವೆ ಎಂಬುದು ನನ್ನ ನಿಲುವು.

ಅನುಬಂಧಗಳು

ಆಕರ ಗ್ರಂಥಗಳು

೧.೧ ಹೇಮಾವತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ,

೧.೨ ಹಂಸಗೀತೆ, ತ.ರಾ.ಸು,

೧.೩ ಒಡಲಾಳ, ದೇವನೂರುಮಹಾದೇವಯ್ಯ

೧.೪ ಚೋಮನದುಡಿ, ಶಿವರಾಮಕಾರಂತ.

೧.೫ ಮಲೆಗಳಲ್ಲಿ ಮದುಮಗಳು, ಕುವೆಂಪು

೧.೬ ಸಂದ್ಯಾರಾಗ, ಅ.ನ.ಕೃ

ಪರಾಮರ್ಶನ ಗ್ರಂಥಗಳು

೧. 'ಪಾಶ್ಚಾತ್ಯ ಸಾಹಿತ್ಯ ಮಾರ್ಗ', ಡಾ.ಸರೋನಿಚವಲಾರ, ವಿವೇಕಪ್ರಕಾಶನ, ಹುಬ್ಬಳ್ಳಿ ೧೯೯೧.

೨. 'ಪರಂಪರೆ-ಪ್ರತಿರೋಧ' ವಿಮರ್ಶೆ, ಡಾ.ಸಿಎನ್.ರಾಮಚಂದ್ರನ್, ಮೊದಲಮುದ್ರಣ ೨೦೦೨, ಪ್ರಕಾಶಕರು ಸಂವಾದ ಮಲ್ಲಾಡಿಹಳ್ಳಿ-೫೭೭೩೦೧

೩. 'ಕನ್ನಡದಲ್ಲಿ ದಲಿತ ಬಂಡಾಯ ಕಾದಂಬರಿಗಳು ಒಂದು ಅಧ್ಯಯನ', (ಪಿ.ಎಚ್.ಡಿ.ಪ್ರಬಂಧ) ಡಾ॥ಎ.ಎಚ್.ಚಂದ್ರಶೇಖರ್. ಪ್ರಥಮ ಮುದ್ರಣ-೨೦೦೪ ಸ್ನೇಹಪ್ರಕಾಶನ ವಿಯನಗರ, ಮೈಸೂರು,

೪. 'ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ', ಡಾ.ಅರವಿಂದ ಮಾಲಗತ್ತಿ, ಪ್ರಥಮ ಮುದ್ರಣ-೨೦೦೩, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು-೧೮.

೫. 'ಕನ್ನಡ ಸಾಹಿತ್ಯ ಚರಿತ್ರೆ', ಡಾ.ರಂ.ಶ್ರೀಮುಗಳಿ, ಮೊದಲಮುದ್ರಣ.೧೯೫೩, ಪ್ರಕಾಶಕರು: ಉಷಾ ಸಾಹಿತ್ಯ ಮಾಲೆ, ಮೈಸೂರು ೧೯೭೧.

೬. 'ಕನ್ನಡ ಸಾಹಿತ್ಯ ಕೋಶ', ಸಂ.ರಾಜಪ್ಪದಳವಾಯಿ,೨೦೦೬ ಶ್ರೀ ರಾಘವೇಂದ್ರ, ಪ್ರಕಾಶನ ಚಿಕ್ಕಪೇಟೆ, ಬೆಂಗಳೂರು-೫೩,

೭. 'ಗೊರುರು ಕೃತಿಗಳು ಒಂದು ಸಾಂಸ್ಕೃತಿಕ ಅಧ್ಯಯನ' ಶಿವರಾಮೇಗೌಡ ನಾಗವಾರ, ಸಹ್ಯಾದ್ರಿ ಪ್ರಕಾಶನ ೧೯೭೮

೮. 'ಕುವೆಂಪು ಶೈಲಿ', ದೇಜಗೌ ಸಹ್ಯಾದ್ರಿ ಪ್ರಕಾಶನ-೧೯೯೧, ಕವಿ ಶೈಲ ಮುದ್ರಣಾಲಯ ಶ್ರಿಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು-೧೨.

೯. 'ಗೊರುರು ಗೌರವ ಗ್ರಂಥ', ಹಾ.ಮಾ.ನಾಯಕ, ಗೊರೂರು ಮಹಿಳೆಯರ ಬಳಗ: ಮೈಸುರು ೧೯೭೩.

೧೦. 'ದಲಿತ ಬಂಡಾಯ ಸಾಹಿತ್ಯ ಸಿದ್ಧಾಂತದ ನೆಲೆಗಳು', ಸಂ.ಮ.ನ.ಜವರಯ್ಯ, ಮೊದಲನೆ ಮುದ್ರಣ:೨೦೦೮.

೧೧. 'ಆಧುನಿಕ ಸಾಹಿತ್ಯ;ಕೆಲವು ಅಧ್ಯಯಗಳು', ಜಿ.ಕೆ.ರಮೇಶ್, ಪ್ರಜ್ವಲ ಪ್ರಕಾಶನ:ಮೈಸೂರು-೬

೧೨. 'ಸಮಗ್ರ ವಿಮರ್ಶೆ' ಸಂಪುಟ-೨, ಕಾದಂಬರಿ ಸಾಹಿತ್ಯ ಮತ್ತು ವಿಮರ್ಶೆ ಕುರಿತು, ಗಿಡ್ಡ ಗೋವಿಂದ ರಾಜು, ಪ್ರಥಮ ಮುದ್ರಣ ೨೦೦೧, ಮುದ್ರಣ: ಪೂರ್ಣಿಮ ಪ್ರಿಂಟರ್ಸ್,

೧೩. 'ನಾಡು-ನುಡಿಯ ರೂಪಕ ರಾಷ್ಟ್ರ ಆಧುನಿಕತೆ ಮತ್ತು ಕನ್ನಡದ ಮೊದಲ ಕಾದಂಬರಿಗಳು, ಶಿವರಾಮ ಪಡಿಕ್ಕಲ್ ಪ್ರಸಾರಾಂಗ ಮೊದಲ ಮುದ್ರಣ೨೦೦೧.

೧೪. 'ಚಿನ್ನದಗರಿ', ಸಂ.ಹಾ.ಮಾ.ನಾ., ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.ವಿಶ್ವವಿದ್ಯಾನಿಲಯ, ೧೯೭೪.

೧೫. 'ಸಾಹಿತ್ಯ ಮತ್ತು ಸಮಕಾಲೀನ ವಾಸ್ತವಿಕತೆ', ಡಾ||ಎಚ್.ತಿಪ್ಪೇರುದ್ರಸ್ವಾಮಿ ಮುದ್ರಕರು ಮೊದಲ ಮುದ್ರಣ-೧೯೭೯.

೧೬. 'ಭಾರತೀಯ ಕಾವ್ಯ ಮೀಮಾಂಸೆ', ಪ್ರೊ.ತೀ.ಸಂ.ಶ್ರೀಕಂಠಯ್ಯ, ಪ್ರಧಾನ ಸಂಪಾದಕರು. ಡಾ.ಕೆ.ವಿ ಪುಟ್ಟಪ್ಪ, ಪ್ರಸಾರಾಂಗ ಮೂಸೂರು ವಿಶ್ವವಿದ್ಯಾನಿಲಯ.

೧೭. 'ಸಾಹಿತ್ಯ ವಿಮರ್ಶೆ', ಡಾ.ಬಸವರಾಜ ಸಬರದ, ಪಲ್ಲವಿ ಪ್ರಕಾಶನ, ಗುಬ್ಬರ್ಗಾ, ಪ್ರಥಮ ಮುದ್ರಣ:೨೦೦೫.

೧೮. 'ಕನ್ನಡ ವಿಮರ್ಶೆಯ ಮಾರ್ಗ', ಪ್ರಧಾನ ಸಂಪಾದಕರು, ಪ್ರೊ.ಅರವಿಂದ ಮಾಲಗತ್ತಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ.

೧೯. 'ಕಾದಂಬರಿಗಳ ವಿಮರ್ಶೆ', ಪ್ರಧಾನ, ಸಂಪಾದಕರು ಡಾ.ಅರವಿಂದ ಮಾಲಗತ್ತಿ, ಮೊದಲಮುದ್ರಣ-೨೦೦೦, ಪ್ರಕಾಶಕರು: ಪ್ರೋಲಕ್ಷ್ಮೀನಾರಾಯಣ ಆರೋರಾ, ನಿದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ.

೨೦. 'ದೇವುಡು ಅವರ ಸೃಜನಶೀಲ ಸಾಹಿತ್ಯ', ಶ್ರೀ ಸಿ.ಎಸ್.ಶಿವಕುಮಾರಸ್ವಾಮಿ.

೨೧. 'ಕಾದಂಬರಿ ವಸ್ತು ಮತ್ತು ತಂತ್ರ', ಡಾ. ಗಿರಡ್ಡಿ ಗೋವಿಂರಾಜ ೧೯೮೭, ಸ್ನೇಹ ಪ್ರಕಾಶನ, ಬೆಂಗಳೂರು.

೨೨. 'ಸಾಹಿತ್ಯ ವಿಮರ್ಶೆ'-೧೯೮೧, ನಾರಾಯಣ.ಕೆ.ವಿ(ಸಂ)೧೯೮೩ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೩. 'ಸಮಕಾಲಿನ ಕಥೆ, ಕಾದಂಬರಿ, ಹೊಸ ಪ್ರಯೋಗಗಳು', ಅಮೂರ.ಜಿ.ಎಸ್, ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.

೨೪. 'ನವೋದಯ ವಿಮರ್ಶೆ ತಾತ್ವಿಕ ನಿಲವುಗಳು', ಡಾ.ಕೇಶವಶರ್ಮ.ಕೆ ೧೯೯೦, ಜನವಾದಿ ಪ್ರಕಾಶನ, ಗುಂಡ್ಮಿ.

೨೫. 'ಸಾಹಿತ್ಯ ಸಂವಾದ', ಡಾ.ಬಿ.ವಿ.ವೈಕಂಟರಾಜು, ಮೊದಲ ಮುದ್ರಣ-೨೦೦೨. ಸನತ್ ಪ್ರಕಾಶನ ಶ್ರೀರಾಂಪುರ ಬೆಂಗಳೂರು.

೨೬. 'ವಿಮರ್ಶೆಯ ಪರಿಭಾಷೆ', ಓ.ಎಲ್. ನಾಗಭೂಷಣ ಸ್ವಾಮಿ, ಪರಿಸರ ಸಾಹಿತ್ಯ ಪ್ರಕಾಶನ ಶಿವಮೊಗ್ಗ ೧೯೮೫.

೨೭. 'ಸಾಹಿತ್ಯ ರತ್ನ ಸಂಪುಟ', ಎನ್.ಎಸ್,ಲಕ್ಷ್ಮಿನಾರಯಣ ಭಟ್ಟ, ಮೊದಲ ಮುದ್ರಣ-೨೦೦೪, ವಸಂತ ಪ್ರಕಾಶನ, ತುಳಸಿವನ, ಬೆಂಗಳೂರು-೫೬೦೦೫೩.

೨೮. ‘ಗಮನ’, ಸಿ.ಎಸ್.ನಾಗಭೂಷಣ, ಮುದ್ರಣ:ನ್ಯಾಷನಲ್ ಪ್ರೆಸ್, ಹಾಸನ.

೨೯. ‘ಕುವೆಂಪು ಕಾದಂಬರಿ ಎರಡು ಅಧ್ಯಯನಗಳು’, ಟಿ.ಪಿಅಶೋಕ, ಮೊದಲ ಮುದ್ರಣ೨೦೦೪. ಅಕ್ಷರ ಪ್ರಕಾಶನ ಹೆಗ್ಗೋಡು.

೩೦. ‘ಸಾಲುದೀಪಗಳು’, ಸಂ. ಜಿ.ಎಸ್.ಸಿದ್ದಲಿಂಗಯ್ಯ, ಪ್ರಕಾಶಕರು; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೧. ‘ಗೋರೂರು ಸಾಹಿತ್ಯ ಸಮೀಕ್ಷೆ’, (ಗೊರೂರು ರಾಮಸ್ವಾಮಿ ಅಯ್ಯಂಗಾರ್ ಆಯ್ದ ಕೃತಿಗಳ ಅಧ್ಯಯನ), ಸಂ.ಎಸ್.ಚನ್ನಪ್ಪ, ಅರ್ಕಾವತಿ ಪ್ರಕಾಶನ, ಮೈಸೂರು.

೩೨. ‘ಸಾಹಿತ್ಯ ಪ್ರವೇಶ’, ಸಿ.ಪಿ.ಕೆ.

೩೩. ‘ಕನ್ನಡ ಸಾಹಿತ್ಯ ಸಂಗಾತಿ’, ಕೀರ್ತಿನಾಥ ಕುರ್ತಕೋಟಿ, ಮೊದಲ ಮುದ್ರಣ ೧೯೯೫, ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್ ಧಾರವಾಡ.

೩೪. ‘ಲಂಕೇಶ ರವರ ಟೀಕೆ–ಟೀಪ್ಪಣಿಗಳಲ್ಲಿ ರಾಜಕೀಯ ಗ್ರಹಿಕೆ’, ಎಂ.ಫಿಲ್, ಪದವಿಯ ಅಂಶಿಕ ಅವಶ್ಯಕತೆಗಾಗಿ ಕುವೆಂಪು ವಿಶ್ವವಿದ್ಯಾನಿಲಯ ಸಲ್ಲಿದ ಪ್ರೌಢ ಪ್ರಬಂಧ ೨೦೦೧, ಸಂಶೋದಕ ರಾಘವೇಂದ್ರ.ಕೆ

೩೫. ‘ಸಿರಿಸಂಪಗೆ’ ಮತ್ತು ನಾಗಮಂಡಲ:ಒಂದು ತೌಲನಿಕ ಅಧ್ಯಯನ, (ಅಪ್ರಕಟಿತ ಎಂ.ಫಿಲ್ ಪದವಿಗಾಗಿ), ಸಂಶೋಧಕರು ಸಿ.ಕೆ ನವೀನ.

೩೬. ‘ಬೆರಳ್‌ಗೆ–ಕೊರಳ್ :ಒಂದು ತೌಲನಿಕ ಅಧ್ಯಯನ’, (ಅಪ್ರಕಟಿತ ಎಂ.ಫಿಲ್ ಪದವಿಗಾಗಿ), ಸಂಶೋಧಕರು ಎ.ಸುರೇಶ್.

೩೭. ‘ಕುವೆಂಪು ಕಾನೂರು ಹೆಗ್ಗಡತಿ ಮತ್ತು ಟಾಲ್‌ಸ್ಟಾಯ್ ಅನ್ನಾಕರೇನಿನ:ಒಂದು ತೌಲನಿಕ ಅಧ್ಯಯನ’, (ಅಪ್ರಕಟಿತ ಎಂ.ಫಿಲ್ ಪದವಿಗಾಗಿ), ಸಂಶೋಧಕರು ಎಂ.ಪ್ರಕಾಶ್.

೩೮. ‘ಲಂಕೇಶರ ಕಥಾನ ಸಾಹಿತ್ಯದಲ್ಲಿ ಸಾಮಾಜಿಕ ಸ್ಥಿತ್ಯಂತರದ ಸ್ವರೂಪಗಳು’, ಪಿ.ಹೆಚ್..ಡಿ ಪದವಿಗಾಗಿ ಕುವೆಂಪು ವಿಶ್ವವಿದ್ಯಾನಿಲಯ ಸಲ್ಲಿಸದ ಮಹಾ ಪ್ರಬಂಧ ೨೦೦೮, ಸಂಶೋಧಕರು, ನಾಗೇಶ.ಬಿ.ಎಸ್.

೩೯. ‘ಕಾರಂತರ ಕಾದಂಬರಿಗಳಲ್ಲಿ ಸ್ತ್ರೀತ್ವದ ವಿಭಿನ್ನಮಾಧರಿಗಳು’ ಪಿ.ಹೆಚ್..ಡಿ ಪದವಿಗಾಗಿ ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸದ ಮಹಾ ಪ್ರಬಂಧ ೨೦೦೫. ಸಂಶೋಧಕ ರಾಜೇಂದ್ರ.ಟಿ.

೪೦. ಕನ್ನಡ ಕಾದಂಬರಿಗಳಲ್ಲಿ ಕೋಮುವಾದ ವಿಭಿನ್ನ ಸ್ವರೂಪಗಳು ಪಿ.ಹೆಚ್.ಡಿ ಪದವಿಗಾಗಿ ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ೨೦೦೭, ಸಂಶೋಧಕರು ವಿಠ್ಠಲ ಭಂಡಾರಿ.

೪೧. ‘ಡಾ.ಬೆಸಗರ ಹಳ್ಳಿ ರಾಮಣ್ಣರವರ ಕಥಾಸಾಹಿತ್ಯ-ಒಂದು ಅಧ್ಯಯನ ಎಂ.ಫಿಲ್ ಪದವಿಗಾಗಿ ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಸಲ್ಲಸಿದ ಪ್ರಬಂಧ ೧೯೯೫, ಸಂಶೋಧಕರು,ನಾಗಮಣಿ ಎಸ್.

೪೨. ‘ಅರ್ಥಲೋಕ’, ಸಂ.ಜಿ.ಎಸ್.ಅಮೂರ, ೧೯೯೮.

೪೩. ‘ಸಾಹಿತ್ಯ ವಿಮರ್ಶೆ’, ಸಂ.ಅವಧಾನಿ.ಜಿ.ಎಸ್, ೧೯೯೧, ಲಕ್ಷ್ಮೀಮುದ್ರಣಾಲಯ.

೪೪. ‘ತ.ರಾ.ಸು ·ಬದುಕು ಬರಹ’, ಸಂ. ಶಾ.ಮಂ.ಕೃಷ್ಣರಾಯ, ವಿಶ್ವಭಾರತಿ ಪ್ರಕಾಶನ(ಗೋವಾ) ೧೯೮೨.

೪೫. ‘ವರಲೇಖಕ’, ತ.ಶಾ.ಛಾಯಾಪತಿ, ಸಂಜಯ್ ಪ್ರಿಂಟರ್ಸ್.

೪೬. ‘ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕ ಮತ್ತು ಪರಂಪರೆ, ತೌಲನಿಕ ಅಧ್ಯಯನ, ನಟರಾಜ್ ಹುಳಿಯಾರ್, ಪ್ರಸಾರಂಗ, ಕನ್ನಡ ವಿಶ್ವವಿದ್ಯಾನಿಲಯ.

೪೭. ‘ನಿರಂಜನ-ನಡೆ ಚೆನ್ನ-ನುಡಿಚೆನ್ನ(ವ್ಯಕ್ತಿ ಚಿತ್ರಗಳು)-ಸಂಕಲನ ವಿ.ಬಿ.ಮೊಳೆಯಾರ, ಲಲಿತ ಪ್ರಕಾಶನ ಪುತ್ತೂರು ದಕ್ಷಿಣ ಕನ್ನಡ.

೪೮. 'ಸ್ವರೂಪ, ಕೆಲವು ಕನ್ನಡ ಕೃತಿಗಳ ಅಧ್ಯಯನ', ಸಿ.ಎನ್.ರಾಮಚಂದ್ರನ್.

೪೯. 'ಸಾಹಿತ್ಯ ಸನ್ನಧಿ', ವಿಮರ್ಶಾತ್ಮ ಲೇಖನಗಳು, ಎನ್.ಎಸ್ ಲಕ್ಷ್ಮೀನಾರಯಣ ಭಟ್ಟ, ವಸಂತ ಪ್ರಕಾಶನ, ಬೆಂಗಳೂರು.

೫೦. 'ಗಿರಿಮಲ್ಲಿಗೆ' (ತ.ರಾ.ಸು ಸಂಸ್ಮರಣ ಸಂಪುಟ), ಎಚ್.ಶ್ರೀಶೈಲಆರಾಧ್ಯ, ಸಾಹಿತ್ಯ ಬಂಡಾರ ಹುಬ್ಬಳ್ಳಿ.

೫೧. 'ಭಾರತೀಯ ಸಾಹಿತ್ಯ ಸಮೀಕ್ಷೆ (ಸಂಪುಟ–೧), ಎಲ್.ಎಸ್ ಶೇಷಗಿರಿರಾವ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಳ್ಳಿಹಬ್ಬದ ಪ್ರಕಟಣೆ.

೫೨. 'ಹೊಸಗನ್ನಡ ಸಾಹಿತ್ಯ ಚರಿತ್ರೆ', ಎಲ್.ಎಸ್ ಶೇಷಗಿರಿರಾವ್.

೫೩. 'ಸಾಹಿತ್ಯ ವಾರ್ಷಿಕ'(೧೯೭೧), ಸಂ.ಜಿ.ಎಸ್ ಶಿವರುದ್ರಪ್ಪ.